ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 27 ಸೋಮವಾರ 2023

ಸಂಪುಟ: 44 | ಸಂಚಿಕೆ: 220 | ಪುಟಗಳು: 10

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871


ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.cor..

ಗೊಮ್ಮಟಗಿರಿಯ ಬಾಹುಬಲಿಗೆ ವರ್ಣರಂಜಿತ ಮಹಾ ಮಸ್ತಕಾಭಿಷೇಕ


ಮೈಸೂರು, ನ.26(ಜಿಎ)–ರಾಜ್ಯದ ಪವಿತ್ರ ಜೈನ ಕ್ಷೇತ್ರಗಳಲ್ಲಿ ಒಂದಾಗಿರುವ ಹುಣಸೂರು ತಾಲೂಕಿನ ಬಿಳಿಕೆರೆ ಹೋಬಳಿಯ ಗೊಮ್ಮಟಗಿರಿಯಲ್ಲಿ ವಿರಾಜಮಾನವಾಗಿ ನಿಂತಿರುವ ಬಾಹುಬಲಿ ಸ್ವಾಮಿಗೆ ಭಾನುವಾರ 74ನೇ ವರ್ಷದ ಮಹಾ ಮಸ್ತಕಾಭಿಷೇಕ ವಿಜೃಂಭಣೆಯಿಂದ ಜರುಗಿತು.

ಶಿವಮೊಗ್ಗ ಜಿಲ್ಲೆಯ ಹೊಂಬುಜ ಜೈನ ಮಠದ ಡಾ.ದೇವೇಂದ್ರ ಕೀರ್ತಿ ಭಟ್ಟಾರಕ ಸ್ವಾಮೀಜಿ, ಭುವನ ಕೀರ್ತಿ ಭಟ್ಟಾರಕ ಸ್ವಾಮೀಜಿ, ಭಾನುಕೀರ್ತಿ ಭಟ್ಟಾರಕ ಸ್ವಾಮೀಜಿ, ಸಿದ್ದಾಂತ ಭಟ್ಟಾರಕ ಸ್ವಾಮೀಜಿ ಮತ್ತು ವರೂರು ಧರ್ಮಸೇನ ಭಟ್ಟಾರಕ ಸ್ವಾಮೀಜಿ ಸಾನ್ನಿಧ್ಯದಲ್ಲಿ ಮಹಾಮಸ್ತಕಾಭಿಷೇಕವು ವಿಜೃಂಭಣೆಯಿಂದ ನೆರವೇರಿತು.

ಧಾರ್ಮಿಕ ವಿಧಿ ವಿಧಾನಗಳ ನಂತರ ಗೊಮ್ಮಟಗಿರಿ ಬೆಟ್ಟದ ಮೇಲಿನ 18 ಅಡಿ ಎತ್ತರದ ಬಾಹುಬಲಿಸ್ವಾಮಿ ಮೂರ್ತಿಗೆ ಭಕ್ತರು ನಾನಾ ಅಭಿಷೇಕ ನೆರವೇರಿಸಿದರು. ಗೊಮ್ಮಟೇಶ್ವರನಿಗೆ ಮೊದಲಿಗೆ ಜಲಾಭಿಷೇಕ, ಬಳಿಕ ಎಳನೀರು, ಕಬ್ಬಿನ ಹಾಲು, ಅರಿಶಿನ, ಚಂದನ, ಕ್ಷೀರ, ಕಂಕಚೂರ್ಣ, ಅರಳು, ಸಕ್ಕರೆಪುಡಿ, ಅಕ್ಕಿ ಹಿಟ್ಟು, ಜೇನುತುಪ್ಪ, ಶ್ರೀಗಂಧ, ಹೀಗೆ ವಿವಿಧ ಕಷಾಯಾಭಿಷೇಕ ಸೇರಿದಂತೆ ಒಟ್ಟು 18 ಬಗೆಯ ಅಭಿಷೇಕಗಳನ್ನು ನೆರವೇರಿಸಲಾಯಿತು.









ಪ್ರತಿ ಅಭಿಷೇಕವನ್ನೂ ಕಣ್ತುಂಬಿಕೊಂಡ ಭಕ್ತರು 'ವಿರಾಟ್ ಯೋಗಿ ಬಾಹುಬಲಿ ಮಹಾರಾಜ್ ಕೀ ಜೈ' ಎನ್ನುತ್ತಾ ಜಯಘೋಷ ಮೊಳಗಿಸಿದರು.

ರಾಜ್ಯದ ವಿವಿಧೆಡೆಗಳಿಂದ ಭಕ್ತರು ಹಾಗೂ ಸುತ್ತಮುತ್ತಲ ಗ್ರಾಮಗಳಿಂದ ಸಾವಿರಾರು ಮಂದಿ ಗ್ರಾಮಸ್ಥರು ಮಸ್ತಕಾಭಿಷೇಕವನ್ನು ಕಣ್ತುಂಬಿಕೊಂಡರು.

ಗೊಮ್ಮಟಗಿರಿ ಕ್ಷೇತ್ರದ ಸೇವಾ ಸಮಿತಿಯ ಅಧ್ಯಕ್ಷ ಎಸ್.ಡಿ.ಮನ್ಮಥ್ ರಾಜ್, ಕಾರ್ಯದರ್ಶಿ ಪದ್ಮರಾಜಯ್ಯ, ಖಜಾಂಚಿ ರಾಜೇಶ್, ಪೂಜಾ ಸಮಿತಿ ಅಧ್ಯಕ್ಷ ಸಂತೋಷ್ ಮತ್ತಿತರ ಮುಖಂಡರ ನೇತೃತ್ವದಲ್ಲಿ ಸಕಲ ಧಾರ್ಮಿಕ ಕಾರ್ಯಗಳು ಹಾಗೂ ಮಸ್ತಕಾಭಿಷೇಕ ಜರುಗಿತು. ಮಹಾಮಸ್ತಕಾಭಿಷೇಕಕ್ಕೂ ಮೊದಲಿಗೆ ಸ್ವಾಮೀಜಿ ಹಾಗೂ ಕ್ಷುಲಿಕಾ ಶ್ರೀವಿನಯ ಶ್ರೋಮಾತಾಜಿ ಆಶೀರ್ವಚನ ನೀಡಿದರು. ಮಸ್ತಕಾಭಿಷೇಕಕ್ಕೆ ಬಂದಿದ್ದ ಭಕ್ತರಿಗೆ ದಾನಿಗಳು ಅನ್ನ ಸಂತರ್ಪಣೆ ನಡೆಸಿಕೊಟ್ಟರು.

ಈ ವೇಳೆ ಬಿಳಿಕೆರೆ ಠಾಣೆಯಿಂದ ಬಂದೋಬಸ್ತ್ ಏರ್ಪಡಿಸಲಾಗಿತ್ತು. ಈ ವೇಳೆ ಸ್ವಾಮೀಜಿಗಳು ಧಾರ್ಮಿಕ ಸಭೆ ನಡೆಸಿ, ಕ್ಷೇತ್ರದಲ್ಲಿ ಗೊಮ್ಮಟಗಿರಿ ಕ್ಷೇತ್ರದ ಸೇವಾ ಸಮಿತಿ ವತಿಯಿಂದ ನಿರ್ಮಿಸಿರುವ ನೂತನ ಕಟ್ಟಡ ಮತ್ತು ಶೌಚಾಲಯಗಳನ್ನು ಲೋಕಾರ್ಪಣೆಗೊಳಿಸಿ, ಸಮುದಾಯ ಭವನ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಿದರು.

ಆಯುಷ್ಮಾನ್ ಭಾರತ್ ಆರೋಗ್ಯ, ಸ್ವಾಸ್ಥ್ಯ ಕೇಂದ್ರಗಳ ಹೆಸರು ಮರುನಾಮಕರಣ

ನವದೆಹಲಿ: ಆಯುಷ್ಮಾನ್ ಭಾರತ್–ಆರೋಗ್ಯ ಮತ್ತು ಸ್ವಾಸ್ಥ್ಯ ಕೇಂದ್ರಗಳ ಹೆಸರನ್ನು 'ಆಯುಷ್ಮಾನ್ ಆರೋಗ್ಯ ಮಂದಿರ' ಎಂದು ಮರುನಾಮಕರಣ ಮಾಡಲು ಕೇಂದ್ರ ಸರ್ಕಾರ ನಿರ್ಧರಿಸಿದೆ.

ಮರುನಾಮಕರಣ ಪ್ರಕ್ರಿಯೆಯನ್ನು ಜಾರಿಗೆ ತರಲು ಕೇಂದ್ರ ಆರೋಗ್ಯ ಸಚಿವಾಲಯ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಪತ್ರವೊಂದನ್ನು ಕಳುಹಿಸಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಆಯುಷ್ಮಾನ್ ಭಾರತ್–ಆರೋಗ್ಯ ಮತ್ತು ಸ್ವಾಸ್ಥ್ಯ ಕೇಂದ್ರಗಳ ಪೋರ್ಟಲ್‌ನಲ್ಲಿ ಮರುನಾಮಕರಣ ಮಾಡಲಾದ ಪ್ರಾಥಮಿಕ ಆರೋಗ್ಯ ಸೌಲಭ್ಯಗಳ ಛಾಯಾಚಿತ್ರಗಳನ್ನು ಅಪ್‌ಲೋಡ್ ಮಾಡಲು ರಾಜ್ಯಗಳಿಗೆ ಸೂಚಿಸಲಾಗಿದೆ ಎಂದು ಮೂಲಗಳು ಹೇಳಿವೆ.

ಮರುನಾಮಕರಣ ಮಾಡಲಾದ ಭಾರತ್ ಆರೋಗ್ಯ, ಸ್ವಾಸ್ಥ್ಯ ಕೇಂದ್ರಗಳು 'ಆರೋಗ್ಯಂ ಪರ್ಮಂ ಧನಮ್'– ಎಂಬ ಟ್ಯಾಗ್ ಲೈನ್ ಕೂಡಾ ಹೊಂದಿವೆ.

ಮನ್ ಕೀ ಬಾತ್‌ನಲ್ಲಿ ಚಾಮರಾಜನಗರ ತಾಲೂಕು ಉಮ್ಮತ್ತೂರಿನ

ವರ್ಷಾ ಸಾಧನೆ



ಉಮ್ಮತ್ತೂರು ವರ್ಷಾ

■ ಬಾಳೆದಿಂಡಿನಿಂದ ಕರಕುಶಲ ವಸ್ತುಗಳು, ತಿನಿಸುಗಳನ್ನು ತಯಾರಿಸಿ ಮಾರಾಟ ಮಾಡುತ್ತಿರುವ ಎಂ.ಟೆಕ್ ಪದವೀಧರೆ ■ ಇ–ಶಾಪಿಂಗ್ ತಾಣಗಳ ಮೂಲಕವೂ ಉತ್ಪನ್ನಗಳಿಗೆ ಮಾರುಕಟ್ಟೆ ■ ಮನ್ ಕೀ ಬಾತ್ ಪ್ರೇರಣೆಯಿಂದ ಉದ್ದಿಮೆ ಆರಂಭಿಸಿದ ವರ್ಷಾ



"ಹೆಮ್ಮೆ ಎನಿಸುತ್ತೆ..!

ಚಾಮರಾಜನಗರದ ಉಮ್ಮತ್ತೂರಿನಲ್ಲಿ ನಾನು ಮಾಡುತ್ತಿರುವ ಕೆಲಸವನ್ನು ಪ್ರಧಾನಿ ಮೋದಿಯವರು ಗುರುತಿಸಿ ಪ್ರಸ್ತಾಪಿಸಿದ್ದು ಹೆಮ್ಮೆ ಎನಿಸುತ್ತಿದೆ. ನಾನು ಎಂ.ಟೆಕ್ ಪದವೀಧರೆ. ಬಾಳೆ ನಾರು ಹಾಗೂ ದಿಂಡಿನಿಂದ ವಿವಿಧ ವಸ್ತುಗಳನ್ನು ತಯಾರಿಸಲು ಆರಂಭಿಸಿದೆ. ಮೇಳಗಳು, ಸಾವಯವ ಮಳಿಗೆಗಳಲ್ಲಿ ನಮ್ಮ ವಸ್ತುಗಳನ್ನು ಮಾರಾಟ ಮಾಡಲಾಗುತ್ತಿದೆ. ಅಲ್ಲದೇ ಆನ್‌ಲೈನ್ ಶಾಪಿಂಗ್‌ನಲ್ಲೂ ಕೂಡ ನಮ್ಮ ಉತ್ಪನ್ನಗಳಿಗೆ ಬೇಡಿಕೆ ಇದೆ. ಪತಿ ಶ್ರೀಕಂಠಸ್ವಾಮಿ ಸಹಕಾರದೊಂದಿಗೆ ಉಮ್ಮತ್ತೂರಿನ ನಮ್ಮ ಜಮೀನಿನಲ್ಲಿ ಒಂದೂವರೆ ವರ್ಷದ ಹಿಂದೆ ಪುಟ್ಟ ಘಟಕ ಆರಂಭಿಸಿದೆ. ಈಗ ಐವರು ಮಹಿಳೆಯರು ಇಬ್ಬರು ಪುರುಷರಿಗೆ ಉದ್ಯೋಗವನ್ನೂ ನೀಡಿದ್ದೇನೆ. ಬಾಳೆಗೊನೆ ಕಟಾವಿನ ನಂತರ ತ್ಯಾಜ್ಯ ಎಂದು ಎಸೆಯಲಾಗುವ ಬಾಳೆದಿಂಡಿನಿಂದ ವಿವಿಧ ವಸ್ತುಗಳನ್ನು ತಯಾರಿಸುತ್ತಿದ್ದೇನೆ. ಈ ನನ್ನ ಕಾರ್ಯಕ್ಕೆ ಪ್ರಧಾನಿ ಮೋದಿಯವರ ಮನ್ ಕೀ ಬಾತ್ ಕಾರ್ಯಕ್ರಮವೇ ಪ್ರೇರಣೆ. ನನ್ನ ಕೆಲಸವನ್ನು ಅವರು ಗುರುತಿಸುತ್ತಾರೆ ಎಂದು ನಾನು ನಿರೀಕ್ಷಿಸಿರಲಿಲ್ಲ.

■ ವರ್ಷಾ, ಉಮ್ಮತ್ತೂರು.



ನವದೆಹಲಿ, ನ.26–ಪ್ರಧಾನಿ ನರೇಂದ್ರ ಮೋದಿಯವರು ತಮ್ಮ ಮನ್ ಕೀ ಬಾತ್‌ನ ಇಂದಿನ (ಭಾನುವಾರ) ಆವೃತ್ತಿಯಲ್ಲಿ ಬಾಳೆದಿಂಡಿನಿಂದ ಗೊಬ್ಬರ, ಅದರ ನಾರಿನಿಂದ ವಿವಿಧ ಕರಕುಶಲ ವಸ್ತುಗಳನ್ನು ತಯಾರಿಸುತ್ತಿರುವ ಚಾಮರಾಜನಗರ ಜಿಲ್ಲೆಯ ಉಮ್ಮತ್ತೂರು ಗ್ರಾಮದ ವರ್ಷಾ ಅವರ ಹೆಸರನ್ನು ಪ್ರಸ್ತಾಪಿಸಿ, ಅವರು ಮಾಡುತ್ತಿರುವ ಕೆಲಸವನ್ನು ಶ್ಲಾಘಿಸಿದ್ದಾರೆ.

'ವೋಕಲ್ ಫಾರ್ ಲೋಕಲ್' (ಸ್ಥಳೀಯ ಉತ್ಪನ್ನಗಳಿಗೆ ನಾವು ದನಿಯಾಗಬೇಕು) ಭಾರತದಲ್ಲಿ ಯಶಸ್ವಿಯಾಗಿದ್ದು, ಸಮೃದ್ಧ ಭಾರತಕ್ಕೆ ಬಾಗಿಲು ತೆರೆಯುತ್ತಿದೆ. ಮನ್ ಕೀ ಬಾತ್ ಕಾರ್ಯಕ್ರಮ ಹಲವರಿಗೆ ಪ್ರೇರಣೆಯಾಗಿದೆ. ಅದೇ ಪ್ರೇರಣೆಯಿಂದ ಚಾಮರಾಜನಗರ ಜಿಲ್ಲೆಯ ಉಮ್ಮತ್ತೂರು ಗ್ರಾಮದ ವರ್ಷಾ ಎಂಬುವರು ಬಾಳೆದಿಂಡಿನಿಂದ ಗೊಬ್ಬರ ತಯಾರಿಸಲು ಆರಂಭಿಸಿದರು. ಪ್ರಕೃತಿಯ ಬಗ್ಗೆ

● 8ನೇ ಪುಟಕ್ಕೆ

" 'ಮನ್ ಕೀ ಬಾತ್' ಅಸಂಖ್ಯಾತ ಜನರನ್ನು ಸಂಪತ್ತಿನ ಸೃಷ್ಟಿಕರ್ತರಾಗುವಂತೆ ಪ್ರೇರೇಪಿಸಿದೆ. ಈ ಕಾರ್ಯಕ್ರಮದಿಂದ ಪ್ರೇರಿತರಾಗಿ ಬಾಳೆಹಣ್ಣು ತಿರುಳಿನ ವ್ಯಾಪಾರವನ್ನು ಆರಂಭಿಸಿದ ಚಾಮರಾಜನಗರದ ವರ್ಷಾ ಅವರದು ಅಂತಹ ಒಂದು ಪ್ರಯತ್ನವಾಗಿದೆ. –ನರೇಂದ್ರ ಮೋದಿ, ಪ್ರಧಾನಿ



ಬಿಜೆಪಿ ಕಾರ್ಯಕರ್ತರ ನೆರವಿಗೆ ಕಂಟ್ರೋಲ್ ರೂಂ

ಬೆಂಗಳೂರು,ನ.26–ಪ್ರತಿಪಕ್ಷ ಬಿಜೆಪಿ ಕಾರ್ಯಕರ್ತರು ಮತ್ತು ಮುಖಂಡರನ್ನು ಗುರಿಯಾಗಿಸಿಕೊಂಡು ಪೊಲೀಸರು ಕಿರುಕುಳ ನೀಡುತ್ತಿರುವ ಬಗ್ಗೆ ದೂರುಗಳನ್ನು ಸ್ವೀಕರಿಸಲು ರಾಜ್ಯ ಹಾಗೂ ಜಿಲ್ಲೆಗಳ ಪಕ್ಷದ ಕಚೇರಿಗಳಲ್ಲಿ ಕಂಟ್ರೋಲ್ ರೂಂಗಳನ್ನು ತೆರೆಯಲಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದ್ದಾರೆ.



ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕಲು, ಕಾನೂನು ಪೊಲೀಸರಿಗೆ ಅಧಿಕಾರ ನೀಡಿಲ್ಲ. ಈ ನಿಟ್ಟಿನಲ್ಲಿ ರಾಜ್ಯದ ಯಾವುದೇ ಮೂಲೆಯಲ್ಲೂ ನಮ್ಮ ಕಾರ್ಯಕರ್ತರಿಗೆ ತೊಂದರೆ, ಬೆದರಿಕೆ, ಕಿರುಕುಳಗಳು ಎದುರಾದರೆ ಅವರ ನೆರವಿಗೆ ಪಕ್ಷ ತಕ್ಷಣ ಬರಲಿದೆ ಎಂದು ವಿಜಯೇಂದ್ರ ತಿಳಿಸಿದ್ದಾರೆ.

● 8ನೇ ಪುಟಕ್ಕೆ

ಸಾಲ ಬಾಧೆ, ನೆರೆಹೊರೆಯವರ ಹಿಂಸೆ ಒಂದೇ ಕುಟುಂಬದ ಐವರ ಆತ್ಮಹತ್ಯೆ

- ತುಮಕೂರಿನ ಸದಾಶಿವನಗರ ಬಡಾವಣೆಯಲ್ಲಿ ದುರ್ಘಟನೆ
- ಮೂವರು ಮಕ್ಕಳನ್ನು ಕೊಂದು ನೇಣಿಗೆ ಶರಣಾದ ದಂಪತಿ
- ಡೆತ್‌ನೋಟ್, ವೀಡಿಯೋ ಹೇಳಿಕೆ ಆಧರಿಸಿ ಕ್ರಮ: ಎಸ್ಪಿ

ತುಮಕೂರು, ನ.26–ಸಾಲ ಬಾಧೆ ಹಾಗೂ ನೆರೆಹೊರೆಯವರ ಹಿಂಸೆಯಿಂದಾಗಿ ಡೆತ್‌ನೋಟ್ ಬರೆದಿಟ್ಟು ಒಂದೇ ಕುಟುಂಬದ ಐವರು ಆತ್ಮಹತ್ಯೆಗೆ ಶರಣಾದ ಘಟನೆ ತುಮಕೂರಿನ ಸದಾಶಿವನಗರದಲ್ಲಿ ನಡೆದಿದೆ.



ಸದಾಶಿವನಗರದ ಮನೆ ಮುಂದೆ ಜಮಾಯಿಸಿದ ಜನರು.

ಮೂಲತಃ ಲಕ್ಕನಹಳ್ಳಿ ಗ್ರಾಮದವರಾಗಿದ್ದು, ಕಳೆದ ಒಂದು ವರ್ಷದಿಂದ ತುಮಕೂರಿನ ಬಾಡಿಗೆ ಮನೆಯಲ್ಲಿ ವಾಸವಿದ್ದು, ಕಬಾಬ್ ಅಂಗಡಿ ನಡೆಸುತ್ತಿದ್ದ ಗರೀಬ್ ಸಾಬ್ (32), ಪತ್ನಿ ಸುಮಯ್ಯ(30), ಪುತ್ರಿ ಹಾಜೀರಾ(14), ಪುತ್ರರಾದ ಮಹಮ್ಮದ್ ಸುಬಾನ್(10) ಮತ್ತು ಮಹಮ್ಮದ್ ಮುನೀರ್(8) ದುರಂತ ಸಾವನ್ನಪ್ಪಿದವರು.

ಗರೀಬ್ ಸಾಬ್ ಮತ್ತು ಅವರ ಪತ್ನಿ ಸುಮಯ್ಯ ನೇಣಿಗೆ ಶರಣಾಗಿದ್ದರೆ, ಮೂವರು ಮಕ್ಕಳನ್ನು ಕತ್ತು ಕೊಯ್ದು ಹತ್ಯೆ ಮಾಡಲಾಗಿದೆ. ಆತ್ಮಹತ್ಯೆಗೂ ಮುನ್ನ ಈ ದಂಪತಿಯೇ ಮಕ್ಕಳನ್ನು ಹತ್ಯೆಗೈದಿದ್ದಾರೆ. ನೇಣಿಗೆ ಶರಣಾಗುವ ಮುನ್ನ ಡೆತ್ ನೋಟ್ ಬರೆದಿರುವುದು ಮಾತ್ರವಲ್ಲದೆ, ಸಂಬಂಧಿಕರಿಗೆ ವೀಡಿಯೋ ಮೆಸೇಜ್ ಕೂಡ ದಂಪತಿ ರವಾನಿಸಿದ್ದಾರೆ. ಊರಿನಲ್ಲಿ ತನ್ನ ಹೆಂಡತಿಯ ಅಣ್ಣ ಸಾದಿಕ್, ತಂಗಿ ಯಾಸಿನ್ ನಮ್ಮ ಮೇಲೆ ವಿಷ

● 8ನೇ ಪುಟಕ್ಕೆ

ಹೆಡಿಯಾಲ ಬಳಿ ಹುಲಿ ಕಾರ್ಯಾಚರಣೆ: ಕ್ಯಾಮರಾ ಟ್ರಾಕ್‌ನಲ್ಲಿ 2 ಹುಲಿಗಳ ಪ್ರತ್ಯಕ್ಷ


● ಎರಡರಲ್ಲಿ ಮಹಿಳೆ ಬಲಿ ಪಡೆದ ಹುಲಿ ಗುರುತಿಸಿದ ಅರಣ್ಯ ಸಿಬ್ಬಂದಿ ● ಎರಡು ಪ್ರತ್ಯೇಕ ಸ್ಥಳದಲ್ಲಿ ಹಸು ಬಲಿ ಪಡೆದ ಹುಲಿ ● ಹುಲಿ ಘರ್ಜನೆ ಜಾಡು ಹಿಡಿದು ಟ್ರಾಕ್ ಪತ್ತೆ ಹಚ್ಚಿದ ಸಿಬ್ಬಂದಿ

ಮೈಸೂರು,ನ.26(ಎಂಟಿವೈ)–ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಹೆಡಿಯಾಲ ವಲಯದಲ್ಲಿ ಮಹಿಳೆ ಬಲಿ ಪಡೆದ ಹುಲಿ ಪತ್ತೆಗೆ ಕಾರ್ಯಾಚರಣೆ ಮುಂದುವರೆದಿದ್ದು, ಅರಣ್ಯ ಇಲಾಖೆ ಅಳವಡಿಸಿದ್ದ ಕ್ಯಾಮರಾದಲ್ಲಿ ಎರಡು ಹುಲಿಗಳ ಚಲನ–ವಲನದ ದೃಶ್ಯ ದಾಖಲಾಗಿದೆ.

ನಂಜನಗೂಡು ತಾಲೂಕು ಬಳ್ಳೂರು ಹುಂಡಿ ಗ್ರಾಮದ ಜಮೀನಿನಲ್ಲಿ ಜಾನುವಾರು ಮೇಯಿಸುತ್ತಿದ್ದ ರತ್ನಮ್ಮ ಎಂಬುವರನ್ನು ನ.24ರಂದು ಮಧ್ಯಾಹ್ನ 3 ಗಂಟೆಯಲ್ಲಿ ಹುಲಿ ದಾಳಿ ನಡೆಸಿ ಹತ್ಯೆಗೈದಿತ್ತು. ಈ ಹಿನ್ನೆಲೆಯಲ್ಲಿ ಕಾರ್ಯಾಚರಣೆಯನ್ನು ಆರಂಭಿಸಿದ ಅರಣ್ಯ ಸಿಬ್ಬಂದಿ, 3 ಸಾಕಾನೆ, 300ಕ್ಕೂ ಹೆಚ್ಚು ಸಿಬ್ಬಂದಿ, 50 ಕ್ಯಾಮರಾ ಟ್ರಾಪ್, ಒಂದು ಡ್ರೋನ್ ಹಾಗೂ 5 ಜಿಸಿಎಂ ಕ್ಯಾಮರಾ ಬಳಸಿ ಹುಲಿ ಸೆರೆಗೆ ಪಣ ತೊಟ್ಟಿದ್ದರು. ಮಹಿಳೆ ಮೇಲೆ ದಾಳಿ ನಡೆಸಿದ ಸ್ಥಳ, ಕಳೆದ ವಾರ ಜಾನುವಾರು ಬಲಿ ಪಡೆದ ಸ್ಥಳ, ಮಹಿಳೆಯ ಮೃತದೇಹ ಹೊತ್ತೊಯ್ದಿದ್ದ ಸ್ಥಳ ಸೇರಿದಂತೆ ಆಯಕಟ್ಟಿನ ಸ್ಥಳದಲ್ಲಿ 50 ಕ್ಯಾಮರಾ ಟ್ರಾಪ್ ಅಳವಡಿಸಿ, ಮಹಿಳೆ ಬಲಿ ಪಡೆದ ಹುಲಿಯ ಜಾಡು ಪತ್ತೆಗೆ ಅರಣ್ಯ ಇಲಾಖೆ ಮುಂದಾಗಿತ್ತು.

ಕಾರ್ಯಾಚರಣೆಯ ಮೊದಲ ದಿನವೇ ಅರಣ್ಯ ಇಲಾಖೆ ಒಂದು ಹಂತದ ಯಶಸ್ಸು ಕಂಡಿದ್ದು, ಕ್ಯಾಮರಾ ಟ್ರಾಪ್‌ನಲ್ಲಿ ದಾಖಲಾಗಿರುವ ದೃಶ್ಯಗಳನ್ನು ಪರಿಶೀಲಿಸಿದಾಗ ಎರಡು ಪ್ರತ್ಯೇಕ ಸ್ಥಳಗಳಲ್ಲಿ ಹುಲಿಗಳೆರಡು

● 8ನೇ ಪುಟಕ್ಕೆ





" ಎರಡನೇ ದಿನದ ಕಾರ್ಯಾಚರಣೆಯಲ್ಲಿ ಹುಲಿಯ ಟ್ರಾಕ್ ಪತ್ತೆ ಹಚ್ಚಲಾಗಿದೆ. ಎರಡು ಪ್ರತ್ಯೇಕ ಸ್ಥಳಗಳಲ್ಲಿ ಹುಲಿಯು ಜಾನುವಾರು ಬೇಟೆಯಾಡಿದೆ. ಅದರಲ್ಲಿ ಮಹಿಳೆ ಮೇಲೆ ದಾಳಿ ನಡೆಸಿದ ಹುಲಿಯನ್ನು ಗುರುತಿಸಿದ್ದು, ಸುರಕ್ಷಿತವಾಗಿ ಸೆರೆ ಹಿಡಿಯಲಾಗುವುದು. 207 ಸಿಬ್ಬಂದಿ, 100 ಮಂದಿ ಬುಡಕಟ್ಟು ಸಮುದಾಯದ ಪರಿಣತರನ್ನು ಬಳಸಿಕೊಳ್ಳಲಾಗಿದೆ. ಕಾಡಂಚಿನ ಜನರ ಹಿತಕ್ಕಾಗಿ ರಾತ್ರಿಯಿಡೀ ಕಾರ್ಯಾಚರಣೆ ಮುಂದುವರೆಸಲಾಗಿದೆ. –ಡಾ.ಪಿ.ರಮೇಶ್‌ಕುಮಾರ್, ನಿರ್ದೇಶಕ, ಹುಲಿ ಸಂರಕ್ಷಿತ ಪ್ರದೇಶ

ಬೋನಿಗೆ ಬಿದ್ದ ಚಿರತೆ

ಮೈಸೂರು,ನ.26(ಎಂಟಿವೈ)–ಮೈಸೂರು ತಾಲೂಕಿನ ವರುಣ ಹೋಬಳಿಯ ಮೊಸಂಬಾಯನಹಳ್ಳಿ ಜಮೀನೊಂದರಲ್ಲಿ ಅರಣ್ಯ ಇಲಾಖೆ ಇಟ್ಟಿದ್ದ ಬೋನಿಗೆ ಮೂರು ವರ್ಷದ ಹೆಣ್ಣು ಚಿರತೆ ಸೆರೆ ಸಿಕ್ಕಿದೆ.



ಮೊಸಂಬಾಯನಹಳ್ಳಿ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳಲ್ಲಿ ಚಿರತೆ ಉಪಟಳ ಇರುವ ಸಂಬಂಧ ಸ್ಥಳೀಯರು ಅರಣ್ಯ ಇಲಾಖೆಗೆ ದೂರು ನೀಡಿದ್ದರು. ಈ ಹಿನ್ನೆಲೆಯಲ್ಲಿ ಜಮೀನೊಂದರಲ್ಲಿ ಬೋನನ್ನು ಇಟ್ಟು ಚಿರತೆ ಸೆರೆಗೆ ಕ್ರಮ ಕೈಗೊಳ್ಳಲಾಗಿತ್ತು. ಆಹಾರ ಅರಸಿ ಇಂದು ಮುಂಜಾನೆ ಬಂದ ಹೆಣ್ಣು ಚಿರತೆ ಬೋನಿನಲ್ಲಿದ್ದ ಕೋಳಿ ಬೇಟೆಯಾಡಲು ಪ್ರಯತ್ನಿಸಿ ಸೆರೆ ಸಿಕ್ಕಿದೆ. ಇದರಿಂದ ಸ್ಥಳೀಯರು ನಿಟ್ಟುಸಿರು ಬಿಡುವಂತಾಗಿದೆ. ಬೋನಿಗೆ ಚಿರತೆ ಬಿದ್ದಿರುವ ವಿಷಯ ಅರಿತು ಸ್ಥಳಕ್ಕೆ ಆಗಮಿಸಿದ ಅರಣ್ಯ ಸಿಬ್ಬಂದಿ ತಂಡ ಬೋನನ್ನು ವಶಕ್ಕೆ ಪಡೆದು ಚಿರತೆಯ ಆರೋಗ್ಯ ತಪಾಸಣೆ ನಡೆಸಿ ಮೈಕ್ರೋಚಿಪ್ ಅಳವಡಿಸಿ ಕಿವಿಗೆ ಗುರುತು ಮಾಡಿ ಅರಣ್ಯ ಪ್ರದೇಶದಲ್ಲಿ ಬಿಡುಗಡೆ ಮಾಡಿದ್ದಾರೆ.

ಇಂದು ಸಿಎಂ ಜನತಾ ದರ್ಶನ



ಬೆಂಗಳೂರು,ನ.26–ಈಗಾಗಲೇ ಕೆಲವು ಬಾರಿ ಜನತಾ ದರ್ಶನ ನಡೆಸಿ ಸಾರ್ವಜನಿಕರ ಕುಂದುಕೊರತೆಗಳನ್ನು ಆಲಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಇದೀಗ ಲೋಕಸಭೆ ಚುನಾವಣೆಗೂ ಮುನ್ನ ಮತ್ತೊಮ್ಮೆ ಜನರನ್ನು ತಲುಪಲು ಮುಂದಾಗಿದ್ದಾರೆ. ನ.27ರಂದು (ಸೋಮವಾರ) ಸಿದ್ದರಾಮಯ್ಯ ಬೆಂಗಳೂರಿನಲ್ಲಿರುವ ಮುಖ್ಯಮಂತ್ರಿಗಳ ಅಧಿಕೃತ ನಿವಾಸದಲ್ಲಿ ಒಂದು ದಿನದ ಜನತಾ ದರ್ಶನ ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ.

ಕೆಲ ದಾಖಲೆಗಳನ್ನು ಒಯ್ಯುವುದು ಅಗತ್ಯ

ಈ ವಿಚಾರವಾಗಿ ಕರ್ನಾಟಕ ಸರ್ಕಾರದ ಮಾಹಿತಿ ಮತ್ತು ಪ್ರಸಾರ ಸಚಿವಾಲಯ ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿಯೂ ಮಾಹಿತಿ ನೀಡಿದೆ. ಬೆಂಗಳೂರಿನ ಕುಮಾರಕೃಪಾ ರಸ್ತೆಯಲ್ಲಿರುವ ಗೃಹ ಕಚೇರಿ ಕೃಷ್ಣಾದಲ್ಲಿ ನ.27ರಂದು ಸಿದ್ದರಾಮಯ್ಯ ಸಾರ್ವಜನಿಕರ ಕುಂದುಕೊರತೆ ಆಲಿಸಲಿದ್ದಾರೆ. ಜನತಾ ದರ್ಶನದಲ್ಲಿ ಅಹವಾಲು ಸಲ್ಲಿಸಲು ಆಗಮಿಸುವ ನಾಗರಿಕರು ತಮ್ಮ ಗುರುತಿನ ಪತ್ರಗಳಾದ ಆಧಾರ್ ಕಾರ್ಡ್ ಅಥವಾ ಪಡಿತರ ಚೀಟಿ ತರಲು ಕೋರಲಾಗಿದೆ ಎಂದು ಎಕ್ಸ್‌ನಲ್ಲಿ ಸಚಿವಾಲಯ ಉಲ್ಲೇಖಿಸಿದೆ.

ಜನತಾ ದರ್ಶನದ ಬಗ್ಗೆ ಮುಖ್ಯಮಂತ್ರಿಗಳ ಹೆಚ್ಚುವರಿ ಕಾರ್ಯದರ್ಶಿಗಳು ಈಗಾಗಲೇ ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯಿತಿ ಸಿಇಒಗಳಿಗೆ ಪತ್ರ ಬರೆದಿದ್ದಾರೆ. ಜನತಾ ದರ್ಶನದ ವೇಳೆಯೇ ಮುಖ್ಯಮಂತ್ರಿಗಳು ಜಿಲ್ಲಾ, ತಾಲೂಕು ಪಂಚಾಯಿತಿ ಅಧಿಕಾರಿಗಳಿಗೆ ಸಮಸ್ಯೆ ನಿವಾರಣೆಗೆ ಸೂಚನೆ ನೀಡುವ ಸಾಧ್ಯತೆ ಇದೆ. ಹೀಗಾಗಿ ನವೆಂಬರ್ 27ರಂದು ಎಲ್ಲ ಅಧಿಕಾರಿಗಳು ಕಚೇರಿಗಳಲ್ಲಿ ಕಡ್ಡಾಯವಾಗಿ ಇರಬೇಕು ಎಂದು ಪತ್ರದಲ್ಲಿ ಸೂಚನೆ ನೀಡಲಾಗಿದೆ.

ಸೇವಾ ಮನೋಭಾವ ಇದ್ದಲ್ಲಿ ಮಾತ್ರ ಸಂಸ್ಥೆಗಳ ಉಳಿವು

'ಲಾಗೈಡ್' ಕಾನೂನು ಪತ್ರಿಕೆ ಗೌರವ ಸಂಪಾದಕ ಹೆಚ್.ಎನ್.ವೆಂಕಟೇಶ್ ಅಭಿಮತ



ಮೈಸೂರು, ನ.26(ಜಿಎ)–ಯಾವುದೇ ಸಂಸ್ಥೆ ಕಟ್ಟುವುದು ಸುಲಭ. ಆದರೆ, ನಿರಂತರವಾಗಿ ಚಟುವಟಿಕೆಯಲ್ಲಿ ಇರುವಂತೆ ನೋಡಿಕೊಳ್ಳುವುದು ಸಂಸ್ಥೆ ಕಟ್ಟಿದವರ ಮೂಲ ಉದ್ದೇಶವಾಗಿರಬೇಕು ಎಂದು 'ಲಾಗೈಡ್' ಕನ್ನಡ ಕಾನೂನು ಮಾಸ ಪತ್ರಿಕೆಯ ಗೌರವ ಸಂಪಾದಕರೂ ಆದ ಹಿರಿಯ ವಕೀಲ ಹೆಚ್.ಎನ್. ವೆಂಕಟೇಶ್ ತಿಳಿಸಿದ್ದಾರೆ.

ಮೈಸೂರಿನ ಅಶೋಕಪುರಂನಲ್ಲಿ ನಿರ್ಮಾಣಗೊಂಡಿರುವ ಡಾ.ಭೀಮರಾವ್ ಸ್ಟಡಿ ಸೆಂಟರ್ ಉದ್ಘಾಟಿಸಿ ಮಾತನಾಡಿದ ಅವರು, ಒಂದು ಸಂಸ್ಥೆ ದೀರ್ಘ ಕಾಲ ಉಳಿಯಬೇಕಾದರೆ, ಸಂಸ್ಥೆಯಲ್ಲಿರುವ ಪದಾಧಿಕಾರಿಗಳಲ್ಲಿ ಸೇವಾ ಮನೋಭಾವ ಇರಬೇಕು. ಆಗ ಮಾತ್ರ ಇದು ಸಾಧ್ಯವಾಗುತ್ತದೆ ಎಂದು ಸಲಹೆ ನೀಡಿದರು.

ಸಂವಿಧಾನ ಸಮರ್ಪಣಾ ದಿನದಂದು ಡಾ.ಭೀಮರಾವ್ ಸ್ಟಡಿ ಸೆಂಟರ್ ಉದ್ಘಾಟನೆ ಮಾಡುತ್ತಿರುವುದು ನನ್ನ ಸೌಭಾಗ್ಯ. ಡಾ.ಭೀಮರಾವ್ ಸ್ಟಡಿ ಸೆಂಟರ್ ದೀರ್ಘ ಕಾಲ ಉಳಿಯಲು ಮೂಲ ಸೌಕರ್ಯಗಳನ್ನು ಒದಗಿಸಬೇಕು. ಈ ಹಿನ್ನೆಲೆಯಲ್ಲಿ ನಮ್ಮ ಲಾಗೈಡ್ ಕಾನೂನು ಮಾಸಪತ್ರಿಕೆ ವತಿಯಿಂದ ಸ್ಟಡಿ ಸೆಂಟರ್ ಮೂಲ ಸೌಕರ್ಯಕ್ಕೆ 25 ಸಾವಿರ ರೂ. ದೇಣಿಗೆಯಾಗಿ ನೀಡುತ್ತಿದ್ದೇನೆ. ಸಮಾರಂಭದಲ್ಲಿ ಭಾಗವಹಿಸಿರುವವರು, ವೇದಿಕೆ ಮೇಲೆ ಇರುವವರು ಸಂಸ್ಥೆಗೆ ತನು, ಮನ ಧನ ಸಹಾಯ ಮಾಡಿ ಪ್ರೋತ್ಸಾಹಿಸಲಿ ಎಂದು ಮನವಿ ಮಾಡಿದರು.

ನಂತರ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಆರ್.ವೆಂಕಟರಾವ್ ಜೀ ಮಾತನಾಡಿ, ವಿದ್ಯಾರ್ಥಿಗಳಿಗೆ ಮಾತೃಭಾಷೆ ಕನ್ನಡದ ಜೊತೆಗೆ ಇಂಗ್ಲಿಷ್ ಭಾಷೆಯ ಮೇಲೂ ಉತ್ತಮ ಹಿಡಿತವಿರಬೇಕು. ಇಂದು ಯಾವುದೇ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಇಂಗ್ಲಿಷ್ ಮುಖ್ಯವಾಗಿದೆ. ಆದ್ದರಿಂದ ಅಶೋಕಪುರಂನ ಯುವಕರು ಹಾಗೂ ಯುವ ವಕೀಲರು ಸೇರಿ ಮಾಡಿರುವ ಈ ಸಂಸ್ಥೆ ಯಶಸ್ವಿಯಾಗಲಿ ಎಂದು ಹಾರೈಸಿದರು. ಕಾರ್ಯಕ್ರಮದಲ್ಲಿ ಮೈಸೂರು ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಂ.ಮಹದೇವಸ್ವಾಮಿ, ಕಾರ್ಯದರ್ಶಿ ಎಸ್.ಉಮೇಶ್ ಉಪಾಧ್ಯಕ್ಷ ಸಿದ್ದೇಗೌಡ, ನಿವೃತ್ತ ಅಭಿಯೋಜಕರಾದ ಧರ್ಣ್ಣನವರ್ ಹಾಗೂ ಮಾಜಿ ಪಾಲಿಕೆ ಸದಸ್ಯೆ ಪಲ್ಲವಿ ಬೇಗಂ, ಡಾ.ರಮೇಶ್‌ಬಾಬು, ಅಭಿಷೇಕ್, ಜಯರಾಜ್ ಹಾಗೂ ವರುಣ್ ಬುದ್ದ, ಸಂಸ್ಥೆ ಅಧ್ಯಕ್ಷ ಜಯಶಂಕರ್, ಹಿರಿಯ ವಕೀಲ ಎನ್.ಬಿ.ರಘು, ಗಿರೀಶ್ ಸೇರಿದಂತೆ ಮತ್ತಿತರರು ಭಾಗವಹಿಸಿದ್ದರು.



ಹುತಾತ್ಮರಾದ ವೀರಯೋಧ ಕ್ಯಾಪ್ಟನ್ ಪ್ರಾಂಜಲ್ ಅವರಿಗೆ ಪಡುವಾರಹಳ್ಳಿಯಲ್ಲಿ ಮೈಸೂರು ಸಮಾನ ಮನಸ್ಕರ ಬಳಗದಿಂದ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಈ ವೇಳೆ ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ, ಪಾಲಿಕೆ ಮಾಜಿ ಸದಸ್ಯ ಎಂ.ಚಿಕ್ಕವೆಂಕಟು, ಕಾರ್ಮಿಕ ಮುಖಂಡ ಕೃಷ್ಣೇಗೌಡ, ಸಂಜೀವಿನಿಕುಮಾರ್, ಶ್ರೀನಿವಾಸ್‌ಗೌಡ, ದೇವೇಗೌಡ, ಸಿ.ಡಿ.ಕುಮಾರ್, ಸಿ.ಸಂತೋಷ್, ವೇಣು, ಕೇಬಲ್ ಕಿಟ್ಟಿ, ಸುರೇಂದ್ರ, ಪ್ರಶಾಂತ್, ಶಿವನಂಜಪ್ಪ, ಮಹೇಶ್ ಮತ್ತಿತರರಿದ್ದರು.

ಡಿ.ಕೆ.ಶಿವಕುಮಾರ್ ವಿರುದ್ಧದ ಸಿಬಿಐ ತನಿಖೆ ಹಿಂಪಡೆದದ್ದು ಸ್ವಾಗತಾರ್ಹ

ಕೆಪಿಸಿಸಿ ವಕ್ತಾರ ಎಸ್.ರಾಜೇಶ್

ಮೈಸೂರು, ನ.26(ಎಂಟಿವೈ)– ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ವಿರುದ್ಧ ಈ ಹಿಂದೆ ಬಿಜೆಪಿ ಸರ್ಕಾರ ನಿಯಮಬಾಹಿರವಾಗಿ ಸಿಬಿಐ ತನಿಖೆಗೆ ನೀಡಿದ್ದ ಆದೇಶವನ್ನು ಇಂದಿನ ಸರ್ಕಾರ ಹಿಂಪಡೆದಿರುವುದು ಸ್ವಾಗತಾರ್ಹ ಎಂದು ನಗರ ಕಾಂಗ್ರೆಸ್ ವಕ್ತಾರ ಎಸ್.ರಾಜೇಶ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂವಿಧಾನ, ಕಾನೂನು ಗೌರವಿಸುವ ನಿಟ್ಟಿನಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಷ್ಟು ದಿನ ವಿಚಾರಣೆಗೆ ಸಹಕರಿಸುತ್ತಾ ಬಂದಿದ್ದಾರೆ. ನ್ಯಾಯಾಂಗ ವ್ಯವಸ್ಥೆ ಮೇಲೆ ಸಂಪೂರ್ಣ ವಿಶ್ವಾಸ, ನಂಬಿಕೆ ಇಟ್ಟಿದ್ದಾರೆ. ಡಿ.ಕೆ.ಶಿವಕುಮಾರ್ ಅವರ ಮೇಲಿನ ಸಿಬಿಐ ತನಿಖೆಯನ್ನು ಕಾಂಗ್ರೆಸ್ ಸರ್ಕಾರ ವಾಪಸ್ ಪಡೆದಿರುವುದು ಸೂಕ್ತವಾಗಿದೆ. ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು 2019ರಲ್ಲಿ ಇ.ಡಿ ಇಲಾಖೆಯವರು ರಾಜ್ಯ ಕಾರ್ಯದರ್ಶಿಯವರಿಗೆ ಬರೆದ ಪತ್ರ ಆಧರಿಸಿ, ಸಿಬಿಐ ತನಿಖೆಗೆ ಮೌಖಿಕವಾಗಿ ಒಪ್ಪಿಗೆ ನೀಡಿದ್ದು ಸಂವಿಧಾನ ವಿರೋಧಿಯಾಗಿದೆ. ಬಿಎಸ್‌ವೈ ಸಿಬಿಐ ತನಿಖೆಗೆ ಒಪ್ಪಿಸುವ ಮುನ್ನ ಅಂದಿನ ಸಚಿವ ಸಂಪುಟದ ಮುಂದೆ ಮಂಡಿಸಿ, ಒಪ್ಪಿಗೆ ಪಡೆಯಬೇಕಿತ್ತು. ಅಲ್ಲದೆ, ಅಡ್ವೋಕೇಟ್ ಜನರಲ್ ಅವರ ಅಭಿಪ್ರಾಯ ಪಡೆಯಬೇಕಿತ್ತು. ವಿಧಾನಸಭಾಧ್ಯಕ್ಷರ ಗಮನಕ್ಕೆ ತಂದು ಅವರ ಒಪ್ಪಿಗೆ ಪಡೆದು ನಂತರ ಸಿಬಿಐ ತನಿಖೆಗೆ ಅನುಮತಿ ನೀಡಬೇಕಿತ್ತು. ಈ ರೀತಿ ಮಾಡದೆ ಏಕಾಏಕಿ ಕೇಂದ್ರ ಬಿಜೆಪಿ ಸರ್ಕಾರದ ಒತ್ತಡಕ್ಕೆ ಮಣಿದು ಡಿಕೆಶಿ ಅವರನ್ನು ಕಟ್ಟಿ ಹಾಕಲು ಮೇಲೆ ಸಿಬಿಐ ತನಿಖೆಗೆ ಒಪ್ಪಿಗೆ ನೀಡಿದ್ದು ಪ್ರಜಾಪ್ರಭುತ್ವ ಕಗ್ಗೊಲೆಯಾಗಿದೆ. ಬಿಜೆಪಿ ಸರ್ಕಾರದ ಅವಧಿಯಲ್ಲಿ ಬಿಜೆಪಿ ಶಾಸಕರು ಹಾಗೂ ನಾಯಕರ ಮೇಲೆ ದಾಖಲಾಗಿದ್ದ ಕೆಲವು ಮೊಕದ್ದಮೆಗಳನ್ನು ಏಕಾಏಕಿ ಹಿಂಪಡೆಯಲಾಗಿದೆ. ಈ ನಿರ್ಧಾರ ಕಾನೂನಿನ ವಿರುದ್ಧವಾದುದಲ್ಲವೇ ಎಂದು ಪ್ರಶ್ನಿಸಿದರು.

ಈ ವೇಳೆ ಕಾಂಗ್ರೆಸ್ ಮುಖಂಡರಾದ ಎಸ್.ಎ.ರಹೀಮ್, ಯುವ ಕಾಂಗ್ರೆಸ್ ಕಾರ್ಯದರ್ಶಿ ನವೀದ್‌ಪಾಷ, ಕುರುಬಾರಹಳ್ಳಿ ಪ್ರಕಾಶ್, ಟಿ.ಶಿವರುದ್ರ, ರವಿ, ಶ್ರೀನಿವಾಸ್ ಹಾಜರಿದ್ದರು.

ಆಧುನಿಕ ಬೇಸಾಯ ತಾಂತ್ರಿಕತೆ ಕುರಿತು ವಿಚಾರ ಸಂಕಿರಣ

ಮೈಸೂರು,ನ.26–ಮೈಸೂರು ತೋಟಗಾರಿಕೆ ಇಲಾಖೆ ವತಿಯಿಂದ ಶುಂಠಿ, ಅರಿಶಿನ, ತೆಂಗು ಬೆಳೆಗಳ ಆಧುನಿಕ ಬೇಸಾಯ ತಾಂತ್ರಿಕತೆ ಕುರಿತು ವಿಚಾರ ಸಂಕಿರಣವನ್ನು 28–11–2023ರಂದು ಕರ್ಜನ್ ಪಾರ್ಕ್ ಕೋಟೆ ಆಂಜನೇಯ ದೇವಸ್ಥಾನದ ಹತ್ತಿರ ಇರುವ ಡಾ. ಎಂ.ಹೆಚ್.ಮರೀಗೌಡ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದು, ತೆಂಗು ಬಾಧಿಸುವ ರೈನಸಾರೋಸ್ ದುಂಬಿ ಹಾಗೂ ಕೆಂಪು ಮತಿ ಹುಳದ ನಿರ್ವಹಣೆ ಲಿಂಗಾರ್ಷಕ ಬಳೆಗಳನ್ನು ರಿಯಾಯಿತಿ ದರದಲ್ಲಿ ನೀಡಲಾಗುತ್ತಿದೆ. ಹೆಚ್ಚಿನ ಮಾಹಿತಿಗಾಗಿ ಸಹಾಯಕ ತೋಟಗಾರಿಕೆ ಅಧಿಕಾರಿ ಕಸಬಾ ಹೋಬಳಿ ದೂ. ಸಂ. 9901387284. ವರುಣ ಹೋಬಳಿ ದೂ. ಸಂ. 7259592484. ಜಯಪುರ ಹೋಬಳಿ ದೂ. ಸಂ. 8904673607. ಇಲವಾಲ ಹೋಬಳಿ ದೂ. ಸಂ. 9986086262 ಸಂಪರ್ಕಿಸಬಹುದು ಎಂದು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನ.29ರಿಂದ ಡಿ.1ರವರೆಗೆ ಬೆಂಗಳೂರು ಟೆಕ್ ಸಮ್ಮಿಟ್





ಬೆಂಗಳೂರು, ನ.26–ನವೆಂಬರ್ 29ರಿಂದ ಡಿಸೆಂಬರ್ 1ರವರೆಗೆ ಬೆಂಗಳೂರು ಟೆಕ್ ಸಮ್ಮಿಟ್ ನಡೆಯಲಿದೆ ಎಂದು ಐಟಿ–ಬಿಟಿ ಇಲಾಖೆ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ವಿಕಾಸಸೌಧದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಬೆಂಗಳೂರಿನ ಅರಮನೆ ಮೈದಾನದಲ್ಲಿ ಟೆಕ್ ಸಮ್ಮಿಟ್ ನಡೆಯಲಿದೆ. 'ಬ್ರೇಕಿಂಗ್ ಬೌಂಡರಿ' ಘೋಷವಾಕ್ಯದೊಂದಿಗೆ ಸಮ್ಮಿಟ್ ನಡೆಯುತ್ತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 26ನೇ ಟೆಕ್ ಸಮ್ಮಿಟ್ ಉದ್ಘಾಟಿಸಲಿದ್ದಾರೆ.

ಸಮ್ಮಿಟ್‌ನಲ್ಲಿ 30 ದೇಶಗಳ 350ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗಿಯಾಗಲಿದ್ದಾರೆ. ಏಷ್ಯಾದ ಅತಿದೊಡ್ಡ ಟೆಕ್ ಸಮ್ಮಿಟ್ ಇದಾಗಿದೆ ಎಂದರು. ಕಳೆದ 25 ಸಮ್ಮಿಟ್‌ಗಳಲ್ಲಿ ತೆಗೆದುಕೊಂಡ ನಿರ್ಣಯ ಸಕ್ಸಸ್ ಆಗಿದೆ. ಚಂದ್ರಯಾನ–3 ಪಯಣದ ಕುರಿತು ವಿಶೇಷ ಪ್ರದರ್ಶನ ಇರಲಿದೆ. ಚಂದ್ರಯಾನದಲ್ಲಿ ಭಾಗಿಯಾದ ಸಣ್ಣ ಸಣ್ಣ ಕಂಪನಿಗಳಿಗೆ ಸಹ ಸಮ್ಮಿಟ್‌ನಲ್ಲಿ ಪ್ರದರ್ಶನಕ್ಕೆ ಅವಕಾಶ ನೀಡಲಾಗುತ್ತದೆ ಎಂದರು.

ಐಟಿ ಮತ್ತು DeepTech, Metaverse ಮತ್ತು WEB 3.0, ಎಲೆಕ್ಟ್ರಾನಿಕ್ಸ್ ಮತ್ತು ಸೆಮಿಕಂಡಕ್ಟರ್‌ಗಳು, ಅನಿಮೇಷನ್, ವಿಷುಯಲ್ ಎಫೆಕ್ಟ್, ಗೇಮಿಂಗ್, ಟೆಲಿಕಾಂ ಮತ್ತು 6G ನಂತಹ ತಂತ್ರಜ್ಞಾನ–ಸಂಬಂಧಿತ ಕ್ಷೇತ್ರಗಳಲ್ಲಿ ಭಾರತದ ಕ್ಷಿಪ್ರ ಪ್ರಗತಿಯನ್ನು ಪ್ರದರ್ಶಿಸುವ ಇದು ವೇದಿಕೆಯಾಗಲಿದೆ. ಈ ಟೆಕ್ ಸಮ್ಮಿಟ್ ಬಾಹ್ಯಾಕಾಶ ಕ್ಷೇತ್ರದಲ್ಲಿ ಭಾರತದ ಹೆಚ್ಚುತ್ತಿರುವ ಪ್ರಭಾವಕ್ಕೆ ಸಾಕ್ಷಿಯಾಗಲಿದೆ. ಈ ಟೆಕ್ ಸಮ್ಮಿಟ್‌ನಲ್ಲಿ ಇಸ್ರೋದ ಗಮನಾರ್ಹ ಸಾಧನೆಗಳು ಮತ್ತು ಬಾಹ್ಯಾಕಾಶ ಪರಿಶೋಧನೆಗೆ ನೀಡಿದ ಕೊಡುಗೆಗಳ ಪ್ರದರ್ಶನವಾಗಲಿದೆ. ಟೆಕ್ ಸಮ್ಮಿಟ್ ಬಾಹ್ಯಾಕಾಶ ಉದ್ಯಮದಲ್ಲಿ ಖಾಸಗಿ ಹೂಡಿಕೆದಾರರನ್ನು ಆಕರ್ಷಿಸುವ ಸರ್ಕಾರದ ಮುಂದುವರೆದ ಭಾಗವಾಗಿದೆ.

ಡಿಕೆಶಿ ವಿರುದ್ಧದ ಸಿಬಿಐ ತನಿಖೆ ವಾಪಸ್ ಸಂವಿಧಾನ ವಿರೋಧಿ ಕೃತ್ಯ



ಹೇಮ ನಂದೀಶ್

ಮೈಸೂರು,ನ.26–ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧದ ಸಿಬಿಐ ಪ್ರಕರಣದ ತನಿಖೆ ಮುಕ್ತಾಯ ಹಂತದಲ್ಲಿರುವಾಗಲೇ ರಾಜ್ಯ ಸರ್ಕಾರ ಪ್ರಕರಣವನ್ನು ವಾಪಸ್ ಪಡೆಯಲು ಮುಂದಾಗಿರುವುದು ಸಂವಿಧಾನ ಹಾಗೂ ಪ್ರಜಾಪ್ರಭುತ್ವ ವಿರೋಧಿ ಎಂದು ಬಿಜೆಪಿ ನಗರ ಮಹಿಳಾ ಮೋರ್ಚಾ ಅಧ್ಯಕ್ಷೆ ಹೇಮ ನಂದೀಶ್ ಟೀಕಿಸಿದ್ದಾರೆ.

ಚುನಾವಣೆ ವೇಳೆ ಕಾಂಗ್ರೆಸ್ ಪಕ್ಷ ಸಂಘಟನೆಗಾಗಿ ಡಿ.ಕೆ.ಶಿವಕುಮಾರ್ ಬಂಡವಾಳ ಸುರಿದಿದ್ದರು. ಈಗ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ ಸಿಬಿಐ ತನಿಖೆಯಿಂದ ಪಾರು ಮಾಡಿ ಅದರ ಋಣ ತೀರಿಸಲು ಈ ತೀರ್ಮಾನ ಕೈಗೊಂಡಿದೆ. ಇದು ನಾಚಿಕೆಗೇಡಿನ ಸಂಗತಿ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

2013ರಿಂದ 2018ರವರೆಗಿನ ಅವಧಿಯಲ್ಲಿ ಶಿವಕುಮಾರ್ ಅವರ ಆಸ್ತಿ ಎಷ್ಟಿತ್ತು, ಬಳಿಕ ಎಷ್ಟು ಹೆಚ್ಚಿದೆ ಎಂಬ ಬಗ್ಗೆ ಸಿಬಿಐ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿತ್ತು. ತನಿಖೆ ಮುಕ್ತಾಯದ ಹಂತದಲ್ಲಿರುವಾಗಲೇ ಪ್ರಕರಣವನ್ನು ವಾಪಸ್ ಪಡೆಯಲು ನಿರ್ಣಯ ಕೈಗೊಂಡಿರುವುದು ಸರ್ಕಾರದ ದಿವಾಳಿತನಕ್ಕೆ ಸಾಕ್ಷಿಯಾಗಿದೆ ಎಂದು ಹೇಮ ನಂದೀಶ್ ಟೀಕಿಸಿದರು.

ಶಿವಕುಮಾರ್ ಪ್ರಾಮಾಣಿಕರಾಗಿದ್ದರೆ ಸಿಬಿಐ ತನಿಖೆಗೆ ಎಲ್ಲ ರೀತಿಯ ಸಹಕಾರವನ್ನು ನೀಡಬೇಕು. ಅದನ್ನು ಬಿಟ್ಟು ತನಿಖೆ ಮುಕ್ತಾಯ ಹಂತದಲ್ಲಿರುವಾಗ ಪ್ರಕರಣ ಹಿಂಪಡೆಯುತ್ತಿರುವುದು ನಾಚಿಕೆಗೇಡಿನ ಸಂಗತಿಯಾಗಿದೆ ಎಂದು ಪತ್ರಿಕಾ ಹೇಳಿಕೆಯಲ್ಲಿ ವ್ಯಂಗ್ಯವಾಡಿದ್ದಾರೆ.

ಲೈಂಗಿಕ ಕಿರುಕುಳ ತಡೆಗಟ್ಟುವಿಕೆ ಕಾಯ್ದೆ ಕುರಿತು ಕಾನೂನು ಅರಿವು



ಮೈಸೂರು,ನ.26(ಪಿಎಂ)–ಮಹಿಳೆಯರ ಮೇಲಿನ ದೌರ್ಜನ್ಯ ನಿರ್ಮೂಲನೆಗಾಗಿ ಅಂತಾರಾಷ್ಟ್ರೀಯ ದಿನದ ಪ್ರಯುಕ್ತ ಮೈಸೂರು ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ 'ಉದ್ಯೋಗ ಸ್ಥಳಗಳಲ್ಲಿ ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ ತಡೆಗಟ್ಟುವಿಕೆ ಕಾಯ್ದೆ' ಕುರಿತು ಕಾನೂನು ಅರಿವು ಕಾರ್ಯಕ್ರಮ ನಡೆಯಿತು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮೈಸೂರು ವಕೀಲರ ಸಂಘ ಹಾಗೂ ಜಿಲ್ಲಾ ಪಂಚಾಯಿತಿ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ಈ ಕಾರ್ಯಕ್ರಮವನ್ನು ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ಸೀನಿಯರ್ ಶಿರಸ್ತೇದಾರ್ ಕೆ.ಎಸ್.ಹೇಮಲತಾ ಉದ್ಘಾಟಿಸಿದರು. ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರೂ ಆದ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಪ್ರಭಾವತಿ ಎಂ. ಹಿರೇಮಠ್ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಬಿ.ಜಿ.ದಿನೇಶ್, ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಂ.ಮಹದೇವಸ್ವಾಮಿ, ಉಪಾಧ್ಯಕ್ಷ ಪುಟ್ಟಸಿದ್ದೇಗೌಡ, ಕಾರ್ಯದರ್ಶಿ ಎಸ್.ಉಮೇಶ್, ಜಿಲ್ಲಾ ನ್ಯಾಯಾಲಯದ ಹೆಚ್ಚುವರಿ ನ್ಯಾಯಾಧೀಶರಾದ ಶೈಮಾ ಖಮ್ರೋಜ್ ಮತ್ತಿತರರು ಹಾಜರಿದ್ದರು.

ನ.28, ಬಿಎಸ್‌ಎನ್‌ಎಲ್ ನೌಕರರ ಪ್ರತಿಭಟನೆ

ಮೈಸೂರು,ನ.26–ಭಾರತ್ ಸಂಚಾರ್ ನಿಗಮ್ ಲಿಮಿಟೆಡ್ (ಬಿಎಸ್‌ಎನ್‌ಎಲ್) ನೌಕರರು 4ಜಿ ಮತ್ತು 5ಜಿ ಸೇವೆಯನ್ನು ಆದಷ್ಟು ಬೇಗನೇ ಪ್ರಾರಂಭಿಸುವಂತೆ ಒತ್ತಾಯಿಸಿ ನ.28ರಂದು ಬೆಳಗ್ಗೆ 10 ಗಂಟೆಗೆ ಮೈಸೂರು ಜಯಲಕ್ಷ್ಮೀಪುರಂನಲ್ಲಿರುವ ಪ್ರಧಾನ ಕಚೇರಿ ಬಳಿ ಮೈಸೂರು ಜಿಲ್ಲೆ ನಾನ್ ಎಕ್ಸಿಕ್ಯೂಟಿವ್ ನೌಕರರ ಒಕ್ಕೂಟದ ವತಿಯಿಂದ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಒಕ್ಕೂಟದ ಅಧ್ಯಕ್ಷ ನಾಗೇಂದ್ರ, ಸಂಚಾಲಕ ಕೆ.ಪುಟ್ಟಸ್ವಾಮಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಡಿ.3ಕ್ಕೆ ಪ್ರತಿಭಾ ಪುರಸ್ಕಾರ, ಸಾಧಕರಿಗೆ ಸನ್ಮಾನ

ಮೈಸೂರು, ನ.26–ಮೈಸೂರಿನ ಶ್ರೀ ದೇವಲ ಮಹರ್ಷಿ ನೌಕರರ ವೇದಿಕೆ ವತಿಯಿಂದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮತ್ತು ಸಾಧಕರಿಗೆ ಸನ್ಮಾನ ಕಾರ್ಯಕ್ರಮವನ್ನು ಡಿ.3ರಂದು ನಗರದ ಕಲಾಮಂದಿರದಲ್ಲಿ ಬೆಳಗ್ಗೆ 8ರಿಂದ ಮಧ್ಯಾಹ್ನ 2 ಗಂಟೆವರೆಗೆ ಏರ್ಪಡಿಸಲಾಗಿದೆ.

ಹಂಪಿಯ ಹೇಮಕೂಟದ ಶ್ರೀ ಗಾಯತ್ರಿ ಪೀಠದ ಶ್ರೀ ದಯಾನಂದಪುರಿ ಮಹಾಸ್ವಾಮೀಜಿ ಅವರು ದಿವ್ಯ ಸಾನ್ನಿಧ್ಯ ವಹಿಸಲಿದ್ದು, ಶಾಸಕ ಕೆ.ಹರೀಶ್‌ಗೌಡ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ದೇವಾಂಗ ಸಂಘದ ರಾಜ್ಯಾಧ್ಯಕ್ಷ ರವೀಂದ್ರ ಕಲಬುರ್ಗಿ, ಡಾ.ಜಿ.ರಮೇಶ್, ಮೈಸೂರು ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಪಾಲಿಕೆ ಮಾಜಿ ಸದಸ್ಯ ಎಂ.ಯು.ಬಾಲರಾಜ್ ಆಗಮಿಸಲಿದ್ದಾರೆ.

ಕಾರ್ಯಕ್ರಮದಲ್ಲಿ ಶ್ರೀ ದೇವಲ ಮಹರ್ಷಿ ಮತ್ತು ದೇವರ ದಾಸಿಮಯ್ಯ ಅವರ ಕುರಿತು ಪ್ರಾಧ್ಯಾಪಕ ಡಾ.ಬಿ.ವಿ.ವಸಂತಕುಮಾರ್ ವಿಶೇಷ ಉಪನ್ಯಾಸ ನೀಡಲಿದ್ದಾರೆ. ಅಧ್ಯಕ್ಷತೆಯನ್ನು ಜಿಲ್ಲಾಧ್ಯಕ್ಷ ಎಂ.ಎಸ್.ಜಯಪ್ರಕಾಶ್ ವಹಿಸಲಿದ್ದಾರೆ ಎಂದು ಪತ್ರಿಕಾ ಪ್ರಕಟಣೆ ತಿಳಿಸಿದೆ.

ನ.29, ಹತ್ತು ಕೃತಿಗಳ ಲೋಕಾರ್ಪಣೆ

ಮೈಸೂರು, ನ. 26– ಜಿಲ್ಲಾ ಕಸಾಪ, ಸಂವಹನ ಟ್ರಸ್ಟ್ ಮತ್ತು ಕನ್ನಡ ಸಾಹಿತ್ಯ ಕಲಾಕೂಟದ ಸಂಯುಕ್ತಾಶ್ರಯದಲ್ಲಿ ನ. 29ರಂದು ಸಂಜೆ 5 ಗಂಟೆಗೆ ಸುವರ್ಣ ಕರ್ನಾಟಕ ರಾಜ್ಯೋತ್ಸವದ ಪ್ರಯುಕ್ತ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಮೈಸೂರಿನ ವಿಜಯನಗರ 1ನೇ ಹಂತದಲ್ಲಿರುವ ಜಿಲ್ಲಾ ಕಸಾಪ ಸಾಹಿತ್ಯ ಭವನದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ವಿವಿಧ ಲೇಖಕರ ಹತ್ತು ಕೃತಿಗಳ ಲೋಕಾರ್ಪಣೆ, ಹಿರಿಯ ಸಾಹಿತಿಗಳಿಗೆ ಸನ್ಮಾನ, 'ಸಂವಹನ ಸಿರಿ' ಪ್ರಶಸ್ತಿ ಪ್ರದಾನ ಹಾಗೂ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಿಗೆ ಅಭಿನಂದನಾ ಸಮಾರಂಭ ಏರ್ಪಡಿಸಲಾಗಿದೆ. ಕರ್ನಾಟಕ ಜಾನಪದ ಪರಿಷತ್ ಅಧ್ಯಕ್ಷ ಹಿ.ಶಿ.ರಾಮಚಂದ್ರೇಗೌಡ ಕೃತಿಗಳನ್ನು ಬಿಡುಗಡೆ ಮಾಡಲಿದ್ದು, ಕೃತಿಗಳ ಕುರಿತು ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ಯೋಜನಾ ನಿರ್ದೇಶಕ ಪ್ರೊ.ನೀಲಗಿರಿ ತಳವಾರ, ಜೆಎಸ್‌ಎಸ್ ಕಾಲೇಜಿನ ವಿಶ್ರಾಂತ ಪ್ರಾಧ್ಯಾಪಕಿ ಡಾ.ಹೆಚ್.ಟಿ.ಶೈಲಜಾ ಮಾತನಾಡಲಿದ್ದು, ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್ ಅಭಿನಂದಿತರ ಕುರಿತು ಮಾತನಾಡುವರು. ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಅಧ್ಯಕ್ಷತೆ ವಹಿಸಲಿದ್ದು, ಸಂವಹನ ಟ್ರಸ್ಟ್ ಅಧ್ಯಕ್ಷ ಡಿ.ಎನ್.ಲೋಕಪ್ಪ ಉಪಸ್ಥಿತರಿರುವರು.

ಕಾಂಗ್ರೆಸ್ ವಾರ್ಡ್ ಅಧ್ಯಕ್ಷರಾಗಿ ಮೋಹನ್‌ಕುಮಾರ್ ನೇಮಕ




ಮೈಸೂರು,ನ.26(ಪಿಎಂ)–ಚಾಮರಾಜ ವಿಧಾನಸಭಾ ಕ್ಷೇತ್ರದ ದೇವರಾಜ ಬ್ಲಾಕ್ ಕಾಂಗ್ರೆಸ್ ಸಮಿತಿಯ ವಾರ್ಡ್ ನಂ.40ರ ಅಧ್ಯಕ್ಷರನ್ನಾಗಿ ವಿ.ಮೋಹನ್‌ಕುಮಾರ್ ಅವರನ್ನು ನೇಮಕ ಮಾಡಲಾಗಿದೆ. ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ ಅವರ ಸೂಚನೆ ಮೇರೆಗೆ ನಜರ್‌ಬಾದಿನ ಪೇಟೆಬೀದಿಯ ನಿವಾಸಿ ವಿ.ಮೋಹನ್‌ಕುಮಾರ್ ಅವರನ್ನು ಸದರಿ ವಾರ್ಡಿನ ಅಧ್ಯಕ್ಷರನ್ನಾಗಿ ನೇಮಿಸಿ ದೇವರಾಜ ಬ್ಲಾಕ್ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಟಿ.ಸುಂದರ್‌ಕುಮಾರ್ ಆದೇಶ ಮಾಡಿದ್ದಾರೆ.

ಓಟದ ಸ್ಪರ್ಧೆಯಲ್ಲಿ ಸೋಲು: ಖಿನ್ನತೆಯಿಂದ ವಿದ್ಯಾರ್ಥಿನಿ ಆತ್ಮಹತ್ಯೆ



ಮಂಗಳೂರು: ರಾಷ್ಟ್ರೀಯ ಮಟ್ಟದ ಕ್ರೀಡಾಕೂಟದಲ್ಲಿ ಸೋತಿದ್ದರಿಂದ ಖಿನ್ನತೆಗೆ ಜಾರಿದ್ದ ವಿದ್ಯಾರ್ಥಿನಿಯೊಬ್ಬಳು ಕೀಟನಾಶಕ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ದಕ್ಷಿಣಕನ್ನಡ ಜಿಲ್ಲೆಯಲ್ಲಿ ನಡೆದಿದೆ. ಪುತ್ತೂರಿನ ಸಂಪ್ಯದಲ್ಲಿ ಈ ದುರ್ಘಟನೆ ನಡೆದಿದ್ದು ಮೃತ ವಿದ್ಯಾರ್ಥಿನಿಯನ್ನು 17 ವರ್ಷದ ನಿಶಾ ಎಂದು ಗುರುತಿಸಲಾಗಿದೆ. ವಿವೇಕಾನಂದ ಪದವಿ ಪೂರ್ವ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ ನಿಶಾ, 2 ವಾರದ ಹಿಂದೆ ಬಿಹಾರದಲ್ಲಿ ನಡೆದಿದ್ದ ರಾಷ್ಟ್ರ ಮಟ್ಟದ ರನ್ನಿಂಗ್ ರೇಸ್‌ನಲ್ಲಿ ಭಾಗವಹಿಸಿದ್ದಳು. ಸ್ಪರ್ಧೆಯಲ್ಲಿ ಬಹುಮಾನ ಸಿಗದಿದ್ದಕ್ಕೆ ಬೇಸರಗೊಂಡಿದ್ದ ನಿಶಾ ಇದರಿಂದ ಖಿನ್ನತೆಗೆ ಒಳಗಾಗಿದ್ದಳು. ಹೀಗಾಗಿ ವಾರದ ಹಿಂದೆ ಮನೆಯಲ್ಲಿದ್ದ ಕೀಟನಾಶಕ ಸೇವಿಸಿದ್ದಳು. ತೀವ್ರವಾಗಿ ಅಸ್ವಸ್ಥಳಾಗಿದ್ದ ನಿಶಾಳನ್ನು ಮಂಗಳೂರು ಆಸ್ಪತ್ರೆಗೆ ದಾಖಲು ಮಾಡಲಾಗಿತ್ತಾದರೂ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾಳೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

27.11.2023 ಸೋಮವಾರ, ಮಳೆ ನಕ್ಷತ್ರ: ಅನುರಾಧ, 20.11.2023ರಿಂದ 02.12.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಶುಕ್ಲ ಪಕ್ಷ, ತಿಥಿ: ಹುಣ್ಣಿಮೆ, ನಕ್ಷತ್ರ: ಕೃತ್ತಿಕ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ.

■ **ಶ್ರೀ ವೀರಭದ್ರೇಶ್ವರಸ್ವಾಮಿ ಹಾಗೂ ಶ್ರೀ ಚಾಮರಾಜೇಶ್ವರಸ್ವಾಮಿ ದೇವಸ್ಥಾನ ಟ್ರಸ್ಟ್:** ಕಾರ್ತಿಕ ಮಾಸದ ವಿಶೇಷ ಪೂಜಾ ಮಹೋತ್ಸವ, ಅಗ್ನಿ ಕೊಂಡೋತ್ಸವ ಮತ್ತು ಗಿರಿಜಾ ಕಲ್ಯಾಣ, 2ನೇ ಕಾರ್ತಿಕ ಸೋಮವಾರದ ಹುಣ್ಣಿಮೆ ದೀಪೋತ್ಸವ, ಬೆಳಗ್ಗೆ 7 ಗಂಟೆಗೆ ತೈಲಾಭಿಷೇಕ, ಪಂಚಾಮೃತ ಅಭಿಷೇಕ, ಮಹಾರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ, ಮಹಾಮಂಗಳಾರತಿ, ಸಂಜೆ 7 ಗಂಟೆಗೆ ಶಿವ ದೀಪೋತ್ಸವ, ಸ್ಥಳ: ದೇವಸ್ಥಾನದ ಆವರಣ, ಡಿ.ಬನುಮಯ್ಯ ರಸ್ತೆ, ಕೆ.ಆರ್.ಮೊಹಲ್ಲಾ.

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರಾ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10 ರಿಂದ ಸಂಜೆ 7 ಗಂಟೆವರೆಗೆ

■ **ಶ್ರೀ ಸಂಗಮೇಶ್ವರ ದೇವಸ್ಥಾನ:** ಕಾರ್ತಿಕ–ಸೋಮವಾರಗಳಂದು ವಿಶೇಷ ಪೂಜಾ ಮಹೋತ್ಸವ ಹಾಗೂ ಉಪನ್ಯಾಸ, ದಿವ್ಯ ಸಾನ್ನಿಧ್ಯ: ಚಿದರವಳ್ಳಿ ಶ್ರೀ ಗವಿಮಠದ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು, ಉಪನ್ಯಾಸ: ನಂಜನಗೂಡು ಸರ್ಕಾರಿ ಪಿಯು ಕಾಲೇಜು ಕನ್ನಡ ವಿಭಾಗದ ಉಪನ್ಯಾಸಕಿ ಡಾ.ಕೆ.ಮಾಲತಿ, ವಿಷಯ: ಆಯ್ದಕ್ಕಿ ಲಕ್ಕಮ್ಮನ ಅಸಂಗ್ರಹತತ್ವ, ಸ್ಥಳ: ಶ್ರೀ ನಟರಾಜ ಸಭಾಭವನ, ಶ್ರೀ ಹೊಸಮಠ, ಸಂಜೆ 7 ಗಂಟೆಗೆ.

■ **ಶ್ರೀ ಬಲಮುರಿ ಗಣಪತಿ ದೇವಸ್ಥಾನ:** ದೇವಸ್ಥಾನದ 34ನೇ ವರ್ಷದ ವಾರ್ಷಿಕೋತ್ಸವದ ಪ್ರಯುಕ್ತ ಮೃತ್ಯು ನಿವಾರಣೆಗಾಗಿ, ಆರೋಗ್ಯಕ್ಕಾಗಿ ಮಹಾ ಮೃತ್ಯುಂಜಯ ಹೋಮ, ಸ್ಥಳ: ದೇವಸ್ಥಾನದ ಆವರಣ, ರೈಲ್ವೆ ನಿಲ್ದಾಣ, ಬೆಳಗ್ಗೆಯಿಂದ.

■ **ಶ್ರೀ ಮಲೆಮಹದೇಶ್ವರಸ್ವಾಮಿ ದೇವಸ್ಥಾನದ ಟ್ರಸ್ಟ್:** 46ನೇ ವರ್ಷದ ಕಾರ್ತಿಕ ಮಾಸದ ಶ್ರೀ ಮಲೆ ಮಹದೇಶ್ವರಸ್ವಾಮಿ ಪೂಜಾ ಮಹೋತ್ಸವ, 25ನೇ ವರ್ಷದ ಮಹಾ ಕುಂಭಾಭಿಷೇಕ ಮತ್ತು 9ನೇ ವರ್ಷದ ಹಾಲರವಿ ಉತ್ಸವ, 2ನೇ ಕಾರ್ತಿಕ ಸೋಮವಾರದ ಅಂಗವಾಗಿ ಬೆಳಗ್ಗೆ 6ರಿಂದ ಶ್ರೀ ಸ್ವಾಮಿಯವರಿಗೆ ಮಹಾ ರುದ್ರಾಭಿಷೇಕ, ವಿಶೇಷ ಪೂಜೆ, ಸ್ಥಳ: 3ನೇ ಕ್ರಾಸ್, ಗರಡಿಕೇರಿ, ಲಷ್ಕರ್ ಮೊಹಲ್ಲಾ.

■ **ಮಹಾರಾಜ ಎಜುಕೇಷನ್ ಸೊಸೈಟಿ, ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು:** ಗಣಿತದ ಭೌತಶಾಸ್ತ್ರದಲ್ಲಿ ಇತ್ತೀಚಿನ ಪ್ರವೃತ್ತಿಗಳು ಕುರಿತು ಒಂದು ದಿನದ ರಾಷ್ಟ್ರಮಟ್ಟದ ವಿಚಾರ ಸಂಕಿರಣ, ಸ್ಥಳ: ಎವಿಸಿ–11, ಕಾಲೇಜು ಆವರಣ, ಬೆಳಗ್ಗೆ 10 ಗಂಟೆಯಿಂದ.

■ **ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯ, ದಿ ಮೈಸೂರಿನ ನ್ಯಾಷನಲ್ ಇನ್ಸಿಟ್ಯೂಟ್ ಆಫ್ ಇಂಜಿನಿಯರಿಂಗ್:** ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯ ಅಂತರ ಕಾಲೇಜು ಮೈಸೂರು ವಿಭಾಗದ ಬ್ಯಾಸ್ಕೆಟ್‌ಬಾಲ್ ಪುರುಷರ ಚಾಂಪಿಯನ್‌ಶಿಪ್–2023–24, ಉದ್ಘಾಟನೆ: ರಾಷ್ಟ್ರೀಯ ಬ್ಯಾಸ್ಕೆಟ್‌ಬಾಲ್ ಆಟಗಾರರಾದ ಏಕಲವ್ಯ ಪ್ರಶಸ್ತಿ ಪುರಸ್ಕೃತ ಡಾ.ಎಂ.ವಿ.ಸವಿತಾ ಪ್ರಶಾಂತ್, ಅಧ್ಯಕ್ಷತೆ: ಎನ್‌ಐಇ ಪ್ರಿನ್ಸಿಪಾಲ್ ಡಾ. ರೋಹಿಣಿ ನಾಗಪದ್ಮ, ಸ್ಥಳ: ಎನ್‌ಐಇ ಕಾಲೇಜಿನ ಕ್ರೀಡಾಂಗಣ (ಎನ್‌ಐಇ–ದಕ್ಷಿಣ), ಮಾನಂದವಾಡಿ ರಸ್ತೆ, ಬೆಳಗ್ಗೆ 9.30ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನೆ ಹಾಗೂ ವಿಸ್ತರಣಾ ಕೇಂದ್ರ:** 74ನೇ ಸಂವಿಧಾನ ದಿನಾಚರಣೆ ಅಂಗವಾಗಿ ವಿಶೇಷ ಉಪನ್ಯಾಸಗಳ ಮಾಲಿಕೆ, ಉಪನ್ಯಾಸ, ಮಾನಸಗಂಗೋತ್ರಿ ರಾಜ್ಯಶಾಸ್ತ್ರ ಅಧ್ಯಯನ ವಿಭಾಗ ನಿವೃತ್ತ ಪ್ರಾಧ್ಯಾಪಕ ಪ್ರೊ.ಎಚ್.ಎಂ.ನಾಗಶೇಖರ, ವಿಷಯ: 'ಭಾರತದ ಸಂವಿಧಾನ: ಭಾರತೀಯ ರಾಜಕೀಯ ವ್ಯವಸ್ಥೆ' ಅಧ್ಯಕ್ಷತೆ: ರಾಜ್ಯಶಾಸ್ತ್ರ ಅಧ್ಯಯನ ವಿಭಾಗದ ಅಧ್ಯಕ್ಷ ಪ್ರೊ.ಕೃಷ್ಣ ಹೊಂಬಾಳ್, ಸ್ಥಳ: ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.

■ **ವಿದ್ಯಾವರ್ಧಕ ಸಂಘ, ವಿದ್ಯಾವರ್ಧಕ ಕಾನೂನು ಕಾಲೇಜು:** ಸಂವಿಧಾನ ದಿನ ಆಚರಣೆ, ಮುಖ್ಯ ಅತಿಥಿ: ರಾಜ್ಯ ಬಾರ್ ಕೌನ್ಸಿಲ್‌ನ ಮಾಜಿ ಉಪಾಧ್ಯಕ್ಷರಾದ, ಹಿರಿಯ ವಕೀಲ ಬಿ.ಆರ್.ಚಂದ್ರಮೌಳಿ, ಅಧ್ಯಕ್ಷತೆ: ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಸ್ಥಳ: ಪಿ.ಎಂ.ಚಿಕ್ಕಬೋರಯ್ಯ ಸಭಾಂಗಣ, ಕಾಲೇಜು ಆವರಣ, ಬೆಳಗ್ಗೆ 11.30ಕ್ಕೆ.

■ **ಜೆಎಸ್‌ಎಸ್ ಮಹಾ ವಿದ್ಯಾಪೀಠ, ಜೆಎಸ್‌ಎಸ್ ನರ್ಸಿಂಗ್ ಕಾಲೇಜು, ಜೆಎಸ್‌ಎಸ್ ವಾಕ್ ಮತ್ತು ಶ್ರವಣ ಸಂಸ್ಥೆ, ಜೆಎಸ್‌ಎಸ್ ಫಿಸಿಯೋಥೆರಪಿ ಕಾಲೇಜು, ಜೆಎಸ್‌ಎಸ್ ನರ್ಸಿಂಗ್ ಶಾಲೆ:** 68ನೇ ಕನ್ನಡ ರಾಜ್ಯೋತ್ಸವ ಸಮಾರಂಭ, ಮುಖ್ಯ ಅತಿಥಿಗಳು: ಮೈಸೂರು ವಿಶ್ವವಿದ್ಯಾನಿಲಯ ಸಂದರ್ಶಕ ಪ್ರಾಧ್ಯಾಪಕರು ಮತ್ತು ಲೇಖಕರೂ ಆದ ಡಾ.ಸಿ.ನಾಗಣ್ಣ, ಅಧ್ಯಕ್ಷತೆ: ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕ ಆರ್. ಮಹೇಶ್, ಸ್ಥಳ: ಡಾ.ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣ, ಜೆಎಸ್‌ಎಸ್ ಆಸ್ಪತ್ರೆ, ಬೆಳಗ್ಗೆ 11ಕ್ಕೆ.

■ **ಶಾರದಾ ವಿಲಾಸ ವಿದ್ಯಾಸಂಸ್ಥೆಗಳು, ಶಾರದಾ ವಿಲಾಸ ಕಾಲೇಜು:** ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ, ಸ್ಥಳ: ಎಂ.ವೆಂಕಟಕೃಷ್ಣಯ್ಯ ಸಭಾಂಗಣ, ಶಾರದಾ ವಿಲಾಸ ಕಾಲೇಜು, ಬೆಳಗ್ಗೆ 11.30ಕ್ಕೆ

■ **ಶ್ರೀ ನಟರಾಜ ಪ್ರತಿಷ್ಠಾನ, ಶ್ರೀನಟರಾಜ ಮಹಿಳಾ ಪ್ರಥಮ ದರ್ಜೆ ಕಾಲೇಜು:** ರಾಷ್ಟ್ರೀಯ ಸೇವಾ ಯೋಜನೆ, ಸಂವಿಧಾನ ದಿನಾಚರಣೆ, ದಿವ್ಯಸಾನ್ನಿಧ್ಯ: ಶ್ರೀ ನಟರಾಜ ಪ್ರತಿಷ್ಠಾನದ ಅಧ್ಯಕ್ಷ ಶ್ರೀ ಚಿದಾನಂದ ಮಹಾಸ್ವಾಮಿ, ಮುಖ್ಯ ಅತಿಥಿ: ವಕೀಲರಾದ ಕೆ.ವಿ.ವಾಸು, ಅಧ್ಯಕ್ಷತೆ: ಶ್ರೀ ನಟರಾಜ ಪ್ರತಿಷ್ಠಾನದ ವಿಶೇಷಾಧಿಕಾರಿ ಪ್ರೊ.ಎಸ್.ಶಿವರಾಜಪ್ಪ, ಸ್ಥಳ: ಸೆಮಿನಾರ್ ಹಾಲ್, ಕಾಲೇಜು ಆವರಣ, ಬೆಳಗ್ಗೆ 11 ಗಂಟೆಗೆ.

ತುಂಬಸೋಗೆಯಲ್ಲಿ ಇಂದು (ಹೆಚ್.ಡಿ.ಕೋಟೆ)

■ **ಮೈಸೂರು ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಹೆಚ್.ಡಿ.ಕೋಟೆ ತಾ. ತುಂಬಸೋಗೆಯ ಎಂಎಂಕೆ ಸ್ವತಂತ್ರ ಪದವಿಪೂರ್ವ ಕಾಲೇಜು, ಸರಗೂರು ತಾಲೂಕು ಶರಣ ಸಾಹಿತ್ಯ ಪರಿಷತ್ತು:** ದತ್ತಿ ಉಪನ್ಯಾಸ ಸಮಾರಂಭ, ಉದ್ಘಾಟನೆ: ಅಧ್ಯಕ್ಷ ಡಾ.ಹೆಳವರಹುಂಡಿ ಸಿದ್ದಪ್ಪ, ಅಧ್ಯಕ್ಷತೆ: ತುಂಬಸೋಗೆ ಎಂಎಂಕೆ ಕಾಲೇಜು ಪ್ರಾಂಶುಪಾಲ ಎಸ್.ಪಿ.ಪ್ರಕಾಶ್, ಸ್ಥಳ: ಎಂಎಂಕೆ ಕಾಲೇಜು ಸಭಾಂಗಣ, ತುಂಬಸೋಗೆ, ಮಧ್ಯಾಹ್ನ 2 ಗಂಟೆಗೆ.

ಮೈಸೂರು ಆಕಾಶವಾಣಿ



6.10 ಚಿಂತನ–ಡಾ.ಪಾದೆಕಲ್ಲು ವಿಷ್ಣು ಭಟ್, 6.15 ಗೀತಾರಾಧನ, 6.35 ಹಾಗೂಈ 6.10 'ಅಂಚೆ–ಅಂಕನ' ಆಕಾಶವಾಣಿ ಅಂಕಣ: ಪ್ರಾಯೋಜಿತ ಬಾನುಲಿ ಸರಣಿ, 6.40 ಪದ ಸಂಸ್ಕೃತಿ: ಡಾ.ಶ್ರೀಧರ ಹೆಗಡೆ ಭದ್ರನ್, 6.45 'ಕಲ್ಯಾಣ ಕರೆದಿದೆ ಕಲ್ಯಾಣ' ಪ್ರಾಯೋಜಿತ ಕಾರ್ಯಕ್ರಮ, 6.50 ರೈತರಿಗೆ ಸಲಹೆ, 8.30 WALMI 'ಜಲ ನೆಲ ಜಾಗೃತಿ' ರೈತರ ಸೇವೆಯಲ್ಲಿ ವಾಲ್ಮಿ–ಈ ಕುರಿತು ವಾಲ್ಮಿಯ ನಿರ್ದೇಶಕ ಬಸವರಾಜ ಬಂಡಿವಡ್ಡರ ಅವರೊಂದಿಗೆ ಸಂದರ್ಶನ, 9.00 ನೆನಪಿನಂಗಳ–ಅಣು ವಿಜ್ಞಾನಿ ಡಾ.ರಾಜಾರಾಮಣ್ಣ ಅವರೊಂದಿಗೆ ಪಟ್ನಾಯಕ್ ಅವರು ನಡೆಸಿದ್ದ ಸಂವಾದ, 10.00 ಹೆಚ್.ಎನ್.ಭಾಸ್ಕರ್–ಪಿಟೀಲುವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ. 12.30 ದೇವರನಾಮ: ವೃಂದಗಾನ, 12.45 ನಮ್ಮ ಆರೋಗ್ಯ: "ಏಡ್ಸ್ ಕಾಯಿಲೆ–ಲಕ್ಷಣಗಳು, ಮುನ್ನೆಚ್ಚರಿಕೆ ಮತ್ತು ಚಿಕಿತ್ಸೆ" ಕುರಿತು ಡಾ.ಮಹಮದ್ ಸಿರಾಜ್ ಅಹಮದ್ ಅವರೊಂದಿಗೆ ಮಾತುಕತೆ, 1.25 ಭಾವಗೀತೆಗಳು: ಸಿ.ಶಶಿಕಲಾ ಚಂದ್ರಶೇಖರ್, 3.00 ಹೆಚ್.ಸಿ.ಸತೀಶ್ ಮತ್ತು ವೃಂದದವರಿಂದ ನಾದಸ್ವರ. 4.00 ಮಹಿಳಾರಂಗ: ಡಾಕ್ಟರ್ ಸಮಯ, ವಿಷಯ–ಗರ್ಭ ಧರಿಸುವ ಮುನ್ನ ಹಾಗೂ ನಂತರ ವಹಿಸಬೇಕಾದ ಜಾಗ್ರತೆಗಳು. ಭಾಗವಹಿಸುವವರು–ಆಯುರ್ವೇದ ತಜ್ಞೆ ಡಾ. ನಾಗಶ್ರೀ, 4.45 ಹಿಂದಿ ಪಾಠ: ಎಸ್. ಈಶ್ವರ ಭಟ್, 6.00 'ಅಂಚೆ–ಅಂಕನ ಆಕಾಶವಾಣಿ ಅಂಕಣ': ಪ್ರಾಯೋಜಿತ ಬಾನುಲಿ ಸರಣಿ, 6.50 ಕೃಷಿರಂಗ: 'ಹಣ್ಣು ಹೊನ್ನು' ಜೈವಿಕ ಗೊಬ್ಬರಗಳ ಉತ್ಪಾದನೆ ಹಾಗೂ ಬಳಕೆ ಕುರಿತು ಸಂವಾದದಲ್ಲಿ ಭಾಗವಹಿಸುತ್ತಾರೆ ಎಂ.ಎಸ್.ರಾಜು ಹಾಗೂ ಡಾ. ದಯಾಮಣಿ ಕೆ.ಜೆ. 9.30 ಮತ್ತೆ ಕೇಳಿ "ಹಾದಿಯಲ್ಲಿ ಕಂಡ ಮುಖ": ಗಿಡಮೂಲಿಕೆ ಮಾರುವ ಆದಿವಾಸಿ ಜನಾಂಗಕ್ಕೆ ಸೇರಿದ ಪಸ್ತುಂ ಗುರುವಯ್ಯ ಅವರೊಂದಿಗೆ ಸಂದರ್ಶನ. ಸಂದರ್ಶಕರು– ಅಬ್ದುಲ್ ರಶೀದ್, 10.00 ನಾಟಕ.

ಕ್ಲಿಷ್ಟಕರ 'ಥೈರಾಯ್ಡೆಕ್ಟಮಿ' ಯಶಸ್ವಿ ಶಸ್ತ್ರ ಚಿಕಿತ್ಸೆ

ಮೈಸೂರು, ನ.26(ಎಂಕೆ)– ಥೈರಾಯಿಡ್ ಕಾಯಿಲೆಯ ಕ್ಲಿಷ್ಟಕರ ಸಮಸ್ಯೆ ಎದುರಿಸುತ್ತಿದ್ದ ಮಹಿಳೆಯೊಬ್ಬರಿಗೆ ಕೆ.ಆರ್.ಆಸ್ಪತ್ರೆ ಶಸ್ತ್ರ ಚಿಕಿತ್ಸಾ ತಜ್ಞರೂ ಆದ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶಸ್ತ್ರ ಚಿಕಿತ್ಸಾ ವಿಭಾಗದ ಪ್ರಾಧ್ಯಾಪಕ ಡಾ.ಬಿ.ಎನ್. ಆನಂದರವಿ ಅಪರೂಪದ ಶಸ್ತ್ರ ಚಿಕಿತ್ಸೆ ನಡೆಸಿ ಯಶಸ್ವಿಯಾಗಿದ್ದಾರೆ.



ಗಂಟಲಿನ ಬಲಭಾಗದಲ್ಲಿ ಊದುಕೊಳ್ಳುವ 'ರೈಟ್ ಸೋಲಿಟರಿ ನಾಡ್ಯುಲ್(right solitary nodule)ಎಂಬ ಖಾಯಿಲೆಯಿಂದ ಬಳಲುತ್ತಿದ್ದ 50 ವರ್ಷದ ಮಹಿಳಾ ರೋಗಿಗೆ 'ಲ್ಯಾಪರೋಸ್ಕೋಪಿ ರೈಟ್ ಹೆಮಿ ಥೈರಾಯ್ಡೆಕ್ಟಮಿ'(ಥೈರಾಯ್ಡ್ ಗ್ರಂಥಿಯನ್ನು ತೆಗೆಯುವ ಶಸ್ತ್ರ ಚಿಕಿತ್ಸೆ) ಶಸ್ತ್ರ ಚಿಕಿತ್ಸೆಯನ್ನು ಯಶಸ್ವಿಯಾಗಿ ನಡೆಸುವ ಮೂಲಕ ಯುವ ವೈದ್ಯರಿಗೆ ಪ್ರೇರಣೆಯಾಗಿದ್ದಾರೆ.

ಕೆ.ಆರ್.ಆಸ್ಪತ್ರೆ ಆಸ್ಪತ್ರೆಯಲ್ಲಿ 'ಲ್ಯಾಪರೋಸ್ಕೋಪಿ' ವಿಧಾನದಲ್ಲಿ ಅಳವಡಿಸಿಕೊಂಡು ಥೈರಾಯ್ಡೆಕ್ಟಮಿ ಶಸ್ತ್ರ ಚಿಕಿತ್ಸೆ ಮಾಡುವಲ್ಲಿ ಪರಿಣಿತಿ ಪಡೆದಿರುವ ಡಾ.ಆನಂದರವಿ, ಇದುವರೆಗೂ ಮೂವರು ರೋಗಿಗಳಿಗೆ ಥೈರಾಯ್ಡೆಕ್ಟಮಿ ಶಸ್ತ್ರ ಚಿಕಿತ್ಸೆ ಮಾಡಿದ್ದು, ಥೈರಾಯಿಡ್ ಕಾಯಿಲೆಯಿಂದ ಬಳಲುತ್ತಿದ್ದವರನ್ನು ಗುಣಮುಖರನ್ನಾಗಿಸಿದ್ದಾರೆ.

ಕ್ಲಿಷ್ಟಕರವಾದರೂ ಅನುಕೂಲ: ರೋಗಿಗೆ ಅನುಕೂಲವಾಗುವ 'ಥೈರಾಯ್ಡೆಕ್ಟಮಿ' ಶಸ್ತ್ರ ಚಿಕಿತ್ಸೆ ಅತ್ಯಂತ ಕ್ಲಿಷ್ಟಕರವಾಗಿದ್ದು, ಸಾಮಾನ್ಯ ಶಸ್ತ್ರ ಚಿಕಿತ್ಸೆಗಿಂತ ಭಿನ್ನ ವಾದುದಾಗಿದೆ. 2–3 ಇಂಚು ಊದು ಕೊಂಡಿರುವ ಗಂಟಲಿನ ಭಾಗವನ್ನು ಸಾಮಾನ್ಯ ಶಸ್ತ್ರ ಚಿಕಿತ್ಸೆಯಲ್ಲಿ ತೆಗೆಯುವುದರಿಂದ ಕತ್ತಿನಲ್ಲಿ ಗಾಯದ ಕಲೆ(ಮಾರ್ಕ್) ಉಳಿಯುವುದಲ್ಲದೆ ರಕ್ತ ಸ್ರಾವ ಉಂಟಾಗುವ ಸಾಧ್ಯತೆ ಹೆಚ್ಚು. ಆದರೆ, 'ಥೈರಾಯ್ಡೆಕ್ಟಮಿ' ಶಸ್ತ್ರ ಚಿಕಿತೆಯಿಂದ ಕತ್ತಿನಲ್ಲಿ ಯಾವುದೇ ಕಲೆ ಉಳಿಯುವುದಿಲ್ಲ. ಹಾಗೆಯೇ ರಕ್ತ ಸ್ರಾವವಿಲ್ಲದೆ, ಧ್ವನಿಯಲ್ಲೂ ಯಾವುದೇ ಬದಲಾವಣೆಗಳಾಗುವುದಿಲ್ಲ ಎಂದು ಕೆ.ಆರ್. ಆಸ್ಪತ್ರೆ ಶಸ್ತ್ರ ಚಿಕಿತ್ಸಾ ತಜ್ಞ ಡಾ.ಆನಂದರವಿ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಮಹಿಳೆಯರಲ್ಲಿ ಹೆಚ್ಚು: ಥೈರಾಯಿಡ್ ಸಮಸ್ಯೆ ಹೆಚ್ಚಾಗಿ ಮಹಿಳೆಯರಲ್ಲಿ ಅದರಲ್ಲಿಯೂ ಮಧ್ಯ ವಯಸ್ಸಿನ ಮಹಿಳೆಯರಲ್ಲಿ ಹೆಚ್ಚಾಗಿ ಕಂಡು ಬರುತ್ತಿದೆ. ಅಯೋಡಿನ್ ಕೊರತೆ ಹಾಗೂ ಅನುವಂಶಿತೆಯಿಂದ ಥೈರಾಯಿಡ್ ಖಾಯಿಲೆ ಕಾಣಿಸಿಕೊಳ್ಳಲಿದೆ. ಸೂಕ್ತ ಸಮಯದಲ್ಲಿ ಶಸ್ತ್ರ ಚಿಕಿತ್ಸೆಯಾಗದಿದ್ದರೆ ಕ್ಯಾನ್ಸರ್‌ಗೆ ತಿರುಗುವ ಸಾಧ್ಯತೆ ಹೆಚ್ಚಾಗಿರಲಿದೆ. ಹಾಗೆಯೇ ಉಸಿರಾಟಕ್ಕೂ ತೊಂದರೆಯಾಗಲಿದೆ ಎಂದು ಎಚ್ಚರಿಸಿದರು.

ಮೈಸೂರಲ್ಲಿ ಬುಡಕಟ್ಟು ಸಮುದಾಯದಿಂದ ಬೃಹತ್ ಪ್ರತಿಭಟನೆ

ಮತಾಂತರಗೊಂಡಿರುವ ಬುಡಕಟ್ಟು ಸಮುದಾಯ ಎಸ್‌ಟಿ ಪಟ್ಟಿಯಿಂದ ಕೈಬಿಡಲು ಆಗ್ರಹ





ಮೈಸೂರು, ನ.26(ಎಂಟಿವೈ)– ಮತಾಂತರಗೊಂಡಿರುವ ಬುಡಕಟ್ಟು ಸಮುದಾಯದವರನ್ನು ಪರಿಶಿಷ್ಟ ಪಂಗಡದ ಪಟ್ಟಿಯಿಂದ ಕೈಬಿಡುವಂತೆ ಆಗ್ರಹಿಸಿ ಮೈಸೂರಲ್ಲಿ ಭಾನುವಾರ ಗಿರಿಜನ ಸುರಕ್ಷಾ ವೇದಿಕೆ ನೇತೃತ್ವದಲ್ಲಿ ವಿವಿಧ ಪಂಗಡಗಳ ಬುಡಕಟ್ಟು ಸಮುದಾಯದ ನೂರಾರು ಮಂದಿ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿದರು.

ಮೈಸೂರಿನ ಮಹಾರಾಜ ಪದವಿ ಪೂರ್ವ ಕಾಲೇಜಿನ ಮೈದಾನದಲ್ಲಿ ಗಿರಿಜನ ಸುರಕ್ಷಾ ವೇದಿಕೆ ಆಯೋಜಿಸಿದ್ದ ಡಿ ಲಿಸ್ಟಿಂಗ್ ರ್‍ಯಾಲಿ ಹಾಗೂ ಸಮಾವೇಶದಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಿಂದ ಬುಡಕಟ್ಟು ಸಮುದಾಯ ಜನ ಆಗಮಿಸಿ ಬೇಡಿಕೆ ಈಡೇರಿಕೆಗೆ ಆಗ್ರಹಿಸಿದರು. ಮುಸ್ಲಿಂ, ಕ್ರೈಸ್ತ ಧರ್ಮಗಳಿಗೆ ಮತಾಂತರಗೊಂಡ ಗಿರಿಜನರಿಗೆ ಸಾಂವಿಧಾನಿಕ ಹಕ್ಕು ನೀಡಬಾರದು. ಅವರನ್ನು ಸಮುದಾಯದಿಂದ ದೂರ ಇಡಬೇಕು. ಸನಾತನ ಧರ್ಮ ಪಾಲನೆ ಮಾಡಬೇಕು ಎಂದು ಪ್ರತಿಜ್ಞಾ ವಿಧಿ ಸ್ವೀಕರಿಸಿದರು.

ಪ್ರತಿಭಟನಾ ರ್‍ಯಾಲಿಯಲ್ಲಿ ಪಾಲ್ಗೊಂಡಿದ್ದ ಬುಡಕಟ್ಟು ಸಮುದಾಯದ ಜನ ಕೇಸರಿ ಶಾಲು ಧರಿಸಿ, ಕೈಯ್ಯಲ್ಲಿ ಬಿಳಿ ಬಣ್ಣದ ಬಾವುಟ ಹಿಡಿದು ಘೋಷಣೆ ಕೂಗುತ್ತಾ ಸಾಗಿದರು. ಕಾಲೇಜು ಮೈದಾನದಿಂದ ಜೆಎಲ್‌ಬಿ ರಸ್ತೆ ವಿನೋಬಾ ರಸ್ತೆ ಚಿಕ್ಕಗಡಿಯಾರ ವೃತ್ತದ ಮೂಲಕ ಡಿ.ದೇವರಾಜ ಅರಸ್ ರಸ್ತೆಯಲ್ಲಿ ಸಾಗಿ, ಮಹಾರಾಜ ಪದವಿ ಪೂರ್ವ ಕಾಲೇಜು ಮೈದಾನ ತಲುಪಿಸಿದರು.

ಬಳಿಕ ನಡೆದ ಸಮಾವೇಶದಲ್ಲಿ ವಿಧಾನ ಪರಿಷತ್ ಸದಸ್ಯ ಶಾಂತರಾಂ ಸಿದ್ದಿ ಮಾತನಾಡಿ, ಬುಡಕಟ್ಟು ಜನರು ಪ್ರಕೃತಿಯ ಆರಾಧಕರಾಗಿದ್ದಾರೆ. ನಾವೆಲ್ಲೂ ಹಿಂದೂಗಳು ಎಂದು ಹೇಳಿಲ್ಲ. ಸ್ವಾವಲಂಬಿಯಾಗಿ ನಮ್ಮ ಸಂಸ್ಕೃತಿ ಆಚರಣೆ ಮಾಡುತ್ತಿದ್ದೇವೆ. ಸನಾತನ ಧರ್ಮ ಪ್ರಕೃತಿ ಆರಾಧಿಸುತ್ತದೆ. ಸನಾತನ ಧರ್ಮಕ್ಕೂ ಹಿಂದೂ ಧರ್ಮಕ್ಕೂ ವ್ಯತ್ಯಾಸವಿಲ್ಲ. ನಾವು ಸ್ವಾವಲಂಬಿಯಾಗಿ ಧರ್ಮ ಹಾಗೂ ಸಂಸ್ಕೃತಿ ರಕ್ಷಣೆಗೆ ಮುಂದಾಗಬೇಕು. ಮತಾಂತರಗೊಂಡು ವಿದೇಶಿ ದೇವರನ್ನು ಪೂಜಿಸುವವರನ್ನು ಬುಡಕಟ್ಟು ಸಮುದಾಯದಿಂದ ಹೊರ ಹಾಕಬೇಕು. ನಮ್ಮ ಆಚಾರ, ಸಂಸ್ಕೃತಿಯನ್ನು ತೊರೆದವರಿಗೆ ನಮಗೆ ಸಿಗಬೇಕಾದ ಸೌಲಭ್ಯ ನೀಡಬಾರದು ಎಂದರು.

ಇತ್ತೀಚಿನ ದಿನಗಳಲ್ಲಿ ಆಮಿಷವೊಡ್ಡಿ ಬಲವಂತದಿಂದ ಗಿರಿಜನನ್ನು ಮತಾಂತರ ಮಾಡಲಾಗುತ್ತಿದೆ. ಇದರಿಂದ ನಮ್ಮ ಮೂಲ ಸಂಸ್ಕೃತಿಗೆ ಧಕ್ಕೆಯಾಗುತ್ತಿದೆ. ಇದನ್ನು ತಡೆಗಟ್ಟಲು ಕಾನೂನಾತ್ಮಕ ಬೇಡಿಕೆ ಮುಂದಿಟ್ಟು ಹೋರಾಟ ಮಾಡುತ್ತಿದ್ದೇವೆ. ಇದಕ್ಕೆ ಸರ್ಕಾರ ಸ್ಪಂದಿಸಬೇಕು. ನೆಲ, ಜಲ ಮತ್ತು ಕಾಡು ನಮ್ಮ ಹಕ್ಕು. ಇದರಿಂದ ರಾಜ್ಯದಲ್ಲಿ ಅರಣ್ಯ ಹಕ್ಕು ಕಾಯ್ದೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕು. ಕಾಡಿನಲ್ಲಿರುವವರಿಗೆ ಹಕ್ಕು ಪತ್ರ ನೀಡಬೇಕು. ಮುಜಾಫರ್ ಅಸಾದಿ ವರದಿ ಅನುಷ್ಠಾನವಾಗಬೇಕು ಎಂದು ಒತ್ತಾಯಿಸಿದರು.

ಕಾರ್ಯಕ್ರಮದಲ್ಲಿ ಪೊನ್ನಂಪೇಟೆ ಅರಣ್ಯ ಕಾಲೇಜಿನ ಪ್ರೊ. ಜಡೇಗೌಡ, ಇರುಳಿಗ ಸಮಾಜದ ರಾಜ್ಯ ಪ್ರಮುಖ ಮಹದೇವಯ್ಯ, ಮಹಾರಾಷ್ಟ್ರ ಹೈಕೋರ್ಟ್ ವಕೀಲ ಕಿಣ ಗಬಾಲೆ, ಆಹ್ವಾನಿತ ಸದಸ್ಯ ಚಂದ್ರಶೇಖರ, ಪುಟ್ಟಮ್ಮ ವಡ್ಡಗುಡಿ, ಗಿರಿಜನ ಸುರಕ್ಷಾ ವೇದಿಕೆ ಅಧ್ಯಕ್ಷ ಡಾ.ಗಣೇಶ್, ವಕೀಲರಾದ ಮೇದಪ್ಪ, ಕೇಶವಮೂರ್ತಿ, ಸಾಮಾಜಿಕ ಕಾರ್ಯಕರ್ತ ತುಳಮ್ಮ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

2ನೇ ಟಿ20: ಭಾರತಕ್ಕೆ 44 ರನ್ ಗೆಲುವು



ತಿರುವನಂತಪುರ, ನ.26– ಯಶಸ್ವಿ ಜೈಸ್ವಾಲ್, ಋತುರಾಜ್ ಗಾಯಕ್ವಾಡ್ ಹಾಗೂ ಇಶಾನ್ ಕಿಶಾನ್ ಅವರ ಅರ್ಧಶತಕಗಳ ನೆರವಿನಿಂದ ಭಾರತ ಆಸ್ಟ್ರೇಲಿಯಾ ವಿರುದ್ಧದ 2ನೇ ಟಿ20 ಪಂದ್ಯದಲ್ಲಿ 44 ರನ್‌ಗಳ ಜಯ ಸಾಧಿಸಿದೆ. ಆ ಮೂಲಕ ಐದು ಪಂದ್ಯಗಳ ಸರಣಿಯಲ್ಲಿ 2–0 ಅಂತರದ ಮುನ್ನಡೆ ಗಳಿಸಿದೆ.

ಇಲ್ಲಿನ ಗ್ರೀನ್‌ಫೀಲ್ಡ್ ಕ್ರೀಡಾಂಗಣದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಭಾರತಕ್ಕೆ ಯಶಸ್ವಿ ಜೈಸ್ವಾಲ್ ಹಾಗೂ ಋತುರಾಜ್ ಗಾಯಕ್ವಾಡ್ ಮೊದಲ ವಿಕೆಟ್‌ಗೆ 77 ರನ್‌ಗಳ ಜೊತೆಯಾಟವಾಡುವ ಮೂಲಕ ಉತ್ತಮ ಆರಂಭ ಒದಸಿದರು. ಸ್ಫೋಟಕ ಬ್ಯಾಟಿಂಗ್ ನಡೆಸಿದ ಯಶಸ್ವಿ ಜೈಸ್ವಾಲ್ ಅರ್ಧಶತಕ ಬಾರಿಸಿ ಮಿಂಚಿದರು. ಆದರೆ 25 ಎಸೆತಗಳಲ್ಲಿ 2 ಸಿಕ್ಸರ್, 4 ಬೌಂಡರಿ ಒಳಗೊಂಡ 53 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ನಂತರ ಬಂದ ಕಿಶಾನ್ ಕಿಶನ್ ಕೂಡ ಬಿರುಸಿನ ಆಟವಾಡಿದರು. 32 ಎಸೆಗಳಲ್ಲಿ 4 ಸಿಕ್ಸರ್, 3 ಬೌಂಡರಿ ಒಳಗೊಂಡ 52 ರನ್ ಗಳಿಸಿ ನಿರ್ಗಮಿಸಿದರು. ನಂತರ ಬಂದ ನಾಯಕ ಸೂರ್ಯಕುಮಾರ್ ಯಾದವ್ 19 ರನ್ ಗಳಿಸಿ ಔಟಾದರು. ಮತ್ತೊಂದೆಡೆ ತಾಳ್ಮೆಯಾಟವಾಡಿದ ಋತುರಾಜ್ ಗಾಯಕ್ವಾಡ್ 58 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಇನ್ನಿಂಗ್ಸ್ ಕೊನೆಯಲ್ಲಿ ಮಿಂಚಿನ ಬ್ಯಾಟಿಂಗ್ ಮಾಡಿದ ರಿಂಕು ಸಿಂಗ್ ಕೇವಲ 9 ಎಸೆತಗಳಲ್ಲಿ 4 ಬೌಂಡರಿ, 2 ಸಿಕ್ಸರ್ ಒಳಗೊಂಡ 31ರನ್ ಗಳಿಸಿ ತಂಡದ ಮೊತ್ತವನ್ನು 200ರ ಗಡಿ ದಾಟಿಸಿದರು. ಅಂತಿಮವಾಗಿ ಭಾರತ 20 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 235 ರನ್ ಗಳಿಸಿತು. ಆಸ್ಟ್ರೇಲಿಯಾ ಪರ ನಾಥನ್ ಎಲೀಸ್ 3, ಮಾರ್ಕಸ್ ಸ್ಟೋಯ್ನಿಸ್ 1 ವಿಕೆಟ್ ಪಡೆದರು.

236ರನ್‌ಗಳ ಗೆಲುವಿನ ಗುರಿಬೆನ್ನತ್ತಿದ ಆಸ್ಟ್ರೇಲಿಯಾ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 191ರನ್ ಗಳಿಸಲಷ್ಟೇ ಶಕ್ತವಾಯಿತು. ತಂಡದ ಪರ ಸ್ಟೀವನ್ ಸ್ಮಿತ್, ಮ್ಯಾಥ್ಯೂ ಶಾರ್ಟ್ ತಲಾ 19, ಗ್ಲೆನ್ ಮ್ಯಾಕ್ಸ್‌ವೆಲ್ 12, ಮಾರ್ಕಸ್ ಸ್ಟೋಯ್ನಿಸ್ 45, ಟಿಮ್ ಡೇವಿಡ್ 37, ನಾಯಕ ಮ್ಯಾಥ್ಯೂ ವೇಡ್ 42 ರನ್ ಗಳಿಸಿದರು. ಭಾರತದ ಪರ ಪ್ರಸಿದ್ಧ ಕೃಷ್ಣ, ರವಿ ಬಿಷ್ಣೋಯ್ ತಲಾ 3, ಹರ್ಷದೀಪ್ ಸಿಂಗ್, ಅಕ್ಷರ್ ಪಟೇಲ್ ಹಾಗೂ ಮುಖೇಶ್ ಕುಮಾರ್ ತಲಾ ಒಂದೊಂದು ವಿಕೆಟ್ ಪಡೆದರು. ಯಶಸ್ವಿ ಜೈಸ್ವಾಲ್ ಪಂದ್ಯಶ್ರೇಷ್ಠ ಗೌರವ ಪಡೆದರು.

ಗಾಯದಿಂದ ಬಳಲುತ್ತಿದ್ದ ನಿವೃತ್ತ ಶಿಕ್ಷಕನಿಗೆ ನೆರವು

ಮೈಸೂರು, ನ.26(ಎಂಟಿವೈ)– ಜಾರಿ ಬಿದ್ದು ಕಾಲಿನ ಮೂಳೆ ಮುರಿತದಿಂದ ಬಳಲುತ್ತಿದ್ದ ನಿವೃತ್ತ ಶಿಕ್ಷಕರೊಬ್ಬರನ್ನು ಆಶಾ ಕಾರ್ಯಕರ್ತೆಯೊಬ್ಬರು ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸುವ ಮೂಲಕ ಮಾನವೀಯತೆ ಪ್ರದರ್ಶಿಸಿದ್ದು, ಸ್ಥಳೀಯರಿಂದ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.



ಮೈಸೂರಿನ ಕುಂಬಾರಕೊಪ್ಪಲಿನ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಆಶಾ ಕಾರ್ಯಕರ್ತೆಯಾಗಿ ಕರ್ತವ್ಯ ನಿರ್ವಹಿಸುತ್ತಿರುವ ಶೋಭಾ ಎಂಬುವರು ತಮ್ಮ ಕಾರ್ಯ ಒತ್ತಡದಲ್ಲೂ ಮನೆಯಲ್ಲೇ ನೋವಿನಿಂದ ಬಳಲುತ್ತಿದ್ದ ನಿವೃತ್ತ ಶಿಕ್ಷಕರೊಬ್ಬರಿಗೆ ನೆರವಾಗಿ ಪ್ರಶಂಸೆಗೆ ಪಾತ್ರರಾಗಿದ್ದಾರೆ. ಖಾಸಗಿ ಶಾಲೆಯೊಂದರಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸಿ, ನಿವೃತ್ತರಾಗಿರುವ 60 ವರ್ಷದ ಮಹದೇವ ಎಂಬುವರು ಪತ್ನಿಯೊಂದಿಗೆ ಮೈಸೂರಿನ ಭೈರವೇಶ್ವರ ನಗರದಲ್ಲಿ ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದಾರೆ. ಮಕ್ಕಳಿಲ್ಲದ ಕಾರಣ ದಂಪತಿ ಮಾತ್ರ ಮನೆಯಲ್ಲಿದ್ದು, 4 ತಿಂಗಳ ಹಿಂದೆ ಸ್ನಾನದ ಮನೆಯಲ್ಲಿ ಮಹದೇವ ಅವರು ಕಾಲು ಜಾರಿ ಬಿದ್ದು ತೊಡೆಯ ಮೂಳೆ ಮುರಿತಕ್ಕೆ ಒಳಗಾಗಿದ್ದಾರೆ. ಬಡತನ ಹಾಗೂ ಹಣವಿಲ್ಲದ ಕಾರಣ ಚಿಕಿತ್ಸೆ ಪಡೆಯುವುದಕ್ಕೂ ಆಗದೆ ಮನೆಯಲ್ಲೇ ನೋವನುಭವಿಸುತ್ತಿದ್ದರು. ಗರ್ಭಿಣಿಯರ ಸಮೀಕ್ಷೆಗೆ ಬಂದ ಆಶಾ ಕಾರ್ಯಕರ್ತೆ ಶೋಭಾ ಅವರಿಗೆ ಸ್ಥಳೀಯರು ಮಹದೇವ ಅವರ ಆರೋಗ್ಯದ ಪರಿಸ್ಥಿತಿ ಹಾಗೂ ಬಡತನದಿಂದ ಚಿಕಿತ್ಸೆ ಪಡೆದುಕೊಳ್ಳದಿರುವ ಬಗ್ಗೆ ಮಾಹಿತಿ ನೀಡಿದ್ದಾರೆ. ಕೂಡಲೇ ಮನೆಗೆ ಹೋಗಿ ಮಾಹಿತಿ ಪಡೆದ ಆಶಾ ಕಾರ್ಯಕರ್ತೆ ಶೋಭಾ, ಮಹದೇವ ಅವರನ್ನು ಆಂಬುಲೆನ್ಸ್‌ಗೆ ಕರೆಸಿ ಜಿಲ್ಲಾ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಿದ್ದಾರೆ.

ಮಹದೇವ ಬಳಿ ಆಧಾರ್ ಕಾರ್ಡ್, ರೇಷನ್ ಕಾರ್ಡ್ ಇರದ ಕಾರಣ ಉಚಿತ ಚಿಕಿತ್ಸೆ ನೀಡಲು ಅವಕಾಶವಿರಲಿಲ್ಲ. ಇದನ್ನು ಗಮನಿಸಿದ ಶೋಭಾ, ತಾವು ಕಾರ್ಯನಿರ್ವಹಿಸುವ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವೈದ್ಯಾಧಿಕಾರಿ ಡಾ.ರಮ್ಯಾ ಅವರ ಸಲಹೆ ಪಡೆದಿದ್ದಾರೆ. ಅಲ್ಲದೆ, ಚಾಮರಾಜ ಕ್ಷೇತ್ರ ಶಾಸಕ ಕೆ.ಹರೀಶ್ ಗೌಡ ಅವರ ಗಮನಕ್ಕೆ ತಂದಿದ್ದಾರೆ. ಇದರಿಂದ ಚಿಕಿತ್ಸಾ ವೆಚ್ಚ ಭರಿಸಿರುವ ಶಾಸಕ ಕೆ.ಹರೀಶ್‌ಗೌಡ ಗಾಯಾಳುವಿಗೆ ನೆರವಾಗಿದ್ದಾರೆ. ಇದರಿಂದ ಗಾಯಾಳು ಮಹದೇವ ಅವರ ಆರೋಗ್ಯ ಸುಧಾರಿಸಿದ್ದು, ಅವರಿಗೆ ನೆರವಾದ ಆಶಾ ಕಾರ್ಯಕರ್ತೆ ಶೋಭಾ ಅವರ ಕಾರ್ಯವೈಖರಿಗೆ ಸ್ಥಳೀಯರು ಹಾಗೂ ಆಸ್ಪತ್ರೆ ಸಿಬ್ಬಂದಿ ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

ಕುಟುಂಬ ಪಿಂಚಣಿ ಪಡೆಯಲು ಎರಡನೇ ಪತ್ನಿ ಅರ್ಹರಲ್ಲ

ಬೆಂಗಳೂರು, ನ.26– ಮೃತ ಪತಿಯ ಪಿಂಚಣಿ ಪಡೆಯುವುದಕ್ಕೆ ಮೊದಲ ಪತ್ನಿ ಬದುಕಿರುವಾಗಲೇ 2ನೇ ಪತ್ನಿಗೆ ಯಾವುದೇ ಅಧಿಕಾರ ಇರುವುದಿಲ್ಲ ಎಂದು ಹೈಕೋರ್ಟ್ ಶನಿವಾರ ಹೇಳಿದೆ. ಸರ್ಕಾರಿ ಉದ್ಯೋಗಿಯಾದ ಪತಿಯ ಮರಣದ ಹಿನ್ನೆಲೆಯಲ್ಲಿ ಪಿಂಚಣಿ ಕೋರಿ ಎರಡನೇ ಪತ್ನಿ ಸಲ್ಲಿಸಿದ್ದ ಮೇಲ್ಮನವಿಯನ್ನು ಹೈಕೋರ್ಟ್ ವಜಾ ಮಾಡಿದೆ. ಕೌಟುಂಬಿಕ ಪಿಂಚಣಿಯನ್ನು ಪತ್ನಿಗೆ ಪಾವತಿಸಲಾಗುತ್ತದೆಯೇ ವಿನಾ ಕಾನೂನಿನ ದೃಷ್ಟಿಯಲ್ಲಿ ಸಿಂಧುತ್ವ ಹೊಂದಿರದ ಪತ್ನಿಗಲ್ಲ ಎಂದು ಹೇಳಿದೆ.




ಹಿಂದೂ ವಿವಾಹ ಕಾಯಿದೆ ಸೆಕ್ಷನ್ 17ರ ಅಡಿ ದ್ವಿಪತ್ನಿತ್ವ ಅಪರಾಧವಾಗಿದೆ ಮತ್ತು ಕರ್ನಾಟಕ ಸಿವಿಲ್ ಸೇವೆಗಳ ನಿಯಮಗಳು ನಿಯಮ 294ರಲ್ಲಿ ಸರ್ಕಾರಿ ಅಧಿಕಾರಿ ನಿವೃತ್ತಿ ಅಥವಾ ವಿಧಿವಶರಾದರೆ ಅವರ ಕುಟುಂಬದವರಿಗೆ ಪಿಂಚಣಿ ನೀಡಬೇಕು ಎಂದು ಹೇಳುತ್ತದೆ ಎಂದು ಮುಖ್ಯ ನ್ಯಾಯಮೂರ್ತಿ ಪ್ರಸನ್ನ ಬಾಲಚಂದ್ರ ವರಾಳೆ ಮತ್ತು ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರ ನೇತೃತ್ವದ ವಿಭಾಗೀಯ ಪೀಠವು ಹೇಳಿದೆ.

ಮೊದಲನೇ ವಿವಾಹ ನಡೆದಿರುವಾಗ ಎರಡನೇ ಮದುವೆಯಿಂದ ಬರುವ ಸಂಬಂಧವನ್ನು ಪರಿಗಣಿಸಿರುವುದು ಸಾರ್ವಜನಿಕ ಹಿತಾಸಕ್ತಿಗೆ ಎರವಾಗಲಿದೆ ಇದು ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಉದ್ಯೋಗಿಗಳನ್ನು ಅಲ್ಲಿಗೆ ನೂಕಲಿದ್ದು, ಇದಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲ ಎಂದು ಪೀಠ ಹೇಳಿದೆ. ಹಿಂದೂ ವಿವಾಹ ಕಾಯಿದೆ 1955 ಸೆಕ್ಷನ್ 16ರ ಅಡಿ ಎರಡನೇ ವಿವಾಹದಿಂದ ಜನಿಸಿದ ಮಕ್ಕಳ ನ್ಯಾಯಸಮ್ಮತತೆಗೆ ಸೀಮಿತ ಸ್ಥಾನಮಾನವಿದೆ ಎಂದು ವಿಭಾಗೀಯ ಪೀಠ ಹೇಳಿದೆ.

ಪಿಂಚಣಿ ನೀಡಲು ಮೇಲ್ಮನವಿದಾರೆಯು ಕಾನೂನಾತ್ಮಕವಾಗಿ ಮದುವೆಯಾಗಿಲ್ಲ. ಹಿಂದೂ ಧರ್ಮದಲ್ಲಿ ಏಕಪತ್ನಿತ್ವ ಅನುಕರಣೀಯ ಮಾತ್ರವಲ್ಲ. ಕಾನೂನಿನ ಪ್ರಕಾರ ಸಿಂಧುವಾಗುತ್ತದೆ. ಮೊದಲ ಪತ್ನಿ ಜೀವಂತವಾಗಿದ್ದಾಗ ಎರಡನೇ ವಿವಾಹವಾಗುವುದನ್ನು ಕಾನೂನಿನ ಅಡಿ ಪರಿಗಣಿಸಲಾಗದು ಎಂದು ನ್ಯಾಯಾಲಯ ಹೇಳಿದೆ.

26/11 ಮುಂಬೈ ದಾಳಿಯಲ್ಲಿ ಮಡಿದವರಿಗೆ ಮೋದಿ ಶ್ರದ್ಧಾಂಜಲಿ

ನವದೆಹಲಿ, ನ.26– '26/11ರ ಮುಂಬೈ ಭಯೋತ್ಪಾದಕ ದಾಳಿಯು ಭಾರತ ಎದುರಿಸಿದ ಅತ್ಯಂತ ಭಯಾನಕ ಭಯೋತ್ಪಾದಕ ದಾಳಿಯಾಗಿದೆ. ಇದು ದೇಶವನ್ನು ಬೆಚ್ಚಿಬೀಳಿಸಿತು. ಈ ಘಟನೆಯ ನಂತರ ದೇಶವು ತನ್ನೆಲ್ಲ ಸಾಮರ್ಥ್ಯದಿಂದ ಚೇತರಿಸಿಕೊಂಡಿದ್ದು ಮಾತ್ರವಲ್ಲದೆ, ಭಯೋತ್ಪಾದನೆಯನ್ನು ಸಮರ್ಥವಾಗಿ ಹತ್ತಿಕ್ಕುತ್ತಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಹೇಳಿದ್ದಾರೆ.



2008ರ ಮುಂಬೈ ದಾಳಿಯ ವರ್ಷಾಚರಣೆ ವೇಳೆ 'ಮನ್ ಕಿ ಬಾತ್' ತಿಂಗಳ ರೇಡಿಯೊ ಕಾರ್ಯಕ್ರಮದಲ್ಲಿ ಅವರು ಮುಂಬೈ ದಾಳಿಯಲ್ಲಿ ಪ್ರಾಣ ಕಳೆದುಕೊಂಡ ಎಲ್ಲರಿಗೂ ಶ್ರದ್ಧಾಂಜಲಿ ಸಲ್ಲಿಸಿದರು.

ನಾವು ನವೆಂಬರ್ 26 ಅನ್ನು ಎಂದಿಗೂ ಮರೆಯಲು ಸಾಧ್ಯವಿಲ್ಲ. ಈ ದಿನ ದೇಶದಲ್ಲಿ ಅತ್ಯಂತ ಘೋರ ಭಯೋತ್ಪಾದಕ ದಾಳಿ ನಡೆಯಿತು. ಭಯೋತ್ಪಾದಕರು ಮುಂಬೈ ಮತ್ತು ಇಡೀ ದೇಶವನ್ನು ಬೆಚ್ಚಿಬೀಳಿಸಿದರು. ಆದರೆ, ಆ ದಾಳಿಯಿಂದ ನಾವು ಚೇತರಿಸಿಕೊಂಡಿರುವುದು ದೇಶದ ಸಾಮರ್ಥ್ಯವನ್ನು ತೋರಿಸುತ್ತದೆ. ಭಯೋತ್ಪಾದನೆಯನ್ನು ಸಂಪೂರ್ಣ ಧೈರ್ಯದಿಂದ ಹತ್ತಿಕ್ಕುತ್ತಿದೆ ಎಂದು ಮೋದಿ ಹೇಳಿದರು.

ಪಾಕಿಸ್ತಾನದಿಂದ ಸಮುದ್ರ ಮಾರ್ಗವಾಗಿ ನುಸುಳಿದ ಲಷ್ಕರ್–ಎ–ತಯಬಾ ಸಂಘಟನೆಯ 10 ಮಂದಿ ಭಯೋತ್ಪಾದಕರು ಮುಂಬೈನಲ್ಲಿ ಗುಂಡಿನ ದಾಳಿ ನಡೆಸಿ, 18 ಮಂದಿ ಭದ್ರತಾ ಸಿಬ್ಬಂದಿ ಸೇರಿ 166 ಜನರನ್ನು ಕೊಂದಿದ್ದರು. ಹಲವು ಮಂದಿ ಗಾಯಗೊಂಡಿದ್ದರು.

ನ.26 ಮತ್ತೊಂದು ಕಾರಣಕ್ಕಾಗಿ ಮುಖ್ಯ: 1949ರ ನವೆಂಬರ್ 26ರಂದು ಸಂವಿಧಾನ ರಚನಾ ಸಭೆಯು ಭಾರತದ ಸಂವಿಧಾನವನ್ನು ಅಂಗೀಕರಿಸಿತು. ಹಾಗಾಗಿ, ಈ ದಿನ ನಮಗೆ ಮತ್ತೊಂದು ಕಾರಣಕ್ಕಾಗಿ ಮುಖ್ಯವಾಗಿದೆ ಎಂದು ಪ್ರಧಾನಿ ಗಮನ ಸೆಳೆದರು.

1950ರಲ್ಲಿ ಸಂವಿಧಾನವನ್ನು ಅಳವಡಿಸಿಕೊಂಡ ನಂತರ, 106 ಬಾರಿ ತಿದ್ದುಪಡಿ ಮಾಡಲಾಗಿದೆ. ಆದರೆ, ಮೊದಲ ತಿದ್ದುಪಡಿಯು ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ ಮೊಟಕುಗೊಳಿಸುವ ಉದ್ದೇಶದ್ದಾಗಿದ್ದುದು ದುರದೃಷ್ಟಕರ ಎಂದೂ ಮೋದಿ ಹೇಳಿದರು.

ಸಂವಿಧಾನ ಸಭೆಗೆ ನಾಮನಿರ್ದೇಶನಗೊಂಡವರಲ್ಲಿ 15 ಮಹಿಳೆಯರಿದ್ದರು. ಮಹಿಳೆಯರಿಗೆ ಮತದಾನದ ಹಕ್ಕು ನೀಡಿದ ಕೆಲವೇ ದೇಶಗಳಲ್ಲಿ ಭಾರತವೂ ಸೇರಿದೆ. ಲೋಕಸಭೆ ಮತ್ತು ವಿಧಾನಸಭೆಗಳಲ್ಲಿ ಮಹಿಳಾ ಕೋಟಾ ಖಾತರಿಗಾಗಿ ಮಹಿಳಾ ಮೀಸಲಾತಿ ಮಸೂದೆ ಅಂಗೀಕರಿಸಿರುವುದು, ಸಂವಿಧಾನದ ನಿರ್ಮಾತೃಗಳ ದೂರದೃಷ್ಟಿಗೆ ಅನುಗುಣವಾಗಿದೆ. ಇದು ಆತ್ಮತೃಪ್ತಿಯ ವಿಷಯ ಕೂಡ ಹೌದು. ಇದು ಅಭಿವೃದ್ಧಿ ಹೊಂದಿದ ಭಾರತದ ಸಂಕಲ್ಪವನ್ನು ಸಾಧಿಸುವ ವೇಗಕ್ಕೂ ಪೂರಕವಾಗಿದೆ ಎಂದು ಹೇಳಿದರು. ಮೋದಿ ಅವರ ನೇತೃತ್ವದ ಕೇಂದ್ರ ಸರ್ಕಾರ ನವೆಂಬರ್ 26 ಅನ್ನು ಸಂವಿಧಾನ ದಿನವಾಗಿ ಆಚರಿಸಲು 2015ರಲ್ಲಿ ಘೋಷಣೆ ಮಾಡಿತು.

'ವೋಕಲ್ ಫಾರ್ ಲೋಕಲ್' ಯಶಸ್ಸು, ಅಭಿವೃದ್ಧಿ ಹೊಂದಿದ ಮತ್ತು ಸಮೃದ್ಧ ಭಾರತಕ್ಕೆ ಬಾಗಿಲು ತೆರೆಯುತ್ತಿದೆ ಎಂದು ಮೋದಿ ಹೇಳಿದರು. ಈ ಅಭಿಯಾನಕ್ಕೆ ಸಿಗುತ್ತಿರುವ ಸ್ಪಂದನೆಯನ್ನು ಪ್ರಶಂಸಿಸಿದ ಅವರು, ಭಾರತದಲ್ಲಿ ತಯಾರಿಸಿದ ಉತ್ಪನ್ನಗಳನ್ನು ಖರೀದಿಸಲು ಜನರಲ್ಲಿ ಹೆಚ್ಚಿನ ಉತ್ಸಾಹ ಕಂಡುಬಂದಿದೆ. ಇತ್ತೀಚಿನ ಹಬ್ಬಗಳಲ್ಲಿ ಈ ಅಭಿಯಾನದಡಿ 4 ಲಕ್ಷ ಕೋಟಿಯ ವ್ಯವಹಾರ ನಡೆದಿದೆ ಎಂದರು.

ಪುಣ್ಯಕೋಟಿ ರಾಜ್ಯೋತ್ಸವ, ಕನ್ನಡ ಗೀತೋತ್ಸವ



ಮೈಸೂರು, ನ.26(ಎಂಕೆ)– ಮೈಸೂರಿನ ವಿಜಯನಗರ 1ನೇ ಹಂತದಲ್ಲಿರುವ ಶ್ರೀ ಯೋಗನರಸಿಂಹ ದೇವಸ್ಥಾನದ ಎದುರು ಪುಣ್ಯಕೋಟಿ ಸೇವಾ ಟ್ರಸ್ಟ್ ವತಿಯಿಂದ ಕರ್ನಾಟಕ 50ರ ಸಂಭ್ರಮದ ಅಂಗವಾಗಿ 'ಪುಣ್ಯಕೋಟಿ ಕನ್ನಡ ರಾಜ್ಯೋತ್ಸವ' ಹಾಗೂ 'ಕನ್ನಡ ಗೀತೋತ್ಸವ' ಆಚರಿಸಲಾಯಿತು.

'ಕನ್ನಡ ಭುವನೇಶ್ವರಿದೇವಿ' ಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಯೋಗನರಸಿಂಹಸ್ವಾಮಿ ದೇವಸ್ಥಾನದ ಸಂಸ್ಥಾಪಕ, ನಾಡೋಜ ಭಾಷ್ಯಂ ಸ್ವಾಮೀಜಿ ಉದ್ಘಾಟಿಸಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣ ಗೌಡ ಮಾತನಾಡಿ, 2 ಸಾವಿರ ವರ್ಷಗಳ ಇತಿಹಾಸವಿರುವ ಕನ್ನಡ ಭಾಷೆಯ ಹಿರಿಮೆ–ಗರಿಮೆಯನ್ನು ಇನ್ನಷ್ಟು ಬೆಳೆಸಬೇಕಾಗಿದೆ. ಪ್ರತಿಯೊಬ್ಬರು ಕನ್ನಡ ಭಾಷೆಯಲ್ಲೇ ವ್ಯವಹರಿಸಿದರೆ, ಭಾಷೆಗೆ ಗೌರವ ನೀಡಿದಂತಾಗುತ್ತದೆ ಎಂದು ಹೇಳಿದರು.

ಸಂಪನ್ಮೂಲ ವ್ಯಕ್ತಿ ಎಸ್.ಡಿ.ಶಿವಣ್ಣ ಮುಖ್ಯ ಭಾಷಣ ಮಾಡಿದರು. ಇದೇ ವೇಳೆ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡಮಿ ಕನ್ನಡ ವಿಭಾಗದ ಪ್ರೊ.ಭೀಮರಾಜ್ ಈರೇಗೌಡ ಅವರನ್ನು ಅಭಿನಂದಿಸಲಾಯಿತು. ಬಳಿಕ ಗಾಯಕ ಮೈಸೂರು ಮಹಾಲಿಂಗು ಮತ್ತು ತಂಡದವರಿಂದ 'ಕನ್ನಡ ಗೀತೋತ್ಸವ' ಕಾರ್ಯಕ್ರಮ ನಡೆಯಿತು. ರೋಟರಿ ಹೆರಿಟೇಜ್ ಸಂಸ್ಥಾಪಕ ಕೆ.ಮಂಜುನಾಥ್, ನಗರಪಾಲಿಕೆ ಮಾಜಿ ಸದಸ್ಯ ಸುಬ್ಬಯ್ಯ, ಪುಣ್ಯಕೋಟಿ ಸೇವಾ ಟ್ರಸ್ಟ್ ಅಧ್ಯಕ್ಷ ಹನುಮಂತೇಶ್, ಟ್ರಸ್ಟ್‌ನ ಪದಾಧಿಕಾರಿಗಳು ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಇಂದು ಲಕ್ಷ ದೀಪೋತ್ಸವ

ಮೈಸೂರು, ನ.26(ಎಸ್‌ಬಿಡಿ)– ಮೈಸೂರಿನ ಡಾ.ರಾಜ್‌ಕುಮಾರ್ ರಸ್ತೆಯಲ್ಲಿರುವ ಶ್ರೀ ಕಲ್ಯಾಣ ಲಕ್ಷ್ಮೀ ವೆಂಕಟರಮಣ ದೇವಾಲಯ ಆವರಣದಲ್ಲಿ ಸೋಮವಾರ(ನ.27) ಸಂಜೆ 6 ಗಂಟೆಗೆ ಲಕ್ಷ ದೀಪೋತ್ಸವ ಆಯೋಜಿಸಲಾಗಿದೆ. ಸಂಸದ ಪ್ರತಾಪ್ ಸಿಂಹ, ಶಾಸಕ ಶ್ರೀವತ್ಸ, ಉದ್ಯಮಿಗಳಾದ ಎಂ.ಗೋಪಿನಾಥ್ ಶೆಣೈ ಹಾಗೂ ಸಂದೀಪ್ ನಾಯಕ್ 12ನೇ ವರ್ಷದ ದೀಪೋತ್ಸವವನ್ನು ಉದ್ಘಾಟಿಸಲಿದ್ದಾರೆ. ಈ ಹಿನ್ನೆಲೆಯಲ್ಲಿ ಮಧ್ಯಾಹ್ನ ಸತ್ಯನಾರಾಯಣಸ್ವಾಮಿ ಪೂಜೆ ಹಾಗೂ ಅನ್ನಸಂತರ್ಪಣೆ ಜರುಗಲಿದೆ. ಈ ಬಾರಿಯ ವಿಶೇಷ ಕಾರ್ತಿಕ ಹುಣ್ಣಿಮೆ, ವಿಷ್ಣು ದೀಪೋತ್ಸವ ಮತ್ತು ಕಾರ್ತಿಕ ಸೋಮವಾರ ಬಂದಿರುವುದು ಬಹಳ ವಿಶೇಷವಾಗಿದೆ. ನಗರದ ವಿವಿಧ ಬಡಾವಣೆಗಳು ಹಾಗೂ ಸುತ್ತಮುತ್ತಲ ಗ್ರಾಮಗಳಿಂದ ಸಾವಿರಾರು ಭಕ್ತರು ದೀಪೋತ್ಸವದಲ್ಲಿ ಭಾಗವಹಿಸಲಿದ್ದಾರೆ ಎಂದು ದೇವಸ್ಥಾನದ ಸಂಸ್ಥಾಪಕ ಹೆಚ್.ಜಿ.ಗಿರಿಧರ್ ತಿಳಿಸಿದ್ದಾರೆ.



ಮಾತೃಭಾಷೆ ಮಾಲಿನ್ಯವಾಗದಂತೆ ಜಾಗ್ರತಿ ಅಗತ್ಯ

ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಮನವಿ



ಮೈಸೂರು, ನ26(ಎಸ್‌ಬಿಡಿ)– ಮಾತೃಭಾಷೆ ಕನ್ನಡ ಮಾಲಿನ್ಯವಾಗದಂತೆ ಎಚ್ಚರವಹಿಸುವ ಅನಿವಾರ್ಯತೆ ಇದೆ ಎಂದು ಸಾಹಿತಿ ಬನ್ನೂರು ಕೆರಾಜು ಹೇಳಿದರು.

ಮೈಸೂರಿನ ರೈಲ್ವೆ ಕಾರ್ಯಗಾರ ಸರ್ಕಾರಿ ಪ್ರೌಢಶಾಲೆಯಲ್ಲಿ ಕಾವೇರಿ ಬಳಗ ಹಾಗೂ ಹಿರಣ್ಮಯಿ ಪ್ರತಿಷ್ಠಾನದ ಸಹಯೋಗದಲ್ಲಿ ಆಯೋ ಜಿಸಿದ್ದ ಕನ್ನಡ ರಾಜ್ಯೋತ್ಸವ ಹಾಗೂ ಸುವರ್ಣ ಕರ್ನಾಟಕ ಮಹೋತ್ಸವವನ್ನು ಉದ್ಘಾಟಿಸಿ ಮಾತನಾಡಿದ ಅವರು, ವಾಯು ಮಾಲಿನ್ಯ, ಜಲ ಮಾಲಿನ್ಯ, ಶಬ್ದ ಮಾಲಿನ್ಯ, ಭೂಮಾಲಿನ್ಯ, ಪರಿಸರ ಮಾಲಿನ್ಯದಂತೆ ಮನುಷ್ಯನ ಮನೋಮಾಲಿನ್ಯದಿಂದಾಗಿ ಭಾಷಾ ಮಾಲಿನ್ಯವೂ ಆಗುತ್ತಿದೆ. ಹಾಗಾಗಿ ನಮ್ಮ ಮಾತೃಭಾಷೆ ಕನ್ನಡ ಎಂದಿಗೂ ಮಾಲಿನ್ಯವಾಗದಂತೆ ಎಚ್ಚರವಹಿಸಿ, ಪರಿಶುದ್ಧ ಕನ್ನಡವನ್ನು ಕಾಪಾಡಿಕೊಳ್ಳಬೇಕು ಎಂದರು.

ಕನ್ನಡ ಜಗತ್ತಿನ ಸರ್ವಶ್ರೇಷ್ಠ ಭಾಷೆಗಳಲ್ಲೊಂದು. ಮಾತೃಭಾಷೆ ಪ್ರತಿಯೊಬ್ಬರ ಬದುಕಿನಲ್ಲೂ ಹುಟ್ಟಿನೊಡನೆಯೇ ಕರುಳ ಸಂಬಂಧಿಯಾಗಿ ಬೆಸೆದುಕೊಂಡು ರಕ್ತಗತವಾಗಿರುತ್ತದೆ. ಇದು ಜೀವದ ಭಾಷೆ ಮಾತ್ರವಲ್ಲ, ಜೀವನದ ಭಾಷೆಯೂ ಹೌದು. ಜಗತ್ತಿನಲ್ಲಿ ಸಾವಿರಾರು ಭಾಷೆಗಳಿರಬಹುದು ಆದರೆ ನಮ್ಮ ಮಾತೃ ಭಾಷೆ ಕನ್ನಡಕ್ಕೆ ಸಮನಾದ ಮತ್ತೊಂದು ಭಾಷೆ ಇಲ್ಲವೇ ಇಲ್ಲ. ಹುಟ್ಟಿನಿಂದ ಸಾವಿನ ತನಕವೂ ಕನ್ನಡ ನಮ್ಮ ಜೊತೆಯಲ್ಲಿ ಇರುತ್ತದೆ. ಕನ್ನಡ ಎಂಬ ಮೂರಕ್ಷರ ಗಾಯತ್ರಿ ಮಂತ್ರವಿದ್ದಂತೆ. ತಾಯ್ನುಡಿಯನ್ನು ಮರೆತರೆ ಹೆತ್ತವ್ವನನ್ನು ಮರೆತಂತೆ. ಆದ್ದರಿಂದ ಪ್ರತಿಯೊಬ್ಬರೂ ಮಾತೃಭಾಷೆಯನ್ನು ತಾಯಿಯಂತೆ ಪ್ರೀತಿಸಿ, ಪೋಷಿಸಬೇಕು ಎಂದು ಮನವಿ ಮಾಡಿದರು.

ಸಂಖ್ಯಾ ಶಾಸ್ತ್ರಜ್ಞ, ಲೇಖಕ ಎಸ್.ಜಿ.ಸೀತಾರಾಮ್ ಮಾತನಾಡಿ, ಕರ್ನಾಟಕದ ಇತಿಹಾಸವನ್ನು ಸವಿವರವಾಗಿ ಮಕ್ಕಳಿಗೆ ಅರ್ಥವಾಗುವಂತೆ ಸರಳವಾಗಿ ತಿಳಿಸಿಕೊಟ್ಟರು. ಇದೇ ವೇಳೆ ರಾಜ್ಯೋತ್ಸವದ ಹಿನ್ನೆಲೆಯಲ್ಲಿ ನಡೆಸಲಾದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ಮಕ್ಕಳಿಗೆ ಕಲಾವಿದೆ ಹಾಗೂ ಲೇಖಕಿ ಡಾ.ಜಮುನಾ ರಾಣಿ ಮಿರ್ಲೆ ಬಹುಮಾನ ವಿತರಿಸಿದರು. ಸಂಗೀತ ಶಿಕ್ಷಕ ಉಮಾಪತಿ ಮತ್ತು ಕಾವೇರಿ ಬಳಗದ ಅಧ್ಯಕ್ಷೆ ಎನ್.ಕೆ.ಕಾವೇರಿಯಮ್ಮ ಅವರು ಕನ್ನಡ ಗೀತಾ ಗಾಯನ ನಡೆಸಿಕೊಟ್ಟರು.

ಕಾರ್ಯಕ್ರಮದಲ್ಲಿ ಮುಖ್ಯ ಶಿಕ್ಷಕಿ ಎಲ್.ಲತಾ, ಜಿಲ್ಲಾ ಪ್ರೌಢ ಶಾಲಾ ಸಹಶಿಕ್ಷಕರ ಸಂಘದ ಅಧ್ಯಕ್ಷರೂ ಆದ ಸಹ ಶಿಕ್ಷಕ ಎನ್.ನಾಗರಾಜು, ಹಿರಣ್ಮಯಿ ಪ್ರತಿಷ್ಠಾನದ ಅಧ್ಯಕ್ಷ ಎ.ಸಂಗಪ್ಪ , ಶಿಕ್ಷಕರಾದ ಕೆ.ಎಂ.ಮಹೇಶ್, ವಿನುತಾ ಬಗರೆ, ನೂರ್ ಸಲ್ಮಾಬಾನು ಮತ್ತಿತರರು ಉಪಸ್ಥಿತರಿದ್ದರು.

ನಕ್ಕರೆ ಅದೇ ಸ್ವರ್ಗ

ಅಶೋಕ : ತಾಯಿಗೂ, ಹೆಂಡತಿಗೂ ಇರುವ ವ್ಯತ್ಯಾಸವೇನು?

ಗಿರೀಶ : ತಾಯಿ ಮಾತಾಡುವುದನ್ನು ಕಲಿಸ್ತಾಳೆ, ಹೆಂಡತಿ ಸುಮ್ಮಿರೋದನ್ನ ಕಲಿಸ್ತಾಳೆ....

ಮೈಸೂರು ಮಿತ್ರ

ಸೋಮವಾರ, 27 ನವೆಂಬರ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಮೌನವು ಯಾವುದೇ ವ್ಯಕ್ತಿಯ ಶ್ರೇಷ್ಠತೆಯೇ ಹೊರತು ದೌರ್ಬಲ್ಯವಲ್ಲ, ಏಕೆಂದರೆ ಸಹಿಸಿಕೊಳ್ಳುವುದು ಹೇಗೆ ಎಂದು ಅರಿತವನಿಗೆ ವ್ಯಕ್ತಪಡಿಸಲು ಸಹ ತಿಳಿದಿರುತ್ತದೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { 'ಮಾತು ಬಲ್ಲವನಿಗೆ ಜಗಳವಿಲ್ಲ, ಊಟ ಬಲ್ಲವನಿಗೆ ರೋಗವಿಲ್ಲ.

ನಿಮ್ಮ ಪತ್ರಗಳು

ಪಿಯು ಉಪನ್ಯಾಸಕರ ನೇಮಕ ಮಾಡಿ

ಮಾನ್ಯರೆ,

ಘನ ಸರ್ಕಾರದ ಬಳಿ ಒಂದು ಬಲವಾದ ಮನವಿ. ಈಗಾಗಲೇ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ತಿಂಗಳುಗಳೇ ಕಳೆದಿವೆ. ಗ್ಯಾರಂಟಿ ಯೋಜನೆಗಳ ಮೂಲಕ ನುಡಿದಂತೆ ನಡೆಯುತ್ತಿದ್ದೀರಿ. ಈ ಬಗ್ಗೆ ಸಂತೋಷವಿದೆ. ಇನ್ನಷ್ಟು ಸುಧಾರಣೆ ಆದರೆ ಇನ್ನೂ ಹೆಚ್ಚಿನ ಖುಷಿ ಆಗುತ್ತದೆ.

ಈ ಸಂದರ್ಭದಲ್ಲಿ ಪದವಿ ಪೂರ್ವ ಕಾಲೇಜಿನ ನೇಮಕಕ್ಕೆ ಕಾದಿರುವ ಎಷ್ಟೋ ಉಪನ್ಯಾಸಕರ ವಯಸ್ಸು ಮೀರುತ್ತಿದೆ. ನೇಮಕಾತಿಗೆ ಬೇಕಾದ ಗರಿಷ್ಠ ವಯೋಮಿತಿಯ ಕೊನೆಯ ಹೊಸ್ತಿಲಲ್ಲಿ ಇರುವ ಉಪನ್ಯಾಸಕರು ಇತ್ತ ನೇಮಕಾತಿಯೂ ಆಗದೇ, ಅತ್ತ ಖಾಸಗಿ ವಲಯದಲ್ಲಿ ಭದ್ರತೆಯೂ ಇಲ್ಲದೇ ಕಡಿಮೆ ವೇತನಕ್ಕೆ ಹಗಲಿಡೀ ಶ್ರಮ ಪಡುತ್ತಿದ್ದಾರೆ. ಖಾಸಗಿ ಕಾಲೇಜುಗಳಲ್ಲಿ ಶಿಕ್ಷಣವು ಉದ್ಯಮವಾಗಿ ಮಾರ್ಪಟ್ಟಿದ್ದು, ಅಲ್ಲಿ ಪ್ರತಿಭೆ-ಪಾಂಡಿತ್ಯಕ್ಕೆ ಒಂದು ಎಳ್ಳಷ್ಟೂ ಬೆಲೆಯಿಲ್ಲ ಜೊತೆಗೆ ನೆಲೆಯಿಲ್ಲ. ಕೈತುಂಬಾ ಕೆಲಸ ಮಾಡಿಸುವ, ಫಲಿತಾಂಶ ಪ್ರೇರಿತವಾಗಿ ದೃಷ್ಟಿಕೋನ ಹೊಂದಿರುವ ಇಂತಹ ವ್ಯವಸ್ಥೆಯಲ್ಲಿ ನೌಕರಿ ಭದ್ರತೆ ಕನಸಿನ ಮಾತೇ ಸರಿ. ಇವರು ನೀಡುವ ಸಂಬಳ ಅರೆ ಕಾಸಿನ ಮಜ್ಜಿಗೆ, ಆನೆ ಬಾಯಿಗೆ ಬಿಸ್ಕತ್ ಎಂಬಂತಾಗಿದೆ. ಆದರೂ ವಿಧಿಯಿಲ್ಲದೆ ಕಡಿಮೆ ಆದರೂ ಜೀವನದ ಬಂಡಿ ಸಾಗಬೇಕಲ್ಲ, ಅದನ್ನೇ ಪ್ರಸಾದ ಎಂದು ಪಡೆದುಕೊಳ್ಳುತ್ತಿದ್ದಾರೆ. ಈ ಬಲಹೀನತೆ ಅರಿತ ಖಾಸಗಿ ವಲಯದ ಕೆಲ ಮಂದಿ **'ಆದರೆ ಮಾಡಿ, ಇಲ್ಲದಿದ್ದರೆ ಹೊರಡಿ'** ಎಂಬ ಧೋರಣೆ ಹೊಂದಿದ್ದಾರೆ.

ಹುದ್ದೆಗೆ ಬೇಕಾದ ವಯೋಮಿತಿ ಮೀರಿದರೆ ವಯಸ್ಸಿನ ಕೊನೆಯ ಹೊಸ್ತಿಲಲ್ಲಿ ಇರುವ ಎಷ್ಟೋ ಮಂದಿಗೆ ಅನ್ಯಾಯ ಮಾಡಿದಂತಾಗುತ್ತದೆ ಅಲ್ಲವೆ. ಜೊತೆ ಜೊತೆಗೆ ಅಂತಹ ಅಭ್ಯರ್ಥಿಗಳ ವಯಸ್ಸನ್ನು ಕೊರೊನಾ ಅವಧಿಯನ್ನು ಮನದಲ್ಲಿಟ್ಟುಕೊಂಡು ವಿಸ್ತರಣೆ ಮಾಡಬೇಕೆಂಬುದು ಕೂಡಾ ಇಲ್ಲಿನ ಮಹತ್ವದ ಬೇಡಿಕೆಯಾಗಿದೆ. ಕೆಲವು ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಉಪನ್ಯಾಸಕರ ಕೊರತೆಯಿಂದ ಅಲ್ಲೇ ಇರುವ ಉಪನ್ಯಾಸಕರಿಗೆ ಹೆಚ್ಚಿನ ಹೊರೆ ಬಿದ್ದು ಸಮರ್ಪಕವಾಗಿ ತೊಡಗಿಸಿ ಕೊಳ್ಳಲು ಸಾಧ್ಯವಾಗುತ್ತಿಲ್ಲ. ಇದರಿಂದ ವಿದ್ಯಾರ್ಥಿಗಳಿಗೆ ಬೌದ್ಧಿಕ ವಿಕಸನ ಹೊಂದಲು ಆಗುತ್ತಿಲ್ಲ ಎಂಬುದನ್ನು ಸರ್ಕಾರ ಮನಗಂಡು ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂಬುದು ಅನೇಕ ಉದ್ಯೋಗಾಕಾಂಕ್ಷಿಗಳ ಒಕ್ಕೊರಲ ಅಭಿಪ್ರಾಯವಾಗಿದೆ.

-ಎ.ಎಸ್.ಗೋವಿಂದೇಗೌಡ, ಕನ್ನಡ ಉಪನ್ಯಾಸಕರು, ರೂಪನಗರ ಮೈಸೂರು

ಚಿಕ್ಕ ವಯಸ್ಸಿನಲ್ಲಿ ದೊಡ್ಡ ತ್ಯಾಗ



ಮಾನ್ಯರೆ,

ನವೆಂಬರ್ 22ರಂದು ಜಮ್ಮು ಮತ್ತು ಕಾಶ್ಮೀರದ ರಜೌರಿ ಜಿಲ್ಲೆಯ ಗಡಿಯಲ್ಲಿ ಭಯೋತ್ಪಾದಕರು ಮತ್ತು ಭದ್ರತಾ ಪಡೆಗಳ ನಡುವೆ ನಡೆದ ಗುಂಡಿನ ಚಕಮಕಿಯಲ್ಲಿ 28 ವರ್ಷದ ವೀರ ಕನ್ನಡಿಗ ಕ್ಯಾಪ್ಟನ್ ಪ್ರಾಂಜಲ್ ಸೇರಿದಂತೆ ನಾಲ್ವರು ಹುತಾತ್ಮರಾಗಿದ್ದಾರೆ. ಸಿಇಟಿ ಪರೀಕ್ಷೆಯಲ್ಲಿ ಆರ್.ವಿ.ಕಾಲೇಜಿನಲ್ಲಿ ಕೆಮಿಕಲ್, ಎಂಜಿನಿಯರಿಂಗ್ ಸೀಟು ದೊರೆತರೂ ಪ್ರಾಂಜಲ್ ಸೇನೆ ಆಯ್ಕೆ ಮಾಡಿಕೊಂಡಿದ್ದರು. ಚಿಕ್ಕ ವಯಸ್ಸಿನಿಂದಲೂ ದೇಶಕ್ಕೆ ಏನಾದರೂ ಸೇವೆ ಮಾಡಬೇಕೆಂಬ ತುಡಿತ ಅವರಲ್ಲಿತ್ತು. ಮೂರನೇ ತರಗತಿಯಿಂದಲೂ ಮಿಲಿಟರಿ ಸೇರುವ ಕನಸು ಕಂಡಿದ್ದರು. ಇದಕ್ಕೆಲ್ಲ ಕುಟುಂಬದ ಸಹಕಾರವು ಕೂಡ ಇತ್ತು.

ತನ್ನ ಆಸೆಯಂತೆ 2014ರ ಜೂನ್‌ನಲ್ಲಿ ಮಿಲಿಟರಿಗೆ ಸೇರಿದ್ದ ಇವರು 'ಎರಡು ವರ್ಷದ ಹಿಂದೆ ಬೆಂಗಳೂರಿನ ಅದಿತಿಯನ್ನು ವಿವಾಹವಾಗಿದ್ದರು. ಚೆನ್ನೈನ ಐಐಟಿಯಲ್ಲಿ ಅದಿತಿ ಪಿಎಚ್.ಡಿ ಮಾಡುತ್ತಿದ್ದಾರೆ. ಒಬ್ಬ ಯೋಧನ ಪತ್ನಿಯಾಗಿ ಪತಿಗೆ ಸದಾ ನೈತಿಕ ಬೆಂಬಲ ನೀಡುತ್ತಿದ್ದರು. ಈಗ ಪ್ರಾಂಜಲ್ ದೇಶಕ್ಕಾಗಿ ಪ್ರಾಣ ಬಿಟ್ಟಿದ್ದಾರೆ ಎಂಬ ತೃಪ್ತಿ ನನಗಿದೆ. ಇಂತಹ ಸಂದರ್ಭದಲ್ಲಿ ದೇಶಕ್ಕಾಗಿ ಚಿಕ್ಕ ವಯಸ್ಸಿನಲ್ಲಿ ಪ್ರಾಣತ್ಯಾಗ ಮಾಡಿರುವುದು ನಮ್ಮ ಕುಟುಂಬಕ್ಕೆ ಹೆಮ್ಮೆ ಎನಿಸುತ್ತದೆ ಎಂದು ಪೋಷಕ ವರ್ಗದವರು ದುಃಖದ ನಡುವೆಯು ಎದೆಗುಂದದೆ ಮನದಾಳದ ಮಾತುಗಳನ್ನು ಆಡುತ್ತಿದ್ದಾರೆ. ದೇಶಕ್ಕಾಗಿ ಕುಟುಂಬವನ್ನೂ ಲೆಕ್ಕಿಸದೆ ಪ್ರಾಣ ಪಣಕ್ಕಿಟ್ಟು ಸೇವೆ ಸಲ್ಲಿಸುತ್ತಿರುವ ಲಕ್ಷಾಂತರ ಯೋಧರಿದ್ದಾರೆ. ಅವರೆಲ್ಲರಿಗೂ ಪ್ರಾಂಜಲ್ ಸ್ಫೂರ್ತಿಯಾಗಿದ್ದಾನೆ ಎಂದು ಏಕೈಕ ಪುತ್ರನನ್ನು ಕಳೆದುಕೊಂಡ ಇವರ ತಂದೆಯಾದ ವೆಂಕಟೇಶ್ ಅವರು ಹೇಳಿದ್ದಾರೆ.

ಉಗ್ರವಾದಿಗಳನ್ನು ಹೆಡೆಮುರಿ ಕಟ್ಟಬೇಕು ಎಂಬ ಅಚಲ ಗುರಿಯನ್ನು ಹೊಂದಿದ್ದರು. ನಂದನವನ ಬಡಾವಣೆಯ ಮುಖ್ಯ ದ್ವಾರದ ಬಳಿ ಜಮಾಯಿಸಿದ್ದ ಸಾವಿರಾರು ಅಭಿಮಾನಿಗಳು ಅಗಲಿದ ವೀರಯೋಧನಿಗೆ ಮೊಂಬತ್ತಿ ಹಿಡಿದು 'ಅಮರ್ ರಹೇ ಕ್ಯಾಪ್ಟನ್ ಪ್ರಾಂಜಲ್' ಘೋಷಣೆ ಕೂಗಿ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸುತ್ತಿದ್ದರು.

ರಾಜ್ಯಾದ್ಯಂತ ವೀರಯೋಧನಿಗೆ ಭಾವಚಿತ್ರದ ಮೂಲಕ ನಮನವನ್ನು ಸಲ್ಲಿಸುತ್ತಿದ್ದಾರೆ, ಸಾಮಾಜಿಕ ಜಾಲತಾಣಗಳಲ್ಲಿ ಇವರ ಧೈರ್ಯ, ಸಾಹಸಕ್ಕೆ ಮೆಚ್ಚುಗೆಯ ನುಡಿಗಳು ಹರಿದಾಡುತ್ತಿದ್ದು, ಅಶ್ರುತರ್ಪಣವನ್ನು ಭಾವಪೂರ್ಣವಾಗಿ ಕಣ್ಣೀರಿನ ಮೂಲಕ ಸಲ್ಲಿಸುತ್ತಿದ್ದಾರೆ. ದೇಶದ ರಕ್ಷಣೆಗಾಗಿ ಚಿಕ್ಕ ವಯಸ್ಸಿನಲ್ಲೇ ದೊಡ್ಡ ತ್ಯಾಗವನ್ನು ಮಾಡಿದ ತಾಯ್ನಾಡಿನ ಕ್ಯಾಪ್ಟನ್ ಪ್ರಾಂಜಲ್ ಅವರನ್ನು ಎಂದಿಗೂ ಮರೆಯಬಾರದೆಂದು ಮಾತನಾಡಿಕೊಳ್ಳುತ್ತಿದ್ದಾರೆ..

-ಎನ್.ಪಿ.ಪರಶಿವಮೂರ್ತಿ, ನಂಜೀಪುರ, ಸರಗೂರು ತಾಲೂಕು

ಇಲ್ಲಿ ಜಾತಿ ಗಣತಿ ಮಾಡೇ ಇಲ್ಲ

ಮಾನ್ಯರೆ,

ಕಳೆದ ಎಂಟು ವರ್ಷಗಳ ಹಿಂದೆ ಸಾಮಾಜಿಕ ಮತ್ತು ಶೈಕ್ಷಣಿಕ ಜಾತಿ ಸಮೀಕ್ಷೆ ನಡೆಸಿರುವುದಾಗಿ ಸರ್ಕಾರ ಹೇಳುತ್ತಿದೆ. ನನಗೆ ತಿಳಿದಿರುವಂತೆ ನಮ್ಮ ಬೀದಿಗಾಗಲಿ, ನಮ್ಮ ಮನೆಗಾಗಲಿ ಯಾವ ಅಧಿಕಾರಿಗಳು ಬಂದು ಸಮೀಕ್ಷೆ ನಡೆಸಿಲ್ಲ. ಸಮೀಕ್ಷೆ ನಡೆಸುವವರು ಬಂದಾಗ, ನಾವು ಊರಿನಲ್ಲಿ ಇಲ್ಲದೇ ಇರಬಹುದೆಂದು ನಮ್ಮ ಅಕ್ಕ-ಪಕ್ಕದ ಮನೆಯವರನ್ನು ಜಾತಿ ಸಮೀಕ್ಷೆ ಮಾಡುವವರು ಯಾರಾದರೂ ಮನೆ ಬಳಿ ಬಂದಿದ್ದರ ಎಂದು ವಿಚಾರಿಸಿದರೆ ಇಲ್ಲ ಎನ್ನುತ್ತಾರೆ, ಹಾಗಿದ್ದ ಮೇಲೆ ಜಾತಿ ಸಮೀಕ್ಷೆ ಮಾಡಿರುವುದಾದರೂ ಎಲ್ಲಿ?

ಎಲ್ಲೋ ಎ.ಸಿ. ರೂಂನಲ್ಲಿ ಕುಳಿತು ಮಾಡಿರುವ ಜಾತಿ ಗಣತಿಯನ್ನು ಯಾರೂ ಒಪ್ಪಲು ಸಾಧ್ಯವಿಲ್ಲ, ಎಲ್ಲಕ್ಕಿಂತ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ, ಒಂದು ಅಂದಾಜಿನ ಪ್ರಕಾರ, ಸುಮಾರು 40ರಿಂದ 50 ಲಕ್ಷ ಜನರು ಈ ಜಾತಿ ಗಣತಿಯಿಂದ ಹೊರಗುಳಿದಿದ್ದಾರೆ ಎಂಬುದು. ಈಗಾಗಲೇ ಆಡಳಿತ ಮತ್ತು ವಿರೋಧ ಪಕ್ಷಗಳಿಂದ ಈಗ ನಡೆದಿರುವ 'ಜಾತಿ ಗಣತಿ' ಪರಿಗಣಿಸಬಾರದೆಂಬ ಒತ್ತಾಯ ಇರುವುದರಿಂದ ಹೊಸದಾಗಿ, ನಿಖರವಾಗಿ ಜಾತಿ ಗಣತಿ ನಡೆಯುವಂತಾಗಲಿ.

-ಬೂಕನಕೆರೆ ವಿಜೇಂದ್ರ, ಲೇಖಕರು, ಕುವೆಂಪುನಗರ, ಮೈಸೂರು



ಜಿ.ಎಲ್. ತ್ರಿಪುರಾಂತಕ
ಮೊಬೈಲ್ ನಂ.: 96866-77284

ಬೆರಗು

ಅಳಿದರೆ ರೈತರ ಸಂತತಿ, ಉಳಿದವರ ಸ್ಥಿತಿ ಅಧೋಗತಿ!



ಮನುಷ್ಯನು ವಿಜ್ಞಾನ ತಂತ್ರಜ್ಞಾನ ಕ್ಷೇತ್ರದಲ್ಲಿ ಎಷ್ಟೇ ಆವಿಷ್ಕಾರ ಮಾಡಿದರೂ ಹೊಟ್ಟೆಗೆ ಅನ್ನ ತಿನ್ನಲೇ ಬೇಕು. ಆದರೆ ಜ್ಞಾನ ನೀಡುವ ವಿಜ್ಞಾನಿಗಳ, ವಿದ್ವಾಂಸರ ಬದುಕು ಹಸನಾದಷ್ಟು ಅನ್ನ ನೀಡುವ ರೈತನ ಬದುಕು ಮಾತ್ರ ಹಸನಾಗಿಲ್ಲದಿರುವುದು ದುರದೃಷ್ಟಕರ. 'ಜೀವಮಾನದಲ್ಲಿ ಜನರಿಗೆ ಆಗೊಮ್ಮೆ ಈಗೊಮ್ಮೆ ವೈದ್ಯ, ವಕೀಲ, ಪೊಲೀಸರ ಅಗತ್ಯ ಬೀಳಬಹುದು, ಆದರೆ ದಿನದ ಮೂರು ಹೊತ್ತು ರೈತನ ಅಗತ್ಯ ಪ್ರತಿಯೊಬ್ಬರಿಗೂ ಇದ್ದೇ ಇದೆ' ಎಂದು ಮಹನೀಯರೊಬ್ಬರು ಹೇಳಿದ್ದಾರೆ. ಆದರೆ ಉಳಿದವರಿಗೆ ಇರುವಷ್ಟು ಸಾಮಾಜಿಕ ಗೌರವ, ಆರ್ಥಿಕ ಭದ್ರತೆ ಹಾಗೂ ನೆಮ್ಮದಿ ರೈತನಿಗೆ ಇಲ್ಲದೇ ಇರುವುದು ವಿಪರ್ಯಾಸ. ಇತ್ತೀಚಿನ ದಿನಗಳಲ್ಲಿ ಕೃಷಿ ಮಾಡುವ ಯುವಕರಿಗೆ ಮದುವೆಯಾಗಲು ವಧು ಲಭ್ಯವಾಗದೇ ಇರುವುದು ಒಂದು ದೊಡ್ಡ ಸಾಮಾಜಿಕ ಪಿಡುಗಾಗಿ ಪರಿಣಮಿಸಿದೆ. ಮದುವೆ ವಯಸ್ಸು ಮೀರಿದ ಹತ್ತಾರು ಹುಡುಗರನ್ನು ಹಳ್ಳಿಗಳಲ್ಲಿ ಕಾಣಬಹುದು. ಅಷ್ಟೇ ಅಲ್ಲ ಮದುವೆಯಾಗದ ಕಾರಣಕ್ಕೆ, ರೈತನಾದ ತಪ್ಪಿಗೆ ಖಿನ್ನತೆಗೆ ಒಳಗಾಗಿ ಕೆಲವು ಯುವಕರು ಆತ್ಮಹತ್ಯೆ ಮಾಡಿಕೊಂಡ ಉದಾಹರಣೆಗಳು ಸಹ ಇವೆ. ಒಬ್ಬ ಕಲಾವಿದ, ಸಾಹಿತಿ, ಕ್ರೀಡಾಪಟು ನಿಧನ ಹೊಂದಿದರೆ ತುಂಬಲಾರದ ನಷ್ಟ ಎಂದು ದೊಡ್ಡವರು ಮಾಧ್ಯಮಗಳಿಗೆ ಹೇಳಿಕೆ ನೀಡುತ್ತಾರೆ. ಆದರೆ ನಿಜವಾಗಿಯೂ ತುಂಬಲಾರದ ನಷ್ಟ ಎಂದರೆ ರೈತನ ಸಾವು. ಏಕೆಂದರೆ ಒಬ್ಬ ಕಲಾವಿದ, ಸಾಹಿತಿ, ಕ್ರೀಡಾಪಟು ಬದಲು ಮತ್ತೊಬ್ಬರು ಬರಬಹುದು ಆದರೆ ಹೆಚ್ಚಿನ ಸಂಖ್ಯೆಯಲ್ಲಿ ರೈತರು ಕೃಷಿ ವೃತ್ತಿಗೆ ಬರುವುದು ಅಷ್ಟು ಸುಲಭವಲ್ಲ. ರೈತನೊಬ್ಬ ನೇಣಿಗೆ ಕೊರಳೊಡ್ಡಿದ, ರೈತ ಕ್ರಿಮಿನಾಶಕ ಸೇವಿಸಿ ಸತ್ತ ಎಂಬ ಸುದ್ದಿ ಪತ್ರಿಕೆಗಳಲ್ಲಿ ಸಾಮಾನ್ಯ ಸುದ್ದಿಯಂತೆ ಆಗಿಬಿಟ್ಟಿದೆ. ಆದರೆ ನೆನಪಿರಲಿ, ಈ ಸಾವಿಗೆ ಪ್ರತಿಯೊಬ್ಬ ಸಾಮಾನ್ಯ ಪ್ರಜೆ, ಜನಪ್ರತಿನಿಧಿ, ಅಧಿಕಾರಿ, ಸಚಿವ... ಎಲ್ಲರೂ ಪ್ರತ್ಯಕ್ಷವಾಗಿ ಅಲ್ಲದಿದ್ದರೂ ಪರೋಕ್ಷವಾಗಿ ಹೊಣೆಗಾರರಾಗಿರುತ್ತಾರೆ.

ಕೃಷಿ ಕ್ಷೇತ್ರಕ್ಕೆ ಯಾರೂ ಖುಷಿಯಾಗಿ ಬರುತ್ತಿಲ್ಲ. ಒಬ್ಬ ರೈತ ತನ್ನ ಮಗ ರೈತನಾಗದೇ ಇರಲಿ ಎಂದು ಬಯಸುತ್ತಾನೆ. ಇಂದು ನಗರ ಪ್ರದೇಶಗಳಿಗೆ ವಲಸೆ ಹೋಗುವವರ ಸಂಖ್ಯೆ ಹೆಚ್ಚಾಗಿದೆ. ಏಕೆಂದರೆ ರೈತರೇ ಆಡುಮಾತಿನಲ್ಲಿ ಹೇಳುವಂತೆ 'ವ್ಯವಸಾಯ ಎಂದರೆ ಮನೆಮಂದಿ ಎಲ್ಲಾ ಸಾಯ' ಎಂಬಂತಾಗಿದೆ. ಇಂದು ಕೃಷಿ ಎಂದರೆ ಬಿಡುವಿಲ್ಲದ ಕಾಯಕ, ಗೌರವವಿಲ್ಲದ ಕೆಲಸ, ನಿತ್ಯ ಬೆವರು ಹರಿಸಬೇಕಾದ ದುಡಿಮೆ ಎಂದು ಯಾರೊಬ್ಬರೂ ಇಷ್ಟಪಡದ, ಎಲ್ಲರಿಗೂ ಒಲ್ಲದ ವೃತ್ತಿ ಇದಾಗಿದೆ. 'ಹೆಣ್ಣಿಗೆ ಹೆಣ್ಣೇ ಶತೃ' ಎಂಬ ಗಾದೆಯಂತೆ ಕೃಷಿಕರನ್ನು ಬೇರೆ ವೃತ್ತಿಯವರಿರಲಿ ಕೃಷಿಕ ಬಂಧುಗಳೇ ಇಷ್ಟಪಡದೇ ಇರುವುದು ವಿಪರ್ಯಾಸದ ಸಂಗತಿ. ಇಂದು ಕೃಷಿ ಕೆಲಸ ಮಾಡುವ ಯೋಗ್ಯ ವರರಿಗೆ ವಧು ಸಿಗದೇ ಇರುವುದು ಅದಕ್ಕೆ ಸಾಕ್ಷಿ. ಹಳ್ಳಿ ಹುಡುಗರಿಗೆ ಹಳ್ಳಿಯಲ್ಲೇ ಹುಡುಗಿ ಸಿಗುತ್ತಿಲ್ಲ ಅಥವಾ ಹೆಣ್ಣು ಹೆತ್ತವರು ಕೊಡುತ್ತಿಲ್ಲ. ಎಲ್ಲರಿಗೂ ನೌಕರಿಯಲ್ಲಿರುವ, ಪಟ್ಟಣ/ನಗರದಲ್ಲಿರುವ ಹುಡುಗರೇ ಬೇಕು. ಅದರಲ್ಲಿಯೂ ಸರ್ಕಾರಿ ನೌಕರಿಯಾದರೆ ಎಷ್ಟೇ ಖರ್ಚಾದರೂ, ಹೊಲ ಮಾರಿಯಾದರೂ ಸರಿ ಅದ್ಧೂರಿಯಾಗಿ ಮದುವೆ ಮಾಡಿಕೊಟ್ಟಾರು!

ಕೃಷಿ ಕ್ಷೇತ್ರಕ್ಕೆ ಯಾರೂ ಖುಷಿಯಾಗಿ ಬರುತ್ತಿಲ್ಲ. ಒಬ್ಬ ರೈತ ತನ್ನ ಮಗ ರೈತನಾಗದೇ ಇರಲಿ ಎಂದು ಬಯಸುತ್ತಾನೆ. ಇಂದು ನಗರ ಪ್ರದೇಶಗಳಿಗೆ ವಲಸೆ ಹೋಗುವವರ ಸಂಖ್ಯೆ ಹೆಚ್ಚಾಗಿದೆ. ಏಕೆಂದರೆ ರೈತರೇ ಆಡುಮಾತಿನಲ್ಲಿ ಹೇಳುವಂತೆ 'ವ್ಯವಸಾಯ ಎಂದರೆ ಮನೆಮಂದಿ ಎಲ್ಲಾ ಸಾಯ' ಎಂಬಂತಾಗಿದೆ. ಇಂದು ಕೃಷಿ ಎಂದರೆ ಬಿಡುವಿಲ್ಲದ ಕಾಯಕ, ಗೌರವವಿಲ್ಲದ ಕೆಲಸ, ನಿತ್ಯ ಬೆವರು ಹರಿಸಬೇಕಾದ ದುಡಿಮೆ ಎಂದು ಯಾರೊಬ್ಬರೂ ಇಷ್ಟಪಡದ, ಎಲ್ಲರಿಗೂ ಒಲ್ಲದ ವೃತ್ತಿ ಇದಾಗಿದೆ. 'ಹೆಣ್ಣಿಗೆ ಹೆಣ್ಣೇ ಶತೃ' ಎಂಬ ಗಾದೆಯಂತೆ ಕೃಷಿಕರನ್ನು ಬೇರೆ ವೃತ್ತಿಯವರಿರಲಿ ಕೃಷಿಕ ಬಂಧುಗಳೇ ಇಷ್ಟಪಡದೇ ಇರುವುದು ವಿಪರ್ಯಾಸದ ಸಂಗತಿ. ಇಂದು ಕೃಷಿ ಕೆಲಸ ಮಾಡುವ ಯೋಗ್ಯ ವರರಿಗೆ ವಧು ಸಿಗದೇ ಇರುವುದು ಅದಕ್ಕೆ ಸಾಕ್ಷಿ. ಹಳ್ಳಿ ಹುಡುಗರಿಗೆ ಹಳ್ಳಿಯಲ್ಲೇ ಹುಡುಗಿ ಸಿಗುತ್ತಿಲ್ಲ ಅಥವಾ ಹೆಣ್ಣು ಹೆತ್ತವರು ಕೊಡುತ್ತಿಲ್ಲ. ಎಲ್ಲರಿಗೂ ನೌಕರಿಯಲ್ಲಿರುವ, ಪಟ್ಟಣ/ನಗರದಲ್ಲಿರುವ ಹುಡುಗರೇ ಬೇಕು. ಅದರಲ್ಲಿಯೂ ಸರ್ಕಾರಿ ನೌಕರಿಯಾದರೆ ಎಷ್ಟೇ ಖರ್ಚಾದರೂ, ಹೊಲ ಮಾರಿಯಾದರೂ ಸರಿ ಅದ್ಧೂರಿಯಾಗಿ ಮದುವೆ ಮಾಡಿಕೊಟ್ಟಾರು !

ತನ್ನ ಮಗನಿಗೆ ಮೂರ್ನಾಲ್ಕು ವರ್ಷಗಳಿಂದ ಹುಡುಗಿ ಹುಡುಕುತ್ತಿದ್ದು, ಯಾರೊಬ್ಬರು ಹುಡುಗಿ ಕೊಡುತ್ತಿಲ್ಲ ಎಂದು ವಾಚಾಮಗೋಚರವಾಗಿ ಹೆಣ್ಣು ಹೆತ್ತವರನ್ನು ಹುಡುಗನ ತಂದೆ ಅರಳಿಕಟ್ಟೆಯಲ್ಲಿ ತನ್ನ ಸ್ನೇಹಿತರೊಂದಿಗೆ ಬಯ್ಯುತ್ತಿದ್ದ. ಅನೇಕ ದಿನ ಈತನ ಬೈದಾಟ ಕೇಳಿದ ಸ್ನೇಹಿತನೊಬ್ಬ, 'ಮದುವೆ ವಯಸ್ಸಿಗೆ ಬಂದ ಮಗಳಿಗೆ ನೂರಾರು ವರಗಳು ಬಂದರೂ ಯಾಕೆ ಮದುವೆ ಮಾಡಿಕೊಡುತ್ತಿಲ್ಲ? ಎಂದು ಪ್ರಶ್ನಿಸಲಾಗಿ, ಸರಿಯಾದ ವರ ಬಂದಿಲ್ಲ, ಸರ್ಕಾರಿ ನೌಕರಿಯಲ್ಲಿರುವವನ ನಿರೀಕ್ಷೆಯಲ್ಲಿದ್ದೇವೆ' ಎಂಬುದು ಆತನ ಉವಾಚವಾಗಿತ್ತು. ಆತನ ಉತ್ತರ ಎಲ್ಲರಿಗೂ ಆಶ್ಚರ್ಯ ತಂದಿತು. ತನ್ನ ಮಗನಿಗೆ ಹೆಣ್ಣು ಕೊಡುತ್ತಿಲ್ಲ ಎಂದು ರೇಗಾಡುವ ಜನ ತನ್ನ ಮಗಳನ್ನು ರೈತನೊಬ್ಬನಿಗೆ ಕೊಟ್ಟು ಮಾದರಿಯಾಗಬಹುದಿತ್ತಲ್ಲವೇ? ತಮಗೊಂದು ನ್ಯಾಯ ಅನ್ಯರಿಗೊಂದು ನ್ಯಾಯವೇ?

ಕೃಷಿಕ ವೃತ್ತಿ ಇಂದು ಎಷ್ಟು ತಾತ್ಸಾರಕ್ಕೆ ಒಳಗಾಗಿದೆ ಎಂದರೆ ಅಬಾಲವೃದ್ಧರಾಗಿ ಇಚ್ಛೆ ಪಡದಷ್ಟು ಮಟ್ಟಕ್ಕೆ ಮುಟ್ಟಿದೆ. ಮಗಳನ್ನು ಶಾಲೆಗೆ ಸೇರಿಸಬೇಕೆಂಬ ಇಚ್ಛೆಯಿಂದ ಹಳ್ಳಿಯಲ್ಲಿ ಕೃಷಿ ಭೂಮಿ ಇದ್ದರೂ ಹತ್ತಿರದ ಪಟ್ಟಣಕ್ಕೆ ಒಂದು ಕುಟುಂಬ ವಾಸಸ್ಥಾನ ಬದಲಿಸುತ್ತದೆ. ಆ ಕುಟುಂಬದ ಮಗುವನ್ನು ಆಂಗ್ಲ ಮಾಧ್ಯಮ ಶಾಲೆಗೆ ಒಂದನೇ ತರಗತಿಗೆ ಸೇರಿಸಲು ಅರ್ಜಿ ತಂದು ತಂದೆ ಅರ್ಜಿ ತುಂಬುತ್ತಾನೆ. ಮಗು ಉದ್ಯೋಗ ಎಂಬ ಕಾಲಂನಲ್ಲಿ ಕೃಷಿಕ ಎಂದು ತಂದೆ ಬರೆದಿರುವುದನ್ನು ಒಪ್ಪುವುದಿಲ್ಲ. ನಂತರ ಇಷ್ಟವಿಲ್ಲದಿದ್ದರೂ ಬ್ಯುಸಿನೆಸ್ ಎಂದು ಬರೆಯಬೇಕಾದ ಅನಿವಾರ್ಯತೆ ಉಂಟಾಗುತ್ತದೆ. ಅಂದರೆ ಒಂದು ಮಗುವಿಗೂ ಸಹ ತನ್ನ ತಂದೆ ಒಬ್ಬ ರೈತ ಎಂದು ಹೆಮ್ಮೆಯಿಂದ ಹೇಳಿಕೊಳ್ಳಲಾಗದ ಮಟ್ಟಕ್ಕೆ ರೈತ ಇಂದು ಮೂಲೆಗುಂಪಾಗಿದ್ದಾನೆ. ವಚನಕಾರರಾದ ಸರ್ವಜ್ಞ 'ಕೋಟಿ ವಿದ್ಯೆಗಿಂತ ಮೇಟಿ ವಿದ್ಯೆ ಮೇಲು' ಎಂದು ಹೇಳಿದ್ದಾರೆ. ಕೃಷಿ ಜ್ಞಾನ ಅನೇಕ ವಿದ್ಯೆಗಳಿಗಿಂತ ಹೆಚ್ಚು ಎಂದು ಹೇಳಿದ್ದು ಇಂದಿನ ದಿನಮಾನಕ್ಕೆ ಅನ್ವಯವಾಗುವುದಿಲ್ಲವೇನೋ ಅನಿಸುತ್ತಿದೆ. ಇಂದು ಮೇಟಿ ವಿದ್ಯೆಗಿಂತ ಮೋಸ ಮಾಡಿಯಾದರೂ ಸರಿ ಕೋಟಿ ಸಂಪಾದಿಸುವ ವಿದ್ಯೆ ಕುರಿತು ಎಲ್ಲರಿಗೂ ಒಲವಿದೆ. ನ್ಯಾಯಯುತವಾಗಿ ಕೃಷಿ ಮಾಡಿ, ತಮ್ಮ ಜೀವನ ಸಾಗಿಸಿದರಷ್ಟೇ ಸಾಲದಾಗಿದೆ. ಅಗತ್ಯ ಇರಲಿ ಇಲ್ಲದಿರಲಿ ಸಾಲ ಮಾಡಿಯಾದರು ದ್ವಿಚಕ್ರ ವಾಹನ, ಕಾರು ಖರೀದಿಸಿ ಸಮಾಜದಲ್ಲಿ ಗುರುತಿಸಿಕೊಳ್ಳಬೇಕಾದ ಅನಿವಾರ್ಯತೆ ರೈತರಿಗೆ ಅನೇಕ ರೀತಿಯ ಒತ್ತಡವನ್ನು ಉಂಟು ಮಾಡುತ್ತಿದೆ. ಇಂದು ಆಲ್ಕೋಹಾಲ್ ಮಾರುವವರು ಶ್ರೀಮಂತರಾಗಿ ಬದುಕುತ್ತಿದ್ದಾರೆ, ಅವರ ವ್ಯಾಪಾರದಲ್ಲಿ ಸಂಪಾದನೆ ಆ ಮಟ್ಟಕ್ಕೆ ಇದೆ, ಆದರೆ ಅಮೃತ ಸಮಾನವಾದ ಹಾಲು ಮಾರುವವರು ಅವರಂತೆ ಸಿರಿವಂತಿಕೆಯಿಂದ ಬದುಕಲು ಸಾಧ್ಯವಾಗುತ್ತಿಲ್ಲ. ಹೆಣ್ಣು ಕೊಡುವವರು ಮದ್ಯದಂಗಡಿ ಇಟ್ಟಿದ್ದಾರೆ ಎಂದರೆ ಮದುವೆ ಮಾಡಿಕೊಟ್ಟಾರು, ಆದರೆ ಹತ್ತು ಹಸುಗಳಿವೆ, ನೂರಾರು ಲೀಟರ್ ವ್ಯಾಪಾರ ಆಗುವ ಡೈರಿ ಇದೆ ಎಂದರೆ ಹೆಣ್ಣು ಕೊಡಲು ಮೂಗು ಮುರಿಯುತ್ತಾರೆ. ನ್ಯಾಯದ ಮಾರ್ಗವೋ, ಅನ್ಯಾಯದ ಮಾರ್ಗವೋ ಹಣ ಗಳಿಸಿ, ನಾಲ್ಕು ಜನ ಮೆಚ್ಚುವ ಹಾಗೆ, ಅಕ್ಕಪಕ್ಕದವರಿಗೆ ಕಣ್ಣು ಕುಕ್ಕುವ ಹಾಗೆ ಜೀವನ ಶೈಲಿಯನ್ನು ಹೊಂದುವುದು ಇಂದಿನ ಸಮಾಜದ ಬೇಡಿಕೆಯಾಗಿದೆ. ಈ ಬೇಡಿಕೆ ಈಡೇರಿಸುವ ಭರದಲ್ಲಿ ಯುವಕರು ಹೈರಾಣವಾಗುತ್ತಿದ್ದಾರೆ.

ದೇಶದ ಎರಡು ಕಣ್ಣುಗಳೆಂದರೆ ಒಬ್ಬ ರೈತ, ಮತ್ತೊಬ್ಬ ಯೋಧ. ಇಬ್ಬರ ಬದುಕು ನಿತ್ಯ ಹೋರಾಟದ ಬದುಕಾಗಿದೆ. ಅನಿಶ್ಚಿತತೆ ಇಬ್ಬರನ್ನೂ ಕಾಡುತ್ತಿದೆ. ಯೋಧನಿಗೆ ಅಗತ್ಯ ಆರ್ಥಿಕ ಭದ್ರತೆ, ಸಮಾಜದಲ್ಲಿ ಗೌರವ ಲಭಿಸುತ್ತಿರುವುದು ಒಂದು ಸಮಾಧಾನಕರ ಸಂಗತಿ. ಒಬ್ಬ ಯೋಧ ಯುದ್ಧದಲ್ಲಿ ಮರಣ ಹೊಂದಿದರೆ ದೇಶದ ಭದ್ರತೆಗೆ ಎಷ್ಟು ನಷ್ಟವೋ ಅಷ್ಟೇ ನಷ್ಟ ಒಬ್ಬ ರೈತ ಮೃತಪಟ್ಟರೆ ಆಗುತ್ತದೆ. ಇದು ಇಂದಿನ ಜನರ ಅರಿವಿಗೆ ಬರುತ್ತಿಲ್ಲ. ರೈತ ತನ್ನ ಕುಟುಂಬಕ್ಕೆ ಬೇಕಾದಷ್ಟು ಮಾತ್ರ ತನ್ನ ಜಮೀನಿನಲ್ಲಿ ಬೆಳೆದು ಬದುಕಲು ಪ್ರಾರಂಭಿಸಿದರೆ ರೈತನ ಅಗತ್ಯತೆ ಎಲ್ಲರಿಗೂ ಅರಿವಾಗುತ್ತದೆ. ಇಂದು ರೈತ ಅನೇಕ ಅಡೆತಡೆಗಳ ನಡುವೆ ತಿಂಗಳಾನುಗಟ್ಟಲೆ ಶ್ರಮವಹಿಸಿ ಬೆಳೆ ಬೆಳೆದರು ಅವನ ಬೆಳೆಗೆ ವೈಜ್ಞಾನಿಕ ಬೆಲೆ ಸಿಗದೆ, ಮಧ್ಯವರ್ತಿಗಳ ಮೋಸದಾಟಕ್ಕೆ ಸಿಕ್ಕು ತನ್ನ ಬೆಳೆಯನ್ನು ಕೇಳಿದಷ್ಟು ಬೆಲೆಗೆ ಮಾರುವ ಪರಿಸ್ಥಿತಿ ಉಂಟಾಗಿದೆ. ಸರ್ಕಾರ ರೈತನ ಬೆಳೆಗೆ ವೈಜ್ಞಾನಿಕ ಬೆಲೆ ನಿಗದಿಪಡಿಸಿ, ಬೆಳೆ ಬೆಳೆದ ರೈತನ ಜಮೀನಿನಲ್ಲೇ ಬೆಳೆ ಖರೀದಿಸುವ ಮಟ್ಟಕ್ಕೆ ವ್ಯವಸ್ಥೆಯನ್ನು ಮಾಡಬಹುದಾಗಿದೆ. ಆದರೂ ಎಮ್ಮೆ ಚರ್ಮದ ರಾಜಕಾರಣಿಗಳು, ಲಂಚಕೋರ ಅಧಿಕಾರಿಗಳ ಬೇಜವಾಬ್ದಾರಿಯಿಂದ ರೈತ ತಾನು ಬೆಳೆದ ಬೆಳೆಯನ್ನು ಹೊತ್ತು ತಿರುಗಬೇಕಾದ ಪರಿಸ್ಥಿತಿ ಉಂಟಾಗಿದೆ. ಅದರಿಂದ ಅವನು ತನ್ನ ಕೃಷಿ ಕಾಯಕದ ಬಗ್ಗೆ ಜಿಗುಪ್ಸೆ ಮೂಡುವ ಮಟ್ಟಕ್ಕೆ ಮುಟ್ಟುತ್ತಾನೆ. ತನ್ನ ಮುಂದಿನ ಸಂತತಿಗೆ ಈ ಕಾಯಕ ಬೇಡ ಎಂದು ನಿಶ್ಚಯಿಸುತ್ತಾನೆ.

ಭಾರತ ಕ್ರಿಕೆಟ್ ವಿಶ್ವಕಪ್ ಫೈನಲ್‌ನಲ್ಲಿ ಸೋತದ್ದು ದೇಶಕ್ಕಾದ ನಿಜವಾದ ನಷ್ಟವಲ್ಲ. ಮುಂದೊಂದು ದಿನ ಅದನ್ನು ಗಳಿಸಬಹುದು. ಆದರೆ ದೇಶದಲ್ಲಿ ವರ್ಷಕ್ಕೆ ಸಾವಿರಾರು ರೈತರು ಅಕಾಲ ಮರಣಕ್ಕೆ ತುತ್ತಾಗುತ್ತಿರುವುದು ನಿಜವಾದ ನಷ್ಟ, ಏಕೆಂದರೆ ಅವರನ್ನು ಮತ್ತೆ ಗಳಿಸಲು ಸಾಧ್ಯವಿಲ್ಲ. 'ಹರ್ಷದ ಕೂಳಿಗೆ ವರ್ಷದ ಕೂಳು ಕಳೆದುಕೊಂಡರು' ಎನ್ನುವಂತೆ ಮನರಂಜನೆ ಮಾಧ್ಯಮದ ಕುರಿತು ಇರುವ ಆಸಕ್ತಿಯು ಜೀವ ಸಂಜೀವಿನಿ ಆದ ಕೃಷಿ ಕ್ಷೇತ್ರದ ಕುರಿತು ಇರದೇ ಇರುವುದು ದುರದೃಷ್ಟಕರ. ಹಸಿರು ಕ್ರಾಂತಿಯ ಹರಿಕಾರ, ಕೃಷಿ ವಿಜ್ಞಾನಿ ಡಾ. ಎಂ.ಎಸ್. ಸ್ವಾಮಿನಾಥನ್ ಅವರು ಕೃಷಿ ಕ್ಷೇತ್ರದಲ್ಲಿ ಆಗುತ್ತಿರುವ ಬದಲಾವಣೆ ಬಗ್ಗೆ ಕಳವಳ ವ್ಯಕ್ತಪಡಿಸಿ ಆಡಿದ ಮಾತುಗಳನ್ನು ಗಂಭೀರವಾಗಿ ಪರಿಗಣಿಸಬೇಕಿದೆ. 'ಶ್ರಮ ಹೆಚ್ಚು, ಆದಾಯ ಕಡಿಮೆ ಎಂದು ಅನೇಕರು ಕೃಷಿ ಕ್ಷೇತ್ರ ತೊರೆಯುತ್ತಿದ್ದಾರೆ. ಮುಂದೊಂದು ದಿನ ಹಣ ಕೊಟ್ಟರೆ ಬಂದೂಕು ಸಿಗುತ್ತದೆ, ಆದರೆ ದವಸ ಧಾನ್ಯ ಸಿಗುವುದಿಲ್ಲ!' ಎಂದು ತಮ್ಮ ಭಾಷಣವೊಂದರಲ್ಲಿ ಎಚ್ಚರಿಸಿದ್ದಾರೆ. ಹೌದು, ಸರ್ಕಾರಗಳು ಈ ಕುರಿತು ಗಂಭೀರ ಚಿಂತನೆ ನಡೆಸಬೇಕಿದೆ. ಕೋಟಿ ಕೋಟಿ ಲಾಭ ಮಾಡಿಕೊಡಬಲ್ಲ ಉದ್ಯಮಗಳ ಸ್ಥಾಪನೆಗೆ ಮುಂದಾಗುವಂತೆ ಸರ್ಕಾರಗಳು ಕೃಷಿ ಕ್ಷೇತ್ರದಲ್ಲಿನ ಸವಾಲುಗಳಿಗೆ ಪರಿಹಾರ ಸೂಚಿಸಬೇಕಿದೆ. ರೈತರ ಬೆಳೆಗೆ ಉತ್ತಮ ಬೆಲೆ ನೀಡಿದರೆ ಅವರು ಸರ್ಕಾರದ ಮುಂದೆ ಸಹಾಯಧನಕ್ಕಾಗಿ ಕೈಚಾಚುವುದೇ ಇಲ್ಲ. ರೈತರಿಗೆ ಇರುವಷ್ಟು ಸ್ವಾಭಿಮಾನ ಯಾರಿಗೂ ಇಲ್ಲ.

ಪರಿಸ್ಥಿತಿ ಕೈಮೀರುವ ಮೊದಲು ಎಲ್ಲರೂ ಎಚ್ಚೆತ್ತುಕೊಳ್ಳಬೇಕಿದೆ. ಸಾರ್ವಜನಿಕರು ರೈತರ ಬಳಿ ನೇರವಾಗಿ ವ್ಯಾಪಾರ ಮಾಡುವಾಗ ಅವರಿಗೆ ನೆರವಾಗುವ ರೀತಿಯಲ್ಲಿ ಸಹಕರಿಸಬೇಕಿದೆ. ಬಾಯಿಗೆ ಬಂದ ಬೆಲೆಗೆ ಬೆಳೆ ಕೇಳಿ ರೈತರ ಆಕ್ರೋಶಕ್ಕೆ ಗುರಿಯಾಗಬಾರದು. ರೈತನಿಗೆ ಕೋಪ ಬಂದರೂ ಬಡವನ ಕೋಪ ದವಡೆಗೆ ಮೂಲ ಎನ್ನುವಂತ ಪರಿಸ್ಥಿತಿ ಉಂಟಾಗಿದೆ. ರೈತರನ್ನು ಸಾರ್ವಜನಿಕವಾಗಿ ಗೌರವದಿಂದ ನಡೆಸಿಕೊಳ್ಳಬೇಕಿದೆ. ಕೈ ಕೆಸರು ಮಾಡಿಕೊಳ್ಳದೆ ಬಾಯಿ ಮೊಸರು ಮಾಡಿಕೊಳ್ಳುವ ಜನ, ಕೊಂಡು ಕೊಳ್ಳುವ ಶಕ್ತಿ ಇದೆ ಎನ್ನುವ ಒಂದೇ ಕಾರಣಕ್ಕೆ ಅಹಂಕಾರದಿಂದ ಮೆರೆಯಬಾರದು. ರೈತನ ಪರಿಸ್ಥಿತಿ ಹೇಗಾಗಿದೆ ಎಂದರೆ ಅವನಿಗೆ ಕೈಕೆಸರಾದರೂ ಬಾಯಿಗೆ ಮೊಸರು ಸಿಗದೆ 'ದೀಪದ ಕೆಳಗೆ ಕತ್ತಲು' ಎಂಬ ದಾರುಣ ಸ್ಥಿತಿಯಲ್ಲಿದ್ದಾನೆ ರೈತ.

ಸರ್ಕಾರ ರೂಪಿಸುವ ಯೋಜನೆಗಳು ಅಷ್ಟು ಸುಲಭವಾಗಿ ರೈತರಿಗೆ ಮುಟ್ಟುತ್ತಿಲ್ಲ. ಹವಾಮಾನ ವೈಪರೀತ್ಯ, ಅತಿವೃಷ್ಟಿ, ಅನಾವೃಷ್ಟಿಯಿಂದ ಆದ ಬೆಳೆ ನಷ್ಟಕ್ಕೆ ಪರಿಹಾರ ಧನ ಪಡೆಯುವುದು ಅಷ್ಟು ಸುಲಭವಲ್ಲ. ಕಳಪೆ ಬಿತ್ತನೆ ಬೀಜ, ಕಳಪೆ ಗೊಬ್ಬರದಿಂದಲೂ ನಷ್ಟ ಅನುಭವಿಸುತ್ತಾನೆ. ರೈತರ ಬಳಿ ಲಂಚ ಕೇಳುವ ಸರ್ಕಾರಿ ಸಂಬಳ ಪಡೆಯುವ ಹೈಟೆಕ್ ಭಿಕ್ಷುಕರಿಗೆ ಸರಿಯಾಗಿ ಬುದ್ಧಿ ಕಲಿಸಬೇಕಾದ ಅಗತ್ಯವಿದೆ. ಸಣ್ಣ ಸಣ್ಣ ಕೆಲಸಕ್ಕೂ ಹತ್ತಾರು ಬಾರಿ ಕಚೇರಿಗೆ ಅಲೆಸುವ ಮಂದಿಗೆ ಬೀದಿಗೆ ಎಳೆದು ತಂದು ದಂಡಿಸಬೇಕಿದೆ. ರೈತರ ಸೇವೆಗಾಗಿ ನೇಮಕವಾಗಿರುವ ಅಧಿಕಾರಿಗಳು ರೈತರನ್ನು ಗುಲಾಮರಂತೆ ಕಾಣುವುದು ಸಹಜವಾಗಿದೆ. ಅಂತಹವರಿಗೆ ಮುಟ್ಟಿ ನೋಡಿಕೊಳ್ಳುವಂತಹ ಶಿಕ್ಷೆ ವಿಧಿಸಬೇಕಿದೆ. ಏನಾದರಾಗಲಿ ರೈತರ ಬದುಕು ಹಸನಾಗಲಿ, ರೈತರ ಮಕ್ಕಳಿಗೆ ಮದುವೆ ವಯಸ್ಸಿನಲ್ಲಿಯೇ ಮದುವೆಯಾಗಲಿ, ಅವರ ಸಂತತಿ ಹೆಚ್ಚಾಗಲಿ ಎಂದು ಹಾರೈಸೋಣ, ಏನಂತೀರಿ?

ಪದ ತಾಂಬೂಲ :

ಮಣ್ಣಿನ ಮಕ್ಕಳು ಅಕಾಲಿಕವಾಗಿ ಮಣ್ಣು ಸೇರಿದರೆ ಉಳಿದವರು ಮಣ್ಣನ್ನೇ ತಿನ್ನಬೇಕಾಗುತ್ತದೆ !

ಜ.22ಕ್ಕೆ ರಾಮಲಲ್ಲಾನ ಪ್ರತಿಷ್ಠಾಪನೆ ಮನೆ ಮನೆಗೂ ತಲುಪಲಿದೆ ಅಯೋಧ್ಯೆಯ ಮಂತ್ರಾಕ್ಷತೆ




ಬೆಂಗಳೂರು: ಅಯೋಧ್ಯೆಯಲ್ಲಿ ರಾಮ ವೈಭವಕ್ಕೆ ಸಜ್ಜಾಗುತ್ತಿದೆ. ಜನವರಿ 22ರಂದು ಭವ್ಯ ಮಂದಿರದಲ್ಲಿ ರಾಮಲಲ್ಲಾನ ಪ್ರತಿಷ್ಠಾಪನೆ ಮಾಡಲಾಗುತ್ತಿದೆ. ಅಯೋಧ್ಯೆ ನಗರಿಯ ಸಂಭ್ರಮದಲ್ಲಿ ಕರುನಾಡು ಭಾಗಿಯಾಗಲಿದ್ದು, ಈ ಹಿನ್ನೆಲೆಯಲ್ಲಿ ಕರ್ನಾಟಕದ ಮನೆ ಮನೆಗೂ ಅಯೋಧ್ಯೆಯ ಮಂತ್ರಾಕ್ಷತೆ ತಲುಪಲಿದೆ.

ಸಂಘರ್ಷ ಸವಾಲಿನ ಮಧ್ಯೆ ಪುರುಷೋತ್ತಮ ಶ್ರೀರಾಮನ ಸಂಭ್ರಮದ ತೇರಿಗೆ ಮುಹೂರ್ತ ನಿಗದಿಯಾಗಿದೆ. ಮುಂದಿನ ವರ್ಷ ಜನವರಿ 22ರಂದು ಭವ್ಯ ಮಂದಿರದಲ್ಲಿ ರಾಮಲಲ್ಲಾನ ಪ್ರಭೆ ಪ್ರಜ್ವಲಿಸಲಿದೆ. ಭವ್ಯ ಮಂದಿರದಲ್ಲಿ ರಾಮಲಲ್ಲಾನ ಪ್ರತಿಷ್ಠಾಪನೆ ಈಗ ಶ್ರೀರಾಮ ಭಕ್ತರಿಗೆ ಹಬ್ಬವಿದ್ದಂತೆ. ಕರುನಾಡಿನ ಪ್ರತಿ ಮನೆ ಮನೆಗೂ ಅಯೋಧ್ಯೆಯ ಶ್ರೀ ರಾಮನ ಸನ್ನಿಧಾನದಿಂದಲೇ ಮಂತ್ರಾಕ್ಷತೆ ತಲುಪಿಸುವ ಕೆಲಸವನ್ನು ವಿಶ್ವಹಿಂದೂ ಪರಿಷತ್ ಮಾಡುತ್ತಿದೆ. ಬೆಂಗಳೂರಿನ ವಿವಿಪುರಂನ ಆಂಜನೇಯನ ದೇಗುಲದಲ್ಲಿ ಕಲಶದಲ್ಲಿ ಮಂತ್ರಾಕ್ಷತೆ, ರಾಮನ ಭಾವಚಿತ್ರ ಪ್ರತಿ ಮನೆ ಮನೆಗೂ ತಲುಪಿಸುವ ಕಾರ್ಯಕ್ಕೆ ಚಾಲನೆ ಸಿಕ್ಕಿದೆ.

ಡಿಸೆಂಬರ್ 22ರೊಳಗೆ ಮಂತ್ರಾಕ್ಷತೆಯನ್ನು ಬೆಂಗಳೂರು ಸೇರಿದಂತೆ ರಾಜ್ಯದ ಪ್ರತಿ ಗ್ರಾಮ ಗ್ರಾಮಗಳಿಗೆ ತಲುಪಿಸುವ ಕಾರ್ಯ ನಡೆಯಲಿದೆ. ಇನ್ನು ಪ್ರಾಣ ಪ್ರತಿಷ್ಠಾಪನೆಯ ದಿನ ಸೂರ್ಯಾಸ್ತವಾದ ಮೇಲೆ ಪ್ರತಿ ಮನೆಯಲ್ಲಿ ದೀಪ ಬೆಳಗಿ ದೀಪೋತ್ಸವ ಆಚರಿಸಲು ಸಂಘಟನೆ ಮನವಿ ಮಾಡಿ ಕರಪತ್ರ ಹಂಚಲಿದೆ. ಪ್ರತಿ ಮನೆಗೂ ಆಯೋಧ್ಯೆಯ ಮಂತ್ರಾಕ್ಷತೆ ತಲುಪುವಂತೆ ಅಯೋಧ್ಯೆಯ ರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ ನಿರ್ಧಾರ ಮಾಡಿದೆ. ರಾಮ ಸಂಭ್ರಮಕ್ಕೆ ಎಲ್ಲಡೆ ಪಸರಿಸಲು ಈ ವಿಶಿಷ್ಟ ಪ್ರಯತ್ನವನ್ನು ಮಾಡುತ್ತಿದೆ.

ಪ್ರಿಯಾಂಕ ಆರ್.ಪಾಟೀಲ್‌ಗೆ ಪಿಹೆಚ್.ಡಿ



ಮೈಸೂರು, ನ.26- ಡಾ. ನಾಗರಾಜ ನಾಯಕ್ ಅವರ ಮಾರ್ಗದರ್ಶನದಲ್ಲಿ ಪ್ರಿಯಾಂಕ ಆರ್. ಪಾಟೀಲ್ ಅವರು ರಸಾಯನಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಬೆಂಗಳೂರು ಕಂಬಳ: ಓಟದಲ್ಲಿ ಚಿನ್ನದ ಪದಕ ಗೆದ್ದ 'ಕಾಂತಾರ' ಕೋಣಗಳು



ಬೆಂಗಳೂರು, ನ.26-ಬೆಂಗಳೂರಿನಲ್ಲಿ ನಡೆದ ಕಂಬಳದಲ್ಲಿ ನಟ, ನಿರ್ದೇಶಕ ರಿಷಬ್ ಶೆಟ್ಟಿ ಅಭಿನಯದ ಕಾಂತಾರ ಚಿತ್ರದಲ್ಲಿ ಬಳಸಿಕೊಂಡಿದ್ದ ಕೋಣಗಳಿಗೆ ಚಿನ್ನದ ಪದಕ ಗೆದ್ದಿವೆ.

ಪರಮೇಶ್ವರ ಭಟ್ ಮಾಲೀಕತ್ವದ ಕೋಣಗಳು ಇಂದು 6.5 ಕೋಲು ನೀರು ಎತ್ತರಕ್ಕೆ ನೀರು ಚಿಮ್ಮಿಸಿ ಚಿನ್ನದ ಪದಕ ಪಡೆದಿವೆ. ಬಾನೆತ್ತರಕ್ಕೆ ನೀರು ಚಿಮ್ಮಿಸುತ್ತಾ ಈ ಕೋಣಗಳ ಓಟವನ್ನು ಅಲ್ಲಿ ನೆರೆದಿದ್ದವರು ಕಣ್ತುಂಬಿಕೊಂಡರು.

ಅರಮನೆ ಮೈದಾನದಲ್ಲಿ ನಿರ್ಮಿಸಿರುವ ರಾಜ-ಮಹಾರಾಜ ಕೆರೆಯಲ್ಲಿ ಬೆಂಗಳೂರು ಕಂಬಳದ ಮೊದಲ ಚಿನ್ನದ ಪದಕವನ್ನು ಗೆಲ್ಲುವ ಮೂಲಕ ಅಪ್ಪು, ಕಿಟ್ಟು ಜೋಡಿ ಕೋಣಗಳು ಇತಿಹಾಸ ಬರೆದಿವೆ. ಏಳು ಬಲಿಷ್ಠ ಕೋಣಗಳ ಹಿಂದಿಕ್ಕಿದ ಕಾಂತಾರ ಜೋಡಿ ಕೋಣವು ಒಂದು ಲಕ್ಷ ನಗದು ಹಾಗೂ 16 ಗ್ರಾಂ ಚಿನ್ನ ತನ್ನದಾಗಿಸಿಕೊಂಡಿತು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಪ್ರಾಂಜಲ್‌ಗೆ ತೋರಿದ ಪ್ರೀತಿ, ಗೌರವಕ್ಕೆ ಆಭಾರಿಯಾಗಿದ್ದೇವೆ: ಪೋಷಕರ ಕೃತಜ್ಞತೆ



ನವದೆಹಲಿ: ಹುತಾತ್ಮ ಕ್ಯಾಪ್ಟನ್ ಎಂ.ವಿ. ಪ್ರಾಂಜಲ್ ಅವರ ಅಂತಿಮ ಯಾತ್ರೆಯ ವೇಳೆ ಪ್ರೀತಿ ಮತ್ತು ಗೌರವ ತೋರಿದ ಎಲ್ಲರಿಗೂ ಆಭಾರಿಯಾಗಿದ್ದೇವೆ ಎಂದು ಅವರ ಪೋಷಕರು ಹೇಳಿದ್ದಾರೆ.

ನಮ್ಮ ಪ್ರೀತಿಯ ಪುತ್ರ ಪ್ರಾಂಜು ವೀರ ಯೋಧನಾಗಿ ಹುತಾತ್ಮನಾಗಿದ್ದಾನೆ. ಅವನಿಗೆ ಜನರು ತೋರಿದ ಪ್ರೀತಿ, ಗೌರವ ಹೃದಯಸ್ಪರ್ಶಿಯಾಗಿತ್ತು ಎಂದು ಅವರ ತಂದೆ ಎಂ.ವಿ. ವೆಂಕಟೇಶ್ ಮತ್ತು ತಾಯಿ ಅನುರಾಧಾ ವೆಂಕಟೇಶ್ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಜಮ್ಮು ಮತ್ತು ಕಾಶ್ಮೀರದ ರಜೌರಿ ಜಿಲ್ಲೆಯಲ್ಲಿ ಭಯೋತ್ಪಾದಕರ ವಿರುದ್ಧ ನಡೆದ ಕಾರ್ಯಾಚರಣೆ ವೇಳೆ ಪ್ರಾಂಜಲ್ ಹುತಾತ್ಮರಾಗಿದ್ದರು. ಅವರ ಅಂತ್ಯಕ್ರಿಯೆಯು ಸರ್ಕಾರಿ ಮತ್ತು ಸೇನಾ ಗೌರವಗಳೊಂದಿಗೆ ಬೆಂಗಳೂರಿನ ಸೋಮಸುಂದರ ಪಾಳ್ಯದ ಚಿತಾಗಾರದಲ್ಲಿ ಶನಿವಾರ ನೆರವೇರಿತ್ತು

ಡಿ.1ರಂದು ವಿಶೇಷಚೇತನರ ಕ್ರೀಡಾಕೂಟ

ಮೈಸೂರು, ನ.26–ಜಿಲ್ಲಾ ಪಂಚಾಯತ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮತ್ತು ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆ ಮೈಸೂರು ಸಹಯೋಗದಲ್ಲಿ ಡಿ.ರಂದು 2023–24ನೇ ಸಾಲಿನ ಮೈಸೂರು ಜಿಲ್ಲೆಯ ವಿಶೇಷಚೇತನರ ಕ್ರೀಡಾಕೂಟವನ್ನು ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ. ಸ್ಪರ್ಧೆಗಳಲ್ಲಿ ಭಾಗವಹಿಸಲಿಚ್ಛಿಸುವ ಜಿಲ್ಲೆಯ ವಿಶೇಷಚೇತನ ಕ್ರೀಡಾಪಟುಗಳು ಡಿ.1ರಂದು ಬೆಳಗ್ಗೆ 8.30 ಗಂಟೆಗೆ ಚಾಮುಂಡಿವಿಹಾರ ಕ್ರೀಡಾಂಗಣ ಸಂಘಟಕರಲ್ಲಿ ವರದಿ ಮಾಡಿಕೊಳ್ಳುವುದು. ಹೆಚ್ಚಿನ ಮಾಹಿತಿಗಾಗಿ ದೂ.ಸಂ–0821–2564179ರ ಮೂಲಕ ಸಂಪರ್ಕಿಸಬಹುದು.

ಡಿ.4, ವಿವಿಧ ಹುದ್ದೆಗಳಿಗೆ ನೇರ ಸಂದರ್ಶನ

ಮೈಸೂರು,ನ.26–ರಾಷ್ಟ್ರೀಯ ಆರೋಗ್ಯ ಅಭಿಯಾನ ಯೋಜನೆಯ ಕಾರ್ಯಕ್ರಮದಲ್ಲಿ ಗುತ್ತಿಗೆ ಆಧಾರದ ಮೇಲೆ ಖಾಲಿ ಇರುವ ವಿವಿಧ ಹುದ್ದೆಗಳು ಮಕ್ಕಳು ತಜ್ಞರು, ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರು, ಅರವಳಿಗೆ ತಜ್ಞರು, ಮನೋವೈದ್ಯರು ಎಸ್‌ಎನ್‌ಸಿಯು ವೈದ್ಯರು, ಇ–ಪ್ರೋಗ್ರಾಮರ್, ಶುಶ್ರೂಷಕರು ಈ ಹುದ್ದೆಗಳ ಆಯ್ಕೆಗೆ ನೇರ ಸಂದರ್ಶನವನ್ನು ಡಿ.4ರಂದು ಹಮ್ಮಿಕೊಳ್ಳಲಾಗಿದೆ. ಅಂದು ಬೆಳಿಗ್ಗೆ 10:30ರಿಂದ ಮಧ್ಯಾಹ್ನ 2 ಗಂಟೆಯೊಳಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿ, ನಾಗಮ್ಮ ಆಸ್ಪತ್ರೆ ಆವರಣ ನಜರ್‌ಬಾದ್ ಇಲ್ಲಿ ಆಸಕ್ತಿ ಇರುವ ಅಭ್ಯರ್ಥಿಗಳ ಹುದ್ದೆಗೆ ಸಂಬಂಧ ಪಟ್ಟ ಎಲ್ಲಾ ಮೂಲ ದಾಖಲಾತಿಗಳೊಂದಿಗೆ ನೇರ ಸಂದರ್ಶನ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದಾಗಿದೆ. ಮಾಹಿತಿಗೆ ಜಿಲ್ಲಾ ಆರೋಗ್ಯ–ಕುಟುಂಬ ಕಲ್ಯಾಣಾಧಿಕಾರಿ ಕಚೇರಿ ನಜರ್‌ಬಾದ್ ಇಲ್ಲಿಗೆ ಸಂಪರ್ಕಿಸಬಹುದು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಮಂಟಪದ ಮನೆ

ನಮ್ಮಲ್ಲಿ ಬೀಟಿ, ಹಲಸು ಮರಗಳಿಂದ ತಯಾರಾದ ಪೂಜಾ ಮಂಟಪಗಳು ಸುಲಭ ಕಂತುಗಳಲ್ಲಿ ದೊರೆಯುತ್ತದೆ ವಿಚಾರಿಸಿ ವಿಳಾಸ ಶ್ರೀನಗರ ಮೈಸೂರು
9448207634
7406425642

Brother's HOUSE MATERIALS
ನಮ್ಮಲ್ಲಿ ಜಲ್ಲಿ, ಎಂ.ಸ್ಯಾಂಡ್, ಡಸ್ಟ್ & ಸೈಜ್ ಬೋಡ್ರಸ್ ಮುಂತಾದ ಕಟ್ಟಡ ಸಾಮಾಗ್ರಿಗಳು ಮನೆ ಕಟ್ಟಲು
ಕಡಿಮೆ ಬೆಲೆಯಲ್ಲಿ ದೊರೆಯುತ್ತದೆ
ವಿಳಾಸ : ಮಂಡಿಮೊಹಲ್ಲಾ, ಮೈಸೂರು
+91 89510 17411 | +91 95353 55376

HOME APPLIANCES SERVICE
ಫ್ರಿಡ್ಜ್, ವಾಷಿಂಗ್ ಮೆಶೀನ್, ಮೈಕ್ರೋ ವೋವೆನ್, LED, LCD, AC Sales & Service
Contact: Srinivas
9379699229

ಸುವರ್ಣಾವಕಾಶ
ನಿವೃತ್ತಿ, ಸ್ವಯಂನಿವೃತ್ತಿ, ಗೃಹಿಣಿಯರಿಗೆ ಸ್ವಯಂ ಉದ್ಯಮದಾರರಿಗೆ, ಪ್ರಖ್ಯಾತ ಬ್ಯಾಂಕ್ ಸಮೂಹದಿಂದ ಪಾರ್ಟ್ ಟೈಂ, ಫುಲ್ ಟೈಂ ಕೆಲಸಕ್ಕೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಬೇಸಿಕ್ ಸಂಬಳ: PF-ESI
Age above-30 Years
9886970147
8660521596

ಮನೆ ಬಾಡಿಗೆಗೆ/ಭೋಗ್ಯಕ್ಕೆ
ಶ್ರೀರಾಂಪುರ, ಯೂನಿವರ್ಸಿಟಿ ಬಡಾವಣೆ ಎದುರು, ಗಾಯಿತ್ರಿ ಲೇಔಟ್‌ನಲ್ಲಿ1BHK, 2BHK 1ನೇ ಫ್ಲೋರ್ ಹಾಗೂ 2ನೇ ಫ್ಲೋರ್ ಹಾಗೂ ಅಂಗಡಿ ಮಳಿಗೆ/ಗೋಡೌನ್ ಬಾಡಿಗೆಗೆ ಇದೆ
9110848989
9448092818

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 9108566022

ಬೇಕಾಗಿದ್ದಾರೆ
ನಂಜನಗೂಡು ನಗರದ ಶ್ರೀ ಲಕ್ಷ್ಮೀವೆಂಕಟೇಶ್ವರ ಮೋಟಾರ್ ಶೋರೂಂ ನಲ್ಲಿ ಮಾರಾಟ ವ್ಯವಸ್ಥಾಪಕ ಹುದ್ದೆಗೆ ಮಹಿಳೆ ಮತ್ತು ಸರ್ವಿಸ್ ವಿಭಾಗಕ್ಕೆ ಪುರುಷ ಅಭ್ಯರ್ಥಿ ಬೇಕಾಗಿದ್ದಾರೆ. ಸ್ಥಳೀಯರಿಗೆ ಆದ್ಯತೆ ನೀಡಲಾಗುವುದು.
9880707248

ವಿಠಲ್ ರೆಕಾರ್ಡ್ಸ್ ಪ್ರೈವೇಟ್ ಲಿಮಿಟೆಡ್
ಖಾಲಿ ಹುದ್ದೆ: 150+
ಸಂಬಳ 10,000 ಮೂಲ ಭತ್ಯೆ, +5000 ಪ್ರೋತ್ಸಾಹ ಧನ.
ಸಂದರ್ಶನದ ಸಮಯ: 9.30 ರಿಂದ 5.30.
ವಿಳಾಸ: #42, JCK ಇಂಡಸ್ಟ್ರಿಯಲ್ ಪಾರ್ಕ್, ಮೇಟಗಳ್ಳಿ ಪೋಸ್ಟ್, ಪ್ರೀತಿ ಗ್ರಾನೈಟ್ ಹತ್ತಿರ, ಕೆ.ಆರ್.ಎಸ್. ರಸ್ತೆ, ಮೈಸೂರು–570 016. ಕರೆ ಮಾಡಿ:
Mob: 8867064586

ಉದ್ಯೋಗವಕಾಶ
ವರಧಾನಿ ಹೋಮ್ ನರ್ಸಿಂಗ್ ಸಂಸ್ಥೆಗೆ ರೋಗಿಗಳನ್ನು ನೋಡಿಕೊಳ್ಳಲು ಅನುಭವ ಇರುವ ಇಲ್ಲದೆ ಇರುವ ಹುಡುಗ ಹುಡುಗಿಯರು ಮಹಿಳೆಯರು ಬೇಕಾಗಿದ್ದಾರೆ. ಉಳಿದುಕೊಳ್ಳಲು ಊಟ ವ್ಯವಸ್ಥೆ ಉತ್ತಮ ಸಂಬಳವಿರುತ್ತದೆ. ವಿದ್ಯಾರ್ಹತೆ ಅಗತ್ಯವಿಲ್ಲ
8123630683
8152863106

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 8880558064

DTCP SITES FOR SALE
DTCP Sites
Rs. 699 per sq.ft.,
Near Jayapura,
H.D. Kote Road, Mysore.
9590491194,9606783264

ತಕ್ಷಣ ಬೇಕಾಗಿದ್ದಾರೆ
ಅನುಭವವುಳ್ಳ ಸೆಕ್ಯೂರಿಟಿಗಾರ್ಡುಗಳು ಬೇಕಾಗಿದ್ದಾರೆ. ಉತ್ತಮವಾದ ಸಂಬಳ ವಯೋಮಿತಿ 30 ರಿಂದ 48 ರವರೆಗೆ ಮೇಟಗಳ್ಳಿ, ಬೆಳವಾಡಿ, ಜೆ.ಪಿ.ನಗರ, ಬೋಗಾದಿ ಹಾಗೂ ಮೈಸೂರಿನ ಸುತ್ತಮುತ್ತ ಇರುವ ಪ್ರದೇಶಗಳಿಗೆ.
9538886328,9538886326
9035269781,0821-4852002

SITE FOR SALE
1. Kesare II nd Stage 40x60 East Face
2. Kesare III rd Stage 40x60 West Face
3. 59x70 West Face Fully Commercial Opp. KSRTC Bus Stand
Call After 10.30 AM
9986731199

ಬೇಕಾಗಿದ್ದಾರೆ
ಬಟ್ಟೆ ಅಂಗಡಿಯಲ್ಲಿ ಸೇಲ್ ಮ್ಯಾನ್ ಕೆಲಸ ಮಾಡಲು ಅನುಭವವುಳ್ಳ ಹುಡುಗ, ಹುಡುಗಿಯರು ಬೇಕಾಗಿದ್ದಾರೆ. ಆಕರ್ಷಕ ಸಂಬಳ ESI+PF ಮತ್ತು ಇನ್ಸೆಂಟೀವ್ ಸೌಲಭ್ಯದೊಂದಿಗೆ ಗಾಂಧಿಸರ್ಕಲ್, ಮೈಸೂರು
Call After 10.30 AM
9980620678

ಉತ್ತಮ ಅವಕಾಶ
ಮನೆಯಲ್ಲಿ ಬಟ್ಟೆ ವ್ಯಾಪಾರ ಮಾಡಲು ನಮ್ಮಲ್ಲಿ ಹೋಲ್ ಸೇಲ್ ದರದಲ್ಲಿ ಎಲ್ಲಾ ರೀತಿಯ ಸೀರೆಗಳು ಮತ್ತು ಎಲ್ಲಾ ರೀತಿಯ ಬಟ್ಟೆಗಳು ಸಿಗುತ್ತದೆ ಒಮ್ಮೆ ಭೇಟಿ ನೀಡಿ
Call After 10.30 AM
9986731199

ಬೇಕಾಗಿದ್ದಾರೆ
ಮೈಸೂರಿನ ಪೆಟ್ರೋಲ್ ಬಂಕಿನಲ್ಲಿ ಕೆಲಸ ಮಾಡಲು ಪುರುಷರು / ಮಹಿಳೆಯರು ಬೇಕಾಗಿದ್ದಾರೆ. ಸಂಬಳ: 12,000.
Mob: 93800 41120

ಬೇಕಾಗಿದ್ದಾರೆ
ಮೈಸೂರಿನ ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಮ್ಯಾನೇಜರ್ ಮತ್ತು ಸೂಪರ್‌ವೈಸರ್‌ಗಳು ಬೇಕಾಗಿದ್ದಾರೆ. ಆಕರ್ಷಕ ವೇತನ ದೊರೆಯುತ್ತದೆ.
Mob: 9902754149

ಬೇಕಾಗಿದ್ದಾರೆ
Captain, Cashier, Room Boys, Waiters, Asst. Waiters, KT/Asst., Bar/Boys, Supervisor, Receptionist, South Indian Cook
Attractive Salary, PF & ESI with food and accommodation
ಸಂಪರ್ಕಿಸಿ
ಪಾರ್ಕ್‌ಲೇನ್ ಹೋಟೆಲ್
2720, ಹರ್ಷ ರಸ್ತೆ, ಮೈಸೂರು

ಮಾರಾಟಕ್ಕಿದೆ
ಉತ್ತಮವಾಗಿ ವ್ಯಾಪಾರವಾಗುತ್ತಿರುವ ಕಾಫಿಪುಡಿ ಅಂಗಡಿ ಮಾರಾಟಕ್ಕಿದೆ
7676840962

IMKTA - PRE-SCHOOL TEACHER TRAINING
Diploma Courses for SSLC, PU or any Degree Candidates.
Regular / Saturday / Correspondence Courses with practical training. www: imkta.in
ALPHA INTERNATIONAL SCHOOL @ Srirampura
Call: 7829937469
ONLINE TRAINING AVAILABLE

ಉಚಿತ ತರಬೇತಿ
ಮನೆಯಿಂದಲೇ ಬತ್ತಿಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

Aquaguard & Kent Sales and Service
Service Charge : 300/-
9901200444

ಬಾಡಿಗೆಗೆ ಕಾರು ಬೇಕಾಗಿದೆ
ಮೈಸೂರು ಸಿಟಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳಿಗೆ ಕಛೇರಿ ಕೆಲಸಕ್ಕೆ ತಿರುಗಾಡಲು ಕಾರು ಮಾಲೀಕರೇ ಆದ ಪ್ರತಿನಿತ್ಯ ಕೆಲಸವಿರುವ ಹಲವು ಗಂಟೆಗಳಿಗೆ, ತಿಂಗಳುಗಳಿಗೆ ಹಾಗೂ ವರ್ಷಕ್ಕೆ ಒಳ್ಳೆಯ ಕಾರು ಉತ್ತಮ ಸೇವೆ ಉತ್ತಮದರದಲ್ಲಿ ಬೇಕಾಗಿರುತ್ತದೆ ಸಂಪರ್ಕಿಸಿ:
9902508150
7406833379

Seema Palace Inn, Mysore
WANTED
Front Office Reception men 5 to 6 years experience and housekeeping women and men 5 years experience.
Mob: 9945299874

100% NEEM WOOD PLYWOOD & DOORS
@ FACTORY DEPOT RATES
NEEM BOND PLATINUM® 10yrs WARRANTY
ISO 9001:2015 Certified Depot
CALL 99012 91267
98454 26862

MUDA & RERA APPROVED SITES FOR SALE
30X40 @ 26 Lakhs
Ready For Registration
Bank Loan Available
Near Kit Eng. College
Next to Lalabahadur
Shastri Nagar, Mysore
7795609173



Solar Water Heater SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

WANTED FOR Bhaskar Heart Centre

Post	Qualification
Receptionist	Degree / PUC
Marketing / PRO (M)	Degree / PUC
Staff Nurses (F)	GNM / ANM
Pharma Aid	PUC / Degree
Office Boy	SSLC

0821-2499188 / 9880186386

SITE FOR SALE
Site No. 103, 30x40, North Face, Mahalaxmi Layout, Hebbal Industrial Area, Mysore.
(Bank Loan Available)
Fixed Rate 44 Lakhs
9980898999, 9886506651

PART TIME JOBS
ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರವಣಿಗೆ ಹಾಗೂ ಫಾರಂ ಫಿಲ್ಲಿಂಗ್, ಪ್ಯಾಕಿಂಗ್, ಟೆಲಿಕಾಲಿಂಗ್, ಡಾಟಾ ಎಂಟ್ರಿ ಹಾಗೂ ಮೊಬೈಲ್ ಮೂಲಕ ತಿಂಗಳಿಗೆ 15,000 ದಿಂದ 30,000 ಸಂಪಾದಿಸಿ + (ಕೊರಿಯರ್ ಸೌಲಭ್ಯವಿದೆ)
9148733213

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

HOME LOANS
CORPORATION, MUDA, KHB
GRAMATHANA PROPERTY
Site Purchase, Site Construction
House Purchase
Site Mortgage, house Mortgage
Contact: 9108416410

ಬೋಳು ತಲೆಯ ಸಮಸ್ಯೆಯೇ?

ಕಡಿಮೆ ಬೆಲೆಯಲ್ಲಿ ಹೇರ್ ಪ್ಯಾಚ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Arikethana Road, kuvempunagar, Mysuru
MYSURU 9611028523 MANGALORE 9343142258

COMMERCIAL SITE FOR SALE
20x30, South-East Corner, Site No. 780, Mayura Circle, Hebbal 2nd Stage, Mysore.
Fixed rate Rs. 75 Lakh final.
9886506651, 9980898999

WANTED
Lady Receptionist with knowledge of Computer for a Doctors Clinic in Kuvempunagar.
Time 5 pm to 9 pm
Mob: 96633 76393

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:
6361056646, 7676844160

ಕೆಂಪಮಣ್ಣು ಮತ್ತು ಗ್ರಾವೆಲ್ ಮಣ್ಣು ಮೈಸೂರಿನ ಶೇಷಾದ್ರಿಪುರಂ ಕಾಲೇಜು, ಹೆಬ್ಬಾಳ ಹತ್ತಿರ ಇರುವ ಜಾಗಕ್ಕೆ ಸುಮಾರು ನೂರು ಲೋಡು ಬೇಕಾಗಿರುತ್ತದೆ.
ಸಂಪರ್ಕಿ: ಶ್ರೀ ಜಯರಾಮು
9901211441

ಬೇಕಾಗಿದ್ದಾರೆ
ಮೈಸೂರಿನ ಹೂಟಗಳ್ಳಿ ಕೈಗಾರಿಕಾ ಪ್ರದೇಶ (ರಾಣಿಮದ್ರಾಸ್) ಕಾರ್ಖಾನೆಗೆ ಹತ್ತಿರವಿರುವ ಕಾರ್ಖಾನೆಗೆ 35 ವರ್ಷದಿಂದ 50 ವರ್ಷದೊಳಗಿನ ಪುರುಷ, ವಿದ್ಯಾವಂತ, ಹಗಲು ಮತ್ತು ರಾತ್ರಿ 12 ಗಂಟೆ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಾರದ ರಜೆ ಮತ್ತು ಕ್ಯಾಂಟೀನ್ ಸೌಲಭ್ಯವಿರುತ್ತದೆ.
9731976148

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿ ಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ.
97318 91409

100% TEAK WOOD
FACTORY FINISH DOORS & FRAMES
@ FACTORY DEPOT RATES

10 YEARS WARRANTY*
9845426862
9901291267

WANTED
For Finance Office
* Executive - 4 Nos
* Telecalling - 4 Nos
* Receptionist - 1 No
* Driver Cum Office Boy - 1 No
(T&C), Contact -
98450 28614

ಬೇಕಾಗಿದ್ದಾರೆ
ಸೆಕ್ಯೂರಿಟಿ ಸೂಪರ್‌ವೈಸರ್, ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ಮೈಸೂರಿನ ಪ್ರತಿಷ್ಠಿತ ಹೋಟೆಲ್‌ನಲ್ಲಿ ಕಾರ್ಯನಿರ್ವಹಿಸಲು ಊಟ, ತಿಂಡಿ ಮತ್ತು ವಸತಿ ಸೌಲಭ್ಯವಿದೆ 12 ಗಂಟೆ ಪಾಳಗೆ ಆಕರ್ಷಕ ಸಂಬಳದೊಂದಿಗೆ ಸಂಪರ್ಕಿಸಿ
6364560079 | 9900763507

ಇಂದೇ ಸಂಪರ್ಕಿಸಿ
ಮೈಸೂರಿನ ಪ್ರತಿಷ್ಠಿತ ಕಂಪನಿಗೆ, ಶೋರೂಂಗಳಿಗೆ ಮತ್ತು ಆಫೀಸ್‌ಗಳಿಗೆ ಕೆಲಸ ಮಾಡಲು ಯುವಕ/ಯುವತಿಯರು ಬೇಕಾಗಿದ್ದಾರೆ. Any Qualification 7th, 10th, PUC, ITI any Degree Pass/Fail ಆದವರಿಗೆ ಅರ್ಹತೆಯ ತಕ್ಕಂತೆ ಕೆಲಸ, ಸಂಬಳ 15000-35000 (ESI+PF+OT) ಸೇರಿ ಸಂಪರ್ಕಿಸಿ
9743889239 | 9164052361

ಸೈಟ್/ನಿವೇಶನ ಬೇಕಾಗಿದೆ
ದೇವನೂರು/ರಾಜೀವನಗರ, ಹಂಚ್ಯ ಮತ್ತು ಸಾತಗಳ್ಳಿ, P and T ಆರೋಗ್ಯ (ದೇವನೂರು), DTS Rao ನಗರ, ಸನ್ನ್ಯೂರ್ ಲೇಔಟ್, ವಿಜಯನಗರ, ದಟ್ಟಗಳ್ಳಿ ಕುವೆಂಪುನಗರದಲ್ಲಿ ನಿವೇಶನ/ಸೈಟ್‌ಗಳು ಬೇಕಾಗಿವೆ.
8660463567

ಮನೆ ಬಾಡಿಗೆಗೆ
40x60 ಡ್ಯೂಪ್ಲೆಕ್ಸ್ ಮನೆ 4 ಬೆಡ್ ರೂಂ ಫರ್ನಿಷಡ್ ಆನಂದನಗರ, ಡಿ.ಬ್ಲಾಕ್ ನಿವೇದಿತನಗರ ಹತ್ತಿರ
9448368800

ಬೇಕಾಗಿದ್ದಾರೆ
ವೃದ್ಧರು ರೋಗಿಗಳನ್ನು ಆರೈಕೆ ಮಾಡಲು ಯುವಕ /ಯುವತಿಯರು, ಮಹಿಳೆಯರು, ವಿಧವೆ /ವಿಚ್ಛೇದಿತೆಯರು ಹೋಂ ನರ್ಸಿಂಗ್ ಕೆಲಸಕ್ಕಾಗಿ ತಕ್ಷಣ ಬೇಕಾಗಿದ್ದಾರೆ. ಯಾವುದೇ ರೀತಿಯ ಶುಲ್ಕ ಇರುವುದಿಲ್ಲ (ನಮ್ಮಲ್ಲೇ ಉಳಿದುಕೊಳ್ಳುವವರಿಗೆ ಮಾತ್ರ ಅವಕಾಶ) ಸಂಬಳ 15000. ಸಂಪರ್ಕಿಸಿ
8050699742 | 6366141518

ಶ್ರೀ ಗುರೂಜಿ ಜ್ಯೋತಿಷ್ಯಂ
ಫೋನಿನ ಮೂಲಕ ಸಂಪರ್ಕಿಸಿ, ಮದುವೆ ವಿಳಂಬ, ಹಣಕಾಸಿನ ತೊಂದರೆ, ವ್ಯಾಪಾರದಲ್ಲಿ ನಷ್ಟ, ಸಾಲಬಾಧೆ, ಆರೋಗ್ಯ ಸಮಸ್ಯೆ, ಗಂಡ ಹೆಂಡತಿ ಜಗಳ, ಶತ್ರುಗಳ ಕಾಟ, ಮಕ್ಕಳಿಲ್ಲದ ಚಿಂತೆ, ಇನ್ನೂ ಹಲವಾರು ಸಮಸ್ಯೆಗಳಿಗೆ ಪರಿಹಾರ ಶತಸಿದ್ಧ, ಸಂಪರ್ಕಿಸಿ
94494 08551

ಕೆಲಸಕ್ಕೆ ಬೇಕಾಗಿದ್ದಾರೆ
1. ಸೆಕ್ಯೂರಿಟಿ ಗಾರ್ಡ್ (ಪುರುಷರು): ಡಿ. ಅರಸು ರಸ್ತೆ, , ಕುವೆಂಪುನಗರ, ಕೆ.ಆರ್. ಎಸ್, ಕಡಕೊಳ, ಹೆಬ್ಬಾಳ್ ಇಂಡಸ್ಟ್ರಿಯಲ್ ಏರಿಯಾ, ವಿಜಯನಗರ ,ಶ್ರೀರಂಗಪಟ್ಟಣ ಹತ್ತಿರ ಊಟ ಹಾಗೂ ವಸತಿ ವ್ಯವಸ್ಥೆ ಇರುತ್ತದೆ. ಆಸಕ್ತಿ ಇದ್ದವರು ಸಂಪರ್ಕಿಸಿ
83100 98788

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಪ್ರಸಿದ್ಧ ಆಫೀಸ್, ಶೋರೂಂ ಕಂಪನಿಗಳಿಗೆ 7th, 10th, PUC, ITI any Degree Pass/Fail ಆದವರಿಗೆ Cashier, Billing, Reception-ist, Data Entry, Admin, Assist HR, Team Leader, Backend, Production, Maintence, Helper ಇತ್ಯಾದಿ ಕೆಲಸಗಳಿಗೆ ಯುವಕ/ಯುವತಿಯರು ಬೇಕಾಗಿದ್ದಾರೆ. ತರಬೇತಿ ಇರುತ್ತದೆ. ಸಂಬಳ 15800/- 39000/- (ESI+PF+OT)ಯೊಂದಿಗೆ
9739857142 | 9035143190

ಬೇಕಾಗಿದ್ದಾರೆ
ಜಿಲ್ಲೆಯಲ್ಲಿ ಹೊಸದಾಗಿ ಪ್ರಾರಂಭವಾಗಿರುವ ಕಂಪನಿಗಳಿಗೆ ಹಾಗೂ ಆಫೀಸ್ ಕೆಲಸಕ್ಕೆ ಯುವಕ –ಯುವತಿಯರು ಬೇಕಾಗಿದ್ದಾರೆ.
Salary :13,000-21,000 + ESI, PF
ವಿದ್ಯಾರ್ಹತೆ – 10th, PUC, ITI, Diploma & Any Degree. ಇಂದೇ ಸಂಪರ್ಕಿಸಿ
9035734821

ತಕ್ಷಣ ಬೇಕಾಗಿದ್ದಾರೆ
ಕುವೆಂಪುನಗರ, ಅಪೋಲೋ ಆಸ್ಪತ್ರೆ ಏರಿಯಾದಲ್ಲಿ ಕೆಲಸ ಮಾಡಲು Badge ಹೊಂದಿರುವ ಅನುಭವಯುಳ್ಳ ಡ್ರೈವರ್‌ಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC
ಸಂಬಳ : 18500/-
ವಯೋಮಿತಿ : 45 ವರ್ಷದ ಒಳಗೆ
ESI ಮತ್ತು PF ಸೌಲಭ್ಯವಿರುತ್ತದೆ.
9620667819
9880727819

PLOT FOR SALE
MUDA APPROVED NIRMAAN NAGAR, Mosambayanahalli road, Near Kalpavruksha Raghavendra swamy temple, T.Narasipura Road, Mysore. 30X40
Rs.2000/- per sqft [Negotiable]
9916939424

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ/ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ ವಸತಿಯಿರುತ್ತದೆ.
ಸಂಬಳ+ಓಟಿ 15,200/- to 86,000/-
9740733021, 9535028750

WANTED
Required for rent, 2 BHK house in and around Niveditanagar / Anand Nagar / T.K. Layout.
Mob: 8197310113

ಬೇಕಾಗಿದ್ದಾರೆ
ದಿನಸಿ ಅಂಗಡಿಯಲ್ಲಿ ಪ್ಯಾಕಿಂಗ್ ಕೆಲಸಕ್ಕೆ ಅನುಭವವುಳ್ಳ ಹುಡುಗರು ಬೇಕಾಗಿದ್ದಾರೆ. ಆಕರ್ಷಕ ಸಂಬಳ. ಕುವೆಂಪುನಗರ ಸುತ್ತಮುತ್ತ.
9535370330

WANTED
Required for rent, 2 BHK house in and around SS Puram, Jayanagar, K.M. Puram.
Mob: 9591624825

House Site for sale at Madikeri Town
D.C. CONVERTED 6 CENTS, JUST 1 FURLONG FROM NEW S.P. OFFICE, ROAD SIDE LEVEL SITE. CONTACT :
9480013017
TIME: 6.30 AM TO 8.30 AM, 6 P.M TO 8 P.M

ತಕ್ಷಣ ಬೇಕಾಗಿದ್ದಾರೆ
ಹೆಬ್ಬಾಳ್ ಮತ್ತು ಮೇಟಗಳ್ಳಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC ಮೇಲ್ಪಟ್ಟು
ಸಂಬಳ: 18500/- +W/o (8hrs)
9880727819
9620667819

ಶಿಕ್ಷಕಿಯರು ಬೇಕಾಗಿದ್ದಾರೆ
D.Ed ತರಬೇತಿ ಹೊಂದಿರುವ ಏಕದಂತ ಕಿರಿಯ ಪ್ರಾಥಮಿಕ ಶಾಲೆ (ಇಂಗ್ಲಿಷ್ ಮೀಡಿಯಂ) ಕಳಸವಾಡಿ, ಸಿದ್ದಲಿಂಗಪುರ (ಪೋಸ್ಟ್) ಮೈಸೂರು
9916778412
9880348677

FOR SALE
1) 30x40, 30x50, Kote Road.
2) 30x40, 40x60 T. Narasipura Road.
3) 20x30 G+1 house Srirampura.
4) 40x60 Nice Vista Satagalli.
5) 40x70 house Vidyaranyapuram.
6) 10 guntas land Doctor Layout, attach new and old house city surrounding.
PRAKRUTHI PROPERTIES
9538690359, 9035990359

ನೇರ ನೇಮಕಾತಿ
Age (18-23) 10th, PUC, ಮೇಲ್ಪಟ್ಟ ಯುವಕ ಯುವತಿಯರು Trainee Managerಗಳಾಗಿ Earn (8750/- 16500/-) Pm Only Freshers, No Fee, ಪರಸ್ಥಳದವರಿಗೆ ಮಾತ್ರ ವಸತಿ ಮಿಡ್ಡಾಗಿ ಸಂಪರ್ಕಿಸಿ
Time (11 AM to 3PM)
ಕಾಲ್: 9342827788

ಗ್ರೌಂಡ್ ಫ್ಲೋರ್ ಬಾಡಿಗೆಗೆ ಇದೆ
2 ಡಬ್ಬಲ್ ಬೆಡ್ ರೂಂವುಳ್ಳಮನೆ ಸರಸ್ವತಿಪುರಂ ಕೆ.ಜಿ.ಕೊಪ್ಪಲ್, ಮೈಸೂರು
8197596089

ಮನೆಯಿಂದಲೇ ಕೆಲಸ
ಗೃಹಿಣಿಯರಿಗೆ, ವಯಸ್ಸಾದವರು, ವಿದ್ಯಾರ್ಥಿಗಳಿಗೆ, ವಯಸ್ಸಿನ ಮಿತಿ ಇಲ್ಲ, ಪೆನ್ಸಿಲ್ ಪ್ಯಾಕಿಂಗ್, ಕವರ್ ಪ್ಯಾಕಿಂಗ್, ಜ್ಯುವೆಲರಿ ಪ್ಯಾಕಿಂಗ್, ಮೆಹಂದಿ ಪ್ಯಾಕಿಂಗ್, Flower ಪ್ಯಾಕಿಂಗ್ ಕೆಲಸಗಳು ಲಭ್ಯವಿದೆ ಗಳಿಸಿ ತಿಂಗಳಿಗೆ 20000 ದಿಂದ 30000 ವರೆಗೆ
8147197339

WANTED
Experienced Beautician and Hair Dressers Required for Unisex Salon And Even Freshers are encouraged. Walk in on 28th Nov. Tue, Address: Glam and Glitz, VV Mohalla, Next to Chandra mouleshwara Temple, Mysore
9620903080

ಕೆಲಸಕ್ಕೆ ಬೇಕಾಗಿದ್ದಾರೆ
ವಿನಾಯಕ ಏಜೆನ್ಸಿ, ಹಾರ್ಡ್‌ವೇರ್, ಸ್ಟೀಲ್ ಅಂಡ್ ಸಿಮೆಂಟ್, ದೇವೇಗೌಡ ಸರ್ಕಲ್, ಆಲನಹಳ್ಳಿ, ಬನ್ನೂರು ಮುಖ್ಯ ರಸ್ತೆ, ಬಿ.ಕಾಂ ಮಾಡಿ, ಕಂಪ್ಯೂಟರ್ ಮತ್ತು ಟ್ಯಾಲಿ ಅಕೌಂಟೆಂಟ್ ಗೊತ್ತಿರುವವರು ಕೆಲಸಕ್ಕೆ ಬೇಕಾಗಿದ್ದಾರೆ
9448311600
9036161961

ಸೈಟುಗಳು ಮಾರಾಟಕ್ಕಿವೆ
ಟಿ.ನರಸೀಪುರ ಪಟ್ಟಣಕ್ಕೆ ಹೊಂದಿಕೊಂಡಂತೆ 30x20 ಅಳತೆಯ 15 ಸೈಟುಗಳು ಅದರಲ್ಲಿ 12 ಕಾರ್ನರ್ ಸೈಟು. ಸಂಪರ್ಕಿಸಿ:
9945227979

SITE FOR SALE
SHRIRAM LAND "OXYGEN 2"
Ready to register / RERA & DTCP approved Clear title Sites Starting@ Rs.14.99 Lakhs Onwards
HD Kote Main Road, Mysore (Landmark - Near Jayapura)
9686188919
7676644999

ಬೇಕಾಗಿದ್ದಾರೆ
1) Attender (Male)-1
2) Attender (Female)-1
3) Office Staff (Female)-1
ಮೈಸೂರು ನಿವಾಸಿ ಆಗಿರಬೇಕು.
9743294489

ಸೈಟು ಬೇಕಾಗಿದೆ ಮತ್ತು ಮನೆಗಳು ಮಾರಾಟಕ್ಕಿದೆ
ದೇವನೂರು 3ನೇ ಹಂತ, ಪಿ.ಟಿ, ಹೆಲ್ತ್ ನೌಕರರ ಬಡಾವಣೆ ಸಾತಗಳ್ಳಿ A&B ವಲಯ ಪೊಲೀಸ್ ಲೇಔಟ್‌ನ ಎಲ್ಲಾ ಹಂತಗಳಲ್ಲೂ ಸೈಟು ಬೇಕಾಗಿದೆ & 11x40 ಅಳತೆಯಲ್ಲಿ ಹೆಂಚು ಸೀಟು ತಾರಸಿ ಮನೆಗಳು ಬನ್ನಿಮಂಟಪ ಹುಡ್ಕೋದಲ್ಲಿ ಮಾರಾಟಕ್ಕಿದೆ ಶಿವಪ್ಪ ಬನ್ನಿಮಂಟಪ
9141050266

ಮೈಸೂರು ಮಿತ್ರ — ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ ರೂ. 630 ಮಾತ್ರ

ಮೈಸೂರು ಮಿತ್ರ ಸೋಮವಾರ 27 ನವೆಂಬರ್ 2023

ಕರ್ನಾಟಕ ಸಂಘದ ಕಾರ್ಯಕ್ರಮ ಎಲ್ಲೆಡೆ ಪಸರಿಸಲಿ

ವಿಧಾನ ಪರಿಷತ್ ಮಾಜಿ ಸದಸ್ಯ ಬಿ.ರಾಮಕೃಷ್ಣ ಆಶಯ



ಮಂಡ್ಯ, ನ.26–ಸಾಮಾಜಿಕ, ಸಾಂಸ್ಕೃತಿಕ, ವೈಚಾರಿಕವಾಗಿ ಭವಿಷ್ಯದಲ್ಲಿ ಮಕ್ಕಳಿಗೆ ಭದ್ರಬುನಾದಿ ಹಾಕುವ ಕರ್ನಾಟಕ ಸಂಘದ ಕಾರ್ಯಕ್ರಮಗಳನ್ನು ರಾಜ್ಯದೆಲ್ಲೆಡೆ ಪಸರಿಸಬೇಕಿದೆ. ಹಾಗಾಗಿ ಜಯಪ್ರಕಾಶಗೌಡರು ರಾಜ್ಯಾದ್ಯಂತ ಸಂಘವನ್ನು ಅಭಿವೃದ್ಧಿಪಡಿಸಲು ಮುಂದಾಗಬೇಕು ಎಂದು ವಿಧಾನಪರಿಷತ್ ಮಾಜಿ ಸದಸ್ಯ ಬಿ.ರಾಮಕೃಷ್ಣ ತಿಳಿಸಿದರು.

ನಗರದ ಸ್ವಾಮಿ ವಿವೇಕಾನಂದ ರಂಗ ಮಂದಿರದಲ್ಲಿ ಭಾನುವಾರ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಪ್ರಯುಕ್ತ ಕರ್ನಾಟಕ ಸಂಘದ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ, ಹ.ಕ.ರಾಜೇಗೌಡ ಸಂಶೋಧನಾ ಕೇಂದ್ರದ ಉದ್ಘಾಟನೆ ಹಾಗೂ ರಾಜ್ಯ ಪ್ರಶಸ್ತಿ ಪುರಸ್ಕೃತ ಕೆ.ಟಿ.ಚಂದು ಅವರಿಗೆ ಅಭಿನಂದನಾ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಪ್ರಸ್ತುತ ಮಮ್ಮಿ, ಡ್ಯಾಡಿ ಸಂಸ್ಕೃತಿಯಲ್ಲಿ ಕಳೆದುಹೋಗುತ್ತಿರುವ ಸನ್ನಿವೇಶದಲ್ಲಿ ನಮ್ಮ ನಾಡಿನ ಮೂಲ ಸಾಂಸ್ಕೃತಿಕ ಅಸ್ಮಿತೆಯನ್ನು ಉಳಿಸಿಕೊಳ್ಳುವುದಕ್ಕಾಗಿ ಕರ್ನಾಟಕ ಸಂಘ ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಅನುಷ್ಠಾನಗೊಳ್ಳಬೇಕಿರುವುದು ಅನಿವಾರ್ಯವಾಗಿ ಕಂಡುಬರುತ್ತಿದೆ ಎಂದರು.

ಇಂದಿನ ಸಾಮಾಜಿಕ ವ್ಯವಸ್ಥೆಯಲ್ಲಿ ಕರ್ನಾಟಕ ಸಂಘ ಮಾಡುತ್ತಿರುವ ಕಾರ್ಯಕ್ರಮಗಳು ಸುಸ್ಥಿರ ಮತ್ತು ಸತ್ ಸಂಪ್ರದಾಯದ ಬದುಕಿಗೆ ಮಾರ್ಗದರ್ಶಕವಾಗಿವೆ. ಹಾಗಾಗಿ ಜಯಪ್ರಕಾಶಗೌಡರು ತಮ್ಮ ಇಡೀ ತಂಡದೊಂದಿಗೆ ಸಾಕಷ್ಟು ಶ್ರಮವಹಿಸಿ, ನಾಡಿನ ಸಾಂಸ್ಕೃತಿಕ ಅಸ್ಮಿತೆಯನ್ನು ಉಳಿಸಿ ಬೆಳೆಸುವ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ. ಅವರಿಗೆ ಚಿಂತಕರು, ವಿಚಾರವಂತರು ಕೈಜೋಡಿಸಬೇಕಾಗಿದೆ ಎಂದು ಅಭಿಪ್ರಾಯಪಟ್ಟರು.

ಪ್ರಪಂಚದಲ್ಲೇ ಮಂಡ್ಯದ ಸೊಗಡು ಪರಿಚಯವಾಗಿದೆ. ಆದರೆ, ನಮ್ಮ ನಡುವೆಯೇ ನಮ್ಮತನ ಎಂಬುದು ಮರೆತು ಹೋಗುತ್ತಿದೆ. ಹಾಗಾಗಿ ಕರ್ನಾಟಕ ಸಂಘ ರಾಜ್ಯದೆಲ್ಲೆಡೆ ಶಾಖೆಗಳನ್ನು ತೆರೆದು ಕನ್ನಡದ ಸಾಂಸ್ಕೃತಿಕ ಮೌಲ್ಯವನ್ನು ಉನ್ನತಕ್ಕೇರಿಸಲು ಶ್ರಮಿಸಬೇಕಾದದು ಅತ್ಯಗತ್ಯ. ಬೆಂಗಳೂರಿನಲ್ಲಿ ಕರ್ನಾಟಕ ಸಂಘಕ್ಕೆ ಬಿಡಿಎ ನಿವೇಶನ ದೊರಕಿಸಿಕೊಡುವ ನಿಟ್ಟಿನಲ್ಲಿ ಅಧಿಕಾರಿವರ್ಗದಲ್ಲಿ ಚಿರಪರಿಚಿತವಾಗಿರುವ ಜಯರಾಂ ರಾಯಪುರ ಅವರು ಸಹಕರಿಸಬೇಕಿದೆ. ರಾಜ್ಯ ರಾಜಧಾನಿಯಲ್ಲಿ ಕರ್ನಾಟಕ ಸಂಘ ತಲೆ ಎತ್ತಿದರೆ, ಅದಕ್ಕೆ ಜಯಪ್ರಕಾಶಗೌಡರು ಚಾಲಕರಾದರೆ ಕರ್ನಾಟಕ ಸಂಘಕ್ಕೊಂದು ಗರಿಮೆ ಮೂಡಿದಂತಾಗುತ್ತದೆ. ಈ ನಿಟ್ಟಿನಲ್ಲಿ ಎಲ್ಲಾ ಸನ್ಮಿತ್ರರೂ ಚಿಂತನೆ ನಡೆಸಬೇಕೆಂದು ಹೇಳಿದರು.

ರಾಜ್ಯ ಜಲಸಾರಿಗೆ ಮಂಡಳಿ ಸಿಇಒ ಜಯರಾಂ ರಾಯಪುರ ಹ.ಕ.ರಾಜೇಗೌಡ ಸಂಶೋಧನಾ ಕೇಂದ್ರ ಉದ್ಘಾಟಿಸಿದರು. ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಜಯಪ್ರಕಾಶಗೌಡ ಪ್ರಾಸ್ತಾವಿಕ ನುಡಿಯಾಡಿದರು. ಇದೇ ವೇಳೆ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಕೆ.ಟಿ.ಚಂದು ಅವರನ್ನು ಸನ್ಮಾನಿಸಲಾಯಿತು. ಸಾಹಿತಿ ಎಸ್.ಕೃಷ್ಣಸ್ವರ್ಣಸಂದ್ರ ಪ್ರಾಯೋಜಕತ್ವದ ಕನ್ನಂಬಾಡಿ ಪ್ರಶಸ್ತಿಯನ್ನು ಹಿರಿಯ ಪತ್ರಕರ್ತ ಯೋಗೇಶ್ ಹಾಗೂ ವಿವಿಧ ಕ್ಷೇತ್ರಗಳ 25 ಸಾಧಕರಿಗೆ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ ಮಾಡಲಾಯಿತು. ವೇದಿಕೆಯಲ್ಲಿ ಮಾಜಿ ಶಾಸಕ ಎಂ.ಶ್ರೀನಿವಾಸ್, ವಿಧಾನ ಪರಿಷತ್ ಸದಸ್ಯ ಕೋಲಾರದ ಗೋವಿಂದರಾಜು (ಇಂಚರ), ಜಾನಪದ ಗಾಯಕ ಅಪ್ಪಗೆರೆ ತಿಮ್ಮರಾಜು, ಹ.ಕ.ರಾಜೇಗೌಡರ ಪುತ್ರ ಹಾಗೂ ಪುತ್ರಿ ಮತ್ತಿತರರು ಭಾಗವಹಿಸಿದ್ದರು.

ರಾಜ್ಯದಲ್ಲೇ ಒಳ್ಳೆಯ ಹೆಸರು

ಪ್ರೊ.ಜಯಪ್ರಕಾಶಗೌಡರ ನೇತೃತ್ವದಲ್ಲಿ ಮಂಡ್ಯದ ಕರ್ನಾಟಕ ಸಂಘ ರಾಜ್ಯದಲ್ಲೇ ಒಳ್ಳೆಯ ಹೆಸರು ಮಾಡುತ್ತಿದೆ. ಕಲೆ, ಸಾಹಿತ್ಯ, ಸಾಂಸ್ಕೃತಿಕ ರಂಗದಲ್ಲಿನ ದಕ್ಷರನ್ನು ಗುರುತಿಸಿ ಅವರನ್ನು ಪ್ರೋತ್ಸಾಹಿಸುವ ಮತ್ತು ಆ ಮೂಲಕ ಸಮಾಜಕ್ಕೆ ಅವರಿಂದ ಅಮೂಲ್ಯ ಕೊಡುಗೆಯನ್ನು ತರುವ ನಿಟ್ಟಿನಲ್ಲಿ ಇಂತಹ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಪ್ರಮುಖ ಪಾತ್ರ ವಹಿಸಿವೆ ಎಂದು ರಾಜ್ಯ ಜಲಸಾರಿಗೆ ಮಂಡಳಿ ಸಿಇಒ ಜಯರಾಂ ರಾಯಪುರ ತಿಳಿಸಿದರು. ಇಂತಹ ಬೆಳವಣಿಗೆಗೆ ಜಯಪ್ರಕಾಶಗೌಡ ಅವರನ್ನು ಪ್ರೇರೇಪಿಸಿದವರು ಹ.ಕ.ರಾಜೇಗೌಡರು. ಸಂಶೋಧನಾ ಕ್ಷೇತ್ರದಲ್ಲಿ ಜಿ.ಶಂ.ಪ., ಹ.ಕ.ರಾಜೇಗೌಡ ಅವರು ದಾರಿದೀಪವಾಗಿ ಕಂಡುಬರುತ್ತಾರೆ. ಅವರು ಸಂಶೋಧನಾ ಕ್ಷೇತ್ರದಲ್ಲಿ ಹಲವಾರು ಉತ್ಸಾಹಿ ಯುವ ಶಕ್ತಿಯನ್ನೂ ಒಗ್ಗೂಡಿಸಿ ತಮ್ಮ ಕಾರ್ಯ ಕ್ಷೇತ್ರವನ್ನು ವಿಸ್ತರಿಸಿದವರು. ಅದರಲ್ಲಿ ಕರ್ನಾಟಕ ಸಂಘದ ಬೆಳವಣಿಗೆಯೂ ಒಂದಾಗಿದೆ ಎಂದರು.

ಭ್ರೂಣ ಹತ್ಯೆಗೆ ಅವಕಾಶವಿಲ್ಲ

ಮಂಡ್ಯದಲ್ಲಿ ಸಚಿವ ಚಲುವರಾಯಸ್ವಾಮಿ ಹೇಳಿಕೆ



ಮಂಡ್ಯ, ನ.26– ಹೆಣ್ಣು ಭ್ರೂಣ ಹತ್ಯೆಗೆ ಸರ್ಕಾರದಲ್ಲಿ ಅವಕಾಶ ಇಲ್ಲ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಹೇಳಿದರು.

ನಗರದಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಭ್ರೂಣ ಹತ್ಯೆ ಸಮಾಜಘಾತುಕವಾದ ಕೆಲಸ. ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುತ್ತೇವೆ. ನಮ್ಮ ಸರ್ಕಾರ ಬಂದ ಮೇಲೆ ಇಂತಹ ಕೆಲಸಗಳಿಗೆ ಅವಕಾಶ ಇಲ್ಲ. ಬೆಂಗಳೂರು ಸೇರಿದಂತೆ ರಾಜ್ಯದಲ್ಲಿ ಭ್ರೂಣ ಹತ್ಯೆ ತಡೆಗೆ ಸಿದ್ದರಾಮಯ್ಯ ಸುಗ್ರಿವಾಜ್ಞೆ ಕೊಟ್ಟಿದ್ದಾರೆ ಎಂದರು.

ಇಂತಹ ಪ್ರಕರಣ ತಡೆಗೆ ಹಾಗೂ ಜನಪರ ಕೆಲಸವನ್ನು ಸರ್ಕಾರ ಮಾಡುತ್ತಿದ್ದು, ವಿರೋಧ ಪಕ್ಷದವರು ಬರಿ ಟೀಕೆ ಮಾಡುತ್ತಾರೆ ಅಷ್ಟೇ. ಇಂತಹ ಘಟನೆಗಳು ನಡೆಯಬಾರದು. ಜನರು ಭ್ರೂಣ ಹತ್ಯೆ ಮಾಡಬಾರದು. ಇಂತಹ ಕೆಲಸ ಮಾಡುವುದು ಎಷ್ಟು ತಪ್ಪೊ, ಅಷ್ಟೇ ಪ್ರೋತ್ಸಾಹ ನೀಡುವುದು ತಪ್ಪು. ಇಂತಹ ಪ್ರಕರಣಗಳ ಸಂಪೂರ್ಣ ನಿರ್ಮೂಲನೆಗೆ ರಾಜ್ಯ ಸರ್ಕಾರ ಮತ್ತಷ್ಟು ಅರಿವು ಮೂಡಿಸಲಿದೆ ಎಂದು ಹೇಳಿದರು.

> ಮಂಡ್ಯದಲ್ಲಿ ಭ್ರೂಣ ಪತ್ತೆ–ಹತ್ಯೆ ದೊಡ್ಡ ಅಪರಾಧ. ಯಾರು ಯಾರು ಇದರಲ್ಲಿ ಭಾಗಿಯಾಗಿದ್ದಾರೆ ಅವರಿಗೆ ತಕ್ಕ ಶಿಕ್ಷೆಯಾಗಬೇಕು. ಈ ಕಾಲದಲ್ಲೂ ಇಂತಹ ಕೆಲಸ ಮಾಡಿದ್ದಾರೆ ಅಂದ್ರೆ ನಂಬಕ್ಕಾಗಲ್ಲ. ಎಲ್ಲಾ ಅಧಿಕಾರಿಗಳೊಂದಿಗೆ ಚರ್ಚಿಸಿ, ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮ ಜರುಗಿಸಲಾಗುವುದು. ನನಗೆ ಈಗ ವಿಚಾರ ಗೊತ್ತಾಗಿದೆ. ನಾನೇ ನಿಂತು ಅಧಿಕಾರಿಗಳ ಜೊತೆ ಮಾತನಾಡಿ ಕ್ರಮ ಕೈಗೊಳ್ಳುತ್ತೇನೆ.
> -ದರ್ಶನ್ ಪುಟ್ಟಣ್ಣಯ್ಯ, ಶಾಸಕ

ಮೊಗರಳ್ಳಿಯಲ್ಲಿ ಸಾಧನಾ ಸಮಾವೇಶ



ಶ್ರೀರಂಗಪಟ್ಟಣ, ನ.26–ತಾಲೂಕಿನ ಮೊಗರಳ್ಳಿ(ಮಂಟಿ) ಗ್ರಾಮದಲ್ಲಿ ಭಾನುವಾರ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸಾಧನಾ ಸಮಾವೇಶ ಮತ್ತು ವಾರ್ಷಿಕೋತ್ಸವವನ್ನು ಶಾಸಕ ಎ.ಬಿ.ರಮೇಶ್ ಬಂಡಿಸಿದ್ದೇಗೌಡ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ಎಲ್ಲಾ ಸಂಘಟನೆಗಳಿಗಿಂತಲೂ ಧರ್ಮಸ್ಥಳದ ಗ್ರಾಮಾಭಿವೃದ್ಧಿ ಯೋಜನೆ ಮುಂಚೂಣಿಯಲ್ಲಿದೆ. ಸರ್ಕಾರಗಳು ಮಾಡದ ಅನೇಕ ಕಾರ್ಯಕ್ರಮಗಳನ್ನು ಧರ್ಮಸ್ಥಳದ ಗ್ರಾಮಾಭಿವೃದ್ಧಿ ಯೋಜನೆ ಗ್ರಾಮದಲ್ಲಿ ಮಾಡುತ್ತಿದೆ ಎಂದು ಹರ್ಷ ವ್ಯಕ್ತಪಡಿಸಿದರು. ಧರ್ಮಸ್ಥಳದ ಗ್ರಾಮಾಭಿವೃದ್ಧಿ ಯೋಜನೆಯ ಜಿಲ್ಲಾ ನಿರ್ದೇಶಕ ಎಚ್.ಎಲ್.ಮುರಳೀಧರ್ ಮಾತನಾಡಿ, ನಾನು ಅಭಿವೃದ್ಧಿ ಆಗಬೇಕು ಎನ್ನುವ ಬದಲು, ನಾವೆಲ್ಲರೂ ಅಭಿವೃದ್ಧಿ ಆಗಬೇಕು ಎನ್ನುವ ಸಂಕಲ್ಪ ಇಟ್ಟುಕೊಂಡು ಸಂಘಟನೆ ಮಾಡಬೇಕು. ಶಿಸ್ತಿನಿಂದ ಸಂಘಗಳ ವ್ಯವಹಾರವನ್ನು ಇನ್ನಷ್ಟು ಅಭಿವೃದ್ಧಿಪಡಿಸಿಕೊಂಡು ಹೋಗುವಂತೆ ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಗ್ರಾಪಂ ಅಧ್ಯಕ್ಷ ಚೆಲುವರಾಜು, ಸದಸ್ಯರಾದ ವಿಶ್ವನಾಥ್, ಕೃಷ್ಣಾನಂದ, ಶ್ರೀಕಂಠ, ತರುಣ್, ಉಮಾ, ಲಕ್ಷ್ಮೀ, ಗೀತಾ, ಕೋಮಲಾ, ಯೋಜನಾಧಿಕಾರಿ ಗಿರಿಜಾ, ಮುಖಂಡ ವಿವೇಕ್, ಎಲಿಜಬೆತ್ ರಾಣಿ, ಶ್ರೀನಿವಾಸ, ಯೋಗೀಶ್ ರೇಷ್ಮಾ, ಗಣಪತಿ ಭಟ್ಟ ಇನ್ನಿತರರು ಉಪಸ್ಥಿತರಿದ್ದರು.

ಕನ್ನಡ ಸಂಘದಿಂದ ನಾಟಕ ಪ್ರೇರಣೆ



ನಾಗಮಂಗಲ, ನ.26–ನಾಟಕಗಳ ಅಭಿನಯ, ಸಾಹಿತ್ಯ, ಸಾಂಸ್ಕೃತಿಕ ಜೀವಂತಿಕೆ ನೆಲೆಯಾಗಿ ರಂಗ ಪರಂಪರೆಯ ಉಳಿಸಿ ಬೆಳೆಸಿಕೊಂಡು ಬರುತ್ತಿರುವ ನಾಗಮಂಗಲ ಕನ್ನಡ ಸಂಘದ ಸಾಧನೆ ಅನನ್ಯವಾಗಿದೆ ಎಂದು ಸಂಗೀತ ನಿರ್ದೇಶಕ ಹಂಸಲೇಖ ಮೆಚ್ಚುಗೆ ವ್ಯಕ್ತಪಡಿಸಿದರು.

ಪಟ್ಟಣದಲ್ಲಿ ನಡೆಯುತ್ತಿರುವ ನಾಗರಂಗ ನಾಟಕೋತ್ಸವಕ್ಕೆ ಭಾನುವಾರ ಭೇಟಿ ನೀಡಿ ಮಾತನಾಡಿದ ಅವರು, ಕಥೆಯ ಜೀವಂತಿಕೆಗೆ ಮುನ್ನಡೆಯಾಗಿರುವ ನಾಟಕಗಳು ಪ್ರಸ್ತುತ ಸಮಾಜದ ಅರ್ಥಪೂರ್ಣವಾಗಿವೆ. ನಾಗರಂಗದ ನಾಟಕದ ಪರಿಚಯ ಕರಪತ್ರಗಳು ಪ್ರತಿವರ್ಷ ಆಕರ್ಷಣೆಯಾಗಿವೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಇದೇ ವೇಳೆ ಹಂಸಲೇಖ ಅವರನ್ನು ನಾಗರಂಗ ವತಿಯಿಂದ ಅಭಿನಂದಿಸಲಾಯಿತು.

ಕಾಂಗ್ರೆಸ್ ಕಾರ್ಯಕರ್ತರ ಸಮಸ್ಯೆಗಳ ಆಲಿಕೆ



ಕೆ.ಆರ್.ಪೇಟೆ, ನ.26–ಮುಂದಿನ ದಿನಗಳಲ್ಲಿ ತಾಲೂಕಿನ ಕಾಂಗ್ರೆಸ್ ಕಾರ್ಯಕರ್ತರ ಎಲ್ಲಾ ಸಮಸ್ಯೆಗಳಿಗೆ ಸ್ಪಂದಿಸಿ, ಕಷ್ಟ–ಸುಖಗಳನ್ನು ಆಲಿಸಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚೆಲುವರಾಯಸ್ವಾಮಿ ತಿಳಿಸಿದರು.

ಪಟ್ಟಣದ ಮೈಸೂರು ಮತ್ತು ಚನ್ನರಾಯಪಟ್ಟಣ ಮುಖ್ಯ ರಸ್ತೆಯ ಸಾಹುಕಾರ್ ಚಿಕ್ಕಣ್ಣಗೌಡ ಸಮುದಾಯ ಭವನದಲ್ಲಿ ಭಾನುವಾರ ನಡೆದ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹರಳಹಳ್ಳಿ ವಿಶ್ವನಾಥ್ ಅವರ ಪದಗ್ರಹಣ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ತಾಲೂಕಿನಲ್ಲಿ ನಮ್ಮ ಪಕ್ಷದ ಅಭ್ಯರ್ಥಿಗಳು ಸತತ ಸೋಲಿನಿಂದ ಧೃತಿಗೆಟ್ಟಿದ್ದೇವೆ ಎನ್ನುವ ಭಾವನೆಯಿಂದ ಕಾರ್ಯಕರ್ತರು ಹೊರಬರಬೇಕು. ಮುಂಬರುವ ಲೋಕಸಭಾ ಮತ್ತು ಜಿಲ್ಲಾ ಹಾಗೂ ತಾಪಂ ಚುನಾವಣೆಗಳಲ್ಲಿ ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸುವ ಮೂಲಕ ಕಾರ್ಯಕರ್ತರು ಸದೃಢವಾಗಿ ಸಂಘಟಿತರಾಗಬೇಕು ಎಂದು ಕರೆ ನೀಡಿದರು.

ಸರ್ಕಾರದ 5 ಗ್ಯಾರಂಟಿಗಳಲ್ಲಿ 4 ಯೋಜನೆಗಳನ್ನು ಜಾರಿಗೆ ತಂದಿದ್ದೇವೆ. ಜನವರಿಯಿಂದ ಉಳಿದ ಒಂದು ಗ್ಯಾರಂಟಿಯಾದ ಯುವನಿಧಿ ಯೋಜನೆ ಜಾರಿಗೆ ತರುತ್ತೇವೆ. ಇಂತಹ ಜನಸ್ನೇಹಿ ಯೋಜನೆಗಳ ಬಗ್ಗೆ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಜನಸಾಮಾನ್ಯರಿಗೆ ಸ್ಪಷ್ಟವಾಗಿ ಅರಿವು ಮೂಡಿಸಬೇಕು ಎಂದು ಹೇಳಿದರು. ಮಾಜಿ ಶಾಸಕ ಕೆ.ಬಿ.ಚಂದ್ರಶೇಖರ್, ಬಿ.ಪ್ರಕಾಶ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಡಿ.ಗಂಗಾಧರ್, ಟಿಎಪಿಸಿಎಂಎಸ್ ಅಧ್ಯಕ್ಷ ಬಿ.ಎಲ್.ದೇವರಾಜು, ಕೆಯುಐಡಿಎಫ್‌ಸಿ ನಿಗಮದ ಮಾಜಿ ಅಧ್ಯಕ್ಷ ಎಂ.ಡಿ.ಕೃಷ್ಣಮೂರ್ತಿ, ಕಾಂಗ್ರೆಸ್ ಮುಖಂಡರಾದ ವಿಜಯ್ ರಾಮೇಗೌಡ, ಕೋಡಿಮಾರನಹಳ್ಳಿ ದೇವರಾಜು, ಡಾ.ರಾಮಕೃಷ್ಣೇಗೌಡ, ಹಿರೀಕಳಲೆ ರಾಮದಾಸ್, ಬಸ್ತಿ ರಂಗಪ್ಪ, ಎಂ.ಜೆ.ಶಶಿಧರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ನಾಗೇಂದ್ರ ಕುಮಾರ್, ಕೆಪಿಸಿಸಿ ಸದಸ್ಯ ಕಿಕ್ಕೇರಿ ಸುರೇಶ್, ಕಾಂಗ್ರೆಸ್ ಮುಖಂಡರಾದ ಹೊಸಹೊಳಲು ಶಿವಣ್ಣ, ರಾಜಯ್ಯ, ತಾಲೂಕು ಯುವ ಕಾಂಗ್ರೆಸ್ ಅಧ್ಯಕ್ಷ ದೇವರಹಳ್ಳಿ ಡಿ.ಎಂ.ಮಹೇಂದ್ರ, ಸಿ.ಬಿ.ಚೇತನ್ ಕುಮಾರ್, ಯುವ ಕಾಂಗ್ರೆಸ್ ಮುಖಂಡರಾದ ಬೀರುವಳ್ಳಿ ಆಕಾಶ್, ಎ.ಬಿ.ಕುಮಾರ್, ಕೆ.ಎಸ್.ಕುಮಾರ್, ಮಾಕವಳ್ಳಿ ಸುಮಿತ್, ಕೆ.ಬಿ.ಪ್ರತಿಮಾ, ಆದಿಹಳ್ಳಿ ಮೀನಾಕ್ಷಿ, ತಾಲೂಕು ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಲೋಲಾಕ್ಷಿ, ಎ.ಸಿ.ಮುರುಳಿ, ಗೊರವಿ ಕುಮಾರ್, ಕೊಮ್ಮೇನಹಳ್ಳಿ ಅನಿಲ್, ಇಲಿಯಾಜ್ ಅಹಮದ್, ಚೇತನಾ ಮಹೇಶ್ ಇತರರು ಉಪಸ್ಥಿತರಿದ್ದರು.

ಟ್ರಾನ್ಸ್‌ಫಾರ್ಮರ್ ಸರಿಪಡಿಸುತ್ತಿದ್ದಾಗ ವಿದ್ಯುತ್ ಪ್ರವಹಿಸಿ ಬೆಸ್ಕಾಂ ಲೈನ್‌ಮ್ಯಾನ್ ಸಾವು

ಬೆಂಗಳೂರು, ನ.26– ಟ್ರಾನ್ಸ್‌ಫಾರ್ಮರ್ ಸರಿಪಡಿಸುತ್ತಿದ್ದಾಗ ವಿದ್ಯುತ್ ಪ್ರವಹಿಸಿ ಬೆಸ್ಕಾಂ ಲೈನ್‌ಮ್ಯಾನ್ ಮೃತಪಟ್ಟಿರುವ ಘಟನೆ ಆವಲಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಬೆಂಗಳೂರು ಹೊರವಲಯದ ಚೀಮಸಂದ್ರದಲ್ಲಿ ಶನಿವಾರ ನಡೆದಿದೆ.

ಸಿದ್ದರಾಜು (42) ಮೃತಪಟ್ಟ ವ್ಯಕ್ತಿಯಾಗಿದ್ದಾರೆ. ಚೀಮಸಂದ್ರದಲ್ಲಿ ಟ್ರಾನ್ಸ್‌ಫಾರ್ಮರ್ ಅನ್ನು ಸರಿಪಡಿಸುತ್ತಿದ್ದಾಗ ಬೆಳಿಗ್ಗೆ 10.30 ರ ಸುಮಾರಿಗೆ ಈ ಘಟನೆ ಸಂಭವಿಸಿದೆ ಎಂದು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಎಸ್‌ಪಿ ಮಲ್ಲಿಕಾರ್ಜುನ ಬಲದಂಡಿ ಅವರು ಮಾಹಿತಿ ನೀಡಿದ್ದಾರೆ.

ಹೊಸಕೋಟೆ ಮೂಲದ ಸಿದ್ದರಾಜು ಅವರು ಪತ್ನಿ, ಮಕ್ಕಳು, ಸಹೋದರನನ್ನು ಅಗಲಿದ್ದಾರೆ. ಪ್ರಕರಣ ಸಂಬಂಧ ಹೆಚ್ಚಿನ ತನಿಖೆ ನಡೆಸಲಾಗುತ್ತಿದೆ. ನಿರ್ಲಕ್ಷ್ಯದ ಮೂಲ ಕಾರಣ ತಿಳಿಯಲು ಬೆಸ್ಕಾಂನೊಂದಿಗೆ ಸಂಪರ್ಕದಲ್ಲಿದ್ದೇವೆ ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರತಿಯೊಬ್ಬರೂ ಕನ್ನಡ ಭಾಷೆ ಉಳಿವಿನ ಬಗ್ಗೆ ಚಿಂತಿಸಬೇಕು

ಹಿರಿಯ ಸಾಹಿತಿ ಸಿಪಿಕೆ ಕರೆ



ಮೈಸೂರು, ನ.26(ಎಸ್‌ಪಿಎನ್)– ರಾಷ್ಟ್ರಕವಿ ಕುವೆಂಪು ಅವರು, ಕನ್ನಡಿಗರ ಕುರಿತು 'ಎಲ್ಲಾದರು ಇರು ಎಂಥಾದರೂ ಇರು ಎಂದೆಂದಿಗೂ ಕನ್ನಡವಾಗಿರು' ಹೇಳಿಕೆಗೆ ಪ್ರತಿಯೊಬ್ಬ ಕನ್ನಡಿಗನೂ ಬದ್ಧವಾಗಿರಬೇಕು ಎಂದು ಹಿರಿಯ ಸಾಹಿತಿ ಡಾ. ಸಿ.ಪಿ.ಕೃಷ್ಣಕುಮಾರ್ (ಸಿಪಿಕೆ), ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಅಭಿಪ್ರಾಯಪಟ್ಟರು.

ಮೈಸೂರು–ಕೆಆರ್‌ಎಸ್ ರಸ್ತೆಯ ಚೆಲುವಾಂಬ ಪಾರ್ಕ್ ಆವರಣದಲ್ಲಿ ಚೆಲುವಾಂಬ ಪಾರ್ಕ್ ವಾಯುವಿಹಾರಿಗಳ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಸುವರ್ಣ ಕರ್ನಾಟಕ 50ರ ಸಂಭ್ರಮ ಹಾಗೂ 68ನೇ ಕನ್ನಡ ರಾಜ್ಯೋತ್ಸವ ಅಂಗವಾಗಿ ಕನ್ನಡ ಧ್ವಜಾರೋಹಣ, ಸಾಧಕರಿಗೆ ಸನ್ಮಾನ, ವಿವಿಧ ಕ್ರೀಡೆಯಲ್ಲಿ ವಿಜೇತರಾದವರಿಗೆ ಬಹುಮಾನ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ರಾಷ್ಟ್ರಕವಿ ಕುವೆಂಪು ಅವರು ಹೇಳಿದಂತೆ ಕನ್ನಡಿಗರೂ ಯಾವುದೇ ದೇಶದಲ್ಲಿದ್ದರೂ ಮನೆಗಳಲ್ಲಿ ಮಾತೃಭಾಷೆ ಕನ್ನಡದ ಬಗ್ಗೆ ವಿಶೇಷ ಒಲವು ಇರಲಿ. ನೀವು ಅಮೆರಿಕಾ, ರಷ್ಯಾ ಸೇರಿದಂತೆ ವಿದೇಶದ ಯಾವುದೇ ಭಾಗದಲ್ಲಿದ್ದರೂ ನಿಮ್ಮ ಮೈ–ಮನಗಳಲ್ಲಿ ಕನ್ನಡ ಭಾಷೆ ಮನೆ ಮಾಡಿರಬೇಕು ಎಂದು ಸಲಹೆ ನೀಡಿದರು.

ನಮ್ಮ ವೃತ್ತಿ ಯಾವುದೇ ಇರಲಿ. ಕರ್ತವ್ಯ ನಿರ್ವಹಿಸುವ ಸ್ಥಳದಲ್ಲಿ ಯಾವುದೇ ವ್ಯವಹಾರಿಕ ಭಾಷೆ ಮಾತನಾಡಲಿ. ಆದರೆ, ಮನೆಯಲ್ಲಿ ತಮ್ಮ ಕುಟುಂಬದವರ ಜೊತೆ ಕನ್ನಡ ಮಾತನಾಡುವುದನ್ನು ಮರೆಯಬೇಡಿ ಎಂದ ಹಿರಿಯ ಸಾಹಿತಿ ಸಿಪಿಕೆ, ಪ್ರಸ್ತುತ ಸಂದರ್ಭದಲ್ಲಿ ಕನ್ನಡ ಭಾಷೆ ಅನೇಕ ಸವಾಲುಗಳನ್ನು ಎದುರಿಸುತ್ತಿದೆ. ಹಾಗಾಗಿ ಪ್ರತಿಯೊಬ್ಬರು ಕನ್ನಡ ಭಾಷೆ ಉಳಿವಿನ ಬಗ್ಗೆ ಚಿಂತಿಸಬೇಕು ಎಂದು ಸಲಹೆ ನೀಡಿದರು.

ಕನ್ನಡಿಗರಿಗೆ ಭಾಷೆಯ ಮೇಲೆ ಅಭಿಮಾನ ಇದ್ದರೆ ಸಾಲದು. ಕನ್ನಡ ಪತ್ರಿಕೆ, ಪುಸ್ತಕಗಳ ಬಗ್ಗೆ ವಿಶೇಷ ಒಲವು ಉಳಿಸಿಕೊಂಡು ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು. ಇದರಿಂದ ನಮ್ಮ ಸಂಸ್ಕೃತಿ, ನಮ್ಮ ಭಾಷೆ ಬೆಳೆಯಲು ಸಹಕಾರಿಯಾಗುತ್ತದೆ ಎಂದು ಹಿರಿಯ ಪತ್ರಕರ್ತ ಅಂಶಿಪ್ರಸನ್ನ ಕುಮಾರ್ ಹೇಳಿದರು.

ಕರ್ನಾಟಕದಲ್ಲಿ ಆರೂವರೆ ಕೋಟಿ ಕನ್ನಡಿಗರು ನೆಲೆಸಿದ್ದಾರೆ. ಇನ್ನು ಕೆಲವರು ರಾಜ್ಯದ ಹೊರಗೆ ಹಾಗೂ ವಿದೇಶಗಳಲ್ಲಿ ಕನ್ನಡಿಗರು ಬೇರೆಬೇರೆ ಕೆಲಸಗಳ ನಿಮಿತ್ತ ನೆಲೆ ನಿಂತಿದ್ದಾರೆ. ಅವರೆಲ್ಲರೂ ಮಾತೃಭಾಷೆ ಕನ್ನಡವನ್ನು ತಮ್ಮ ಮನೆಯಲ್ಲಿ ಕಡ್ಡಾಯವಾಗಿ ಕಲಿತು ಮಾತನಾಡಬೇಕು. ವ್ಯವಹಾರಿಕ ಭಾಷೆಯಾಗಿ ಯಾವುದೇ ಭಾಷೆ ಕಲಿತರೂ ಕನ್ನಡ ಭಾಷೆ ರಕ್ತಗತವಾಗಿ ಬರಬೇಕು ಎಂದು ಸಲಹೆ ನೀಡಿದರು.



ಬಹುಮಾನ ವಿತರಣೆ: ಈ ವೇಳೆ ವಿವಿಧ ಸ್ಪರ್ಧೆಗಳಾದ ಬಲೂನ್ ಆಟದಲ್ಲಿ ಪುಷ್ಪಾಲತಾ ಮತ್ತು ಸುಜಾತ ಅವರಿಗೆ ಪ್ರಥಮ, ವೀಣಾ ಮತ್ತು ಭಾಗ್ಯ ದ್ವಿತೀಯ ಬಹುಮಾನ. ಮ್ಯೂಸಿಕಲ್ ಚೇರ್ ಸ್ಪರ್ಧೆಯಲ್ಲಿ ಲಕ್ಷ್ಮೀ (ಪ್ರ), ದಕ್ಷ(ದ್ವಿ), ಪ್ರಥಮ(ತೃ) ಬಹುಮಾನ. ಚಿತ್ರಕಲೆಯಲ್ಲಿ ರಮಾನಾಥ್ (ಜಿಆರ್‌ಎಸ್), 1–6ನೇ ವಯಸ್ಸಿನ ಮಕ್ಕಳಾದ ಸಿ.ದಿವ್ಯಾ (ಪ್ರ), ಬಿ.ದೀಪಿತ್ (ದ್ವಿ), ವಿಕಾಸಿ(ತೃ) ಅವರಿಗೆ ಬಹುಮಾನ, 7–10ನೇ ವಯಸ್ಸಿನ ಎಸ್.ದೀಕ್ಷಿತ್(ಪ್ರ), ಕೆ.ಎಸ್.ಹರ್ಷಿಣಿ(ದ್ವಿ), ಅನನ್ಯ ಭಜಂತ್ರಿ (ತೃ) ಬಹುಮಾನ. ಫಾಸಿಂಗ್ ಫೀಲ್ಲೋ ಸ್ಪರ್ಧೆಯಲ್ಲಿ ಪದ್ಮ(ಪ್ರ), ನೀತೂ ರಾಜ್(ದ್ವಿ), ಹೇಮಾ, ಭಾಗ್ಯ, ವಾಣಿ ಅವರಿಗೆ ಬಹುಮಾನ. ಕನ್ನಡ ಭಾಷೆ ಕುರಿತು ವಿಕ್ಟರ್, ವಿಜಯಲಕ್ಷ್ಮಿ ಅವರಿಗೆ ಬಹುಮಾನ ನೀಡಿ ಗೌರವಿಸಲಾಯಿತು. ಷಟಲ್ ಬ್ಯಾಡ್ಮಿಂಟನ್ ಸ್ಪರ್ಧೆಯಲ್ಲಿ ಭರತ್–ರಮೇಶ್, ಅನಿಲ್–ಸಂತೋಷ್, ಗಂಗಣ್ಣ–ಪುಟ್ಟಪ್ಪ, ಹರ್ಷಿನಿ– ಸಮರ್ಥ್ ಅವರಿಗೆ ಬಹುಮಾನ ವಿತರಿಸಲಾಯಿತು.

ಪಾರ್ಕ್ ಆವರಣದಲ್ಲಿ ಸ್ಥಾಪಿಸಿದ್ದ ಕರ್ನಾಟಕದ ಸೆಲ್ಫಿ ಸ್ಪಾಟ್ ಎಲ್ಲರ ಗಮನ ಸೆಳೆಯಿತು. ನಂತರ ನಾರಾಯಣ ಸ್ವಾಮಿ ಮತ್ತು ತಂಡದವರು ಸುಗಮ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು.

ಸುವರ್ಣ ಕರ್ನಾಟಕ 50ರ ಸಂಭ್ರಮ ಹಾಗೂ 68ನೇ ಕನ್ನಡ ರಾಜ್ಯೋತ್ಸವ ಅಂಗವಾಗಿ ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್ ಅವರು ಧ್ವಜಾರೋಹಣ ನೆರವೇರಿಸಿ, ಶುಭ ಹಾರೈಸಿದರು. ಈ ವೇಳೆ ವಿವಿ ಪುರಂ ಸಂಚಾರ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಎಂ.ಆರ್.ಲವ, ಹಿರಿಯ ವಕೀಲ ಎಸ್.ಭೈರಪ್ಪ, ನಿವೃತ್ತ ಮುಖ್ಯ ಇಂಜಿನಿಯರ್ ಎಂ.ಬಿ.ಜಯಶಂಕರ್, ಹಿರಿಯ ವೈದ್ಯ ಡಾ.ಎನ್.ರಮೇಶ್, ನಗರಪಾಲಿಕೆ ಮಾಜಿ ಸದಸ್ಯರಾದ ಭಾಗ್ಯ ಮಾದೇಶ್, ಎಸ್‌ಬಿಎಂ ಮಂಜು, ಕನ್ನಡ ಪರ ಹೋರಾಟಗಾರ ಮೂಗೂರು ನಂಜುಂಡಸ್ವಾಮಿ, ಯೋಗಪಟು ಹೆಚ್.ಖುಷಿ, ಬ್ಯಾಡಿಂಟನ್ ಆಟಗಾರ ಎನ್. ಅಮಿತರಾಜ್, ಚೆಲುವಾಂಬ ಪಾರ್ಕ್ ವಾಯುವಿಹಾರಿಗಳ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳಾದ ಕೃಷ್ಣ, ರಾಮಣ್ಣ, ಭರತ್, ವಿಶ್ವ, ಜಗನ್ನಾಥ್, ಸುರೇಶ್, ನಂಜುಂಡಸ್ವಾಮಿ, ರವಿ, ಶ್ರೀನಿವಾಸ, ಪ್ರೇಮಾ ರವಿ, ನಾಗರಾಜು ಸೇರಿದಂತೆ ಇತರರಿದ್ದರು.

ಪ್ರಧಾನಿ ಮೋದಿ ಭದ್ರತಾ ಉಲ್ಲಂಘನೆ: ಪಂಜಾಬ್ ಎಸ್‌ಪಿ ಸೇರಿ 7 ಮಂದಿ ಅಮಾನತು



ನವದೆಹಲಿ, ನ.26– ಪ್ರಧಾನಿ ನರೇಂದ್ರ ಮೋದಿ ಅವರ ಭದ್ರತಾ ಉಲ್ಲಂಘನೆ ಪ್ರಕರಣದಲ್ಲಿ ಪಂಜಾಬ್ ಎಸ್‌ಪಿ ಸೇರಿದಂತೆ 7 ಅಧಿಕಾರಿಗಳನ್ನು ಅಮಾನತುಗೊಳಿಸಲಾಗಿದೆ.

ಕಳೆದ ವರ್ಷ ಜನವರಿಯಲ್ಲಿ ಪ್ರಧಾನಿ ಮೋದಿ ಪಂಜಾಬ್‌ಗೆ ಭೇಟಿ ನೀಡಿದ್ದಾಗ ಭದ್ರತಾ ಉಲ್ಲಂಘನೆಯಾಗಿತ್ತು. ಈ ವೇಳೆ ಕರ್ತವ್ಯ ಲೋಪ ಉಂಟುಮಾಡಿದ್ದ ಆರೋಪದಲ್ಲಿ ಬಟಿಂಡಾ ಎಸ್‌ಪಿ ಸೇರಿದಂತೆ 7 ಅಧಿಕಾರಿಗಳನ್ನು ಅಮಾನತುಗೊಳಿಸಲಾಗಿದೆ. ಎಸ್‌ಪಿ ಗುರ್ಬಿಂದರ್ ಸಿಂಗ್, ಡಿವೈಎಸ್‌ಪಿ ಪರ್ಸೋನ್ ಸಿಂಗ್, ಡಿಎಸ್‌ಪಿ ಜಗದೀಶ್ ಕುಮಾರ್, ಮೂವರು ಇನ್ಸ್‌ಪೆಕ್ಟರ್‌ಗಳಾದ ತೇಜೇಂದ್ರ ಸಿಂಗ್, ಬಲ್ವಿಂದರ್ ಸಿಂಗ್ ಹಾಗೂ ಜತೀಂದರ್ ಸಿಂಗ್, ಓರ್ವ ಸಹಾಯಕ ಸಬ್ ಇನ್ಸ್‌ಪೆಕ್ಟರ್ ರಾಕೇಶ್ ಕುಮಾರ್ ಅಮಾನತಿಗೆ ಒಳಗಾದವರು.

ಅಧಿಕಾರಿ, ಗುರ್ಬಿಂದರ್ ಸಿಂಗ್, ಘಟನೆಯ ಸಮಯದಲ್ಲಿ ಪೊಲೀಸ್ ಸೂಪರಿಂಟೆಂಡೆಂಟ್ (ಕಾರ್ಯಾಚರಣೆ) ಆಗಿ ನೇಮಕಗೊಂಡರು ಮತ್ತು ಫಿರೋಜ್‌ಪುರದಲ್ಲಿ ಕರ್ತವ್ಯದಲ್ಲಿದ್ದರು. ಪಂಜಾಬ್ ಗೃಹ ಇಲಾಖೆ ಬುಧವಾರ ಹೊರಡಿಸಿದ ಆದೇಶದ ಪ್ರಕಾರ, ಪ್ರಸ್ತುತ ಬಟಿಂಡಾ ಜಿಲ್ಲೆಯಲ್ಲಿ ಎಸ್ಪಿಯಾಗಿ ನೇಮಕಗೊಂಡಿರುವ ಸಿಂಗ್ ಅವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಅಮಾನತುಗೊಳಿಸಲಾಗಿದೆ.

ಚೀನಾದಲ್ಲಿ H9N2 ಉಲ್ಬಣ: ಚಿಕಿತ್ಸೆ ಸನ್ನದ್ಧತೆ ಪರಿಶೀಲನೆಗೆ ರಾಜ್ಯ ಸರ್ಕಾರಗಳಿಗೆ ಕೇಂದ್ರ ಸೂಚನೆ



ನವದೆಹಲಿ, ನ.26– ಚೀನಾದಲ್ಲಿ ಉಲ್ಬಣವಾಗಿರುವ ಹೆಚ್9ಎನ್2 ಸಾಂಕ್ರಾಮಿಕದ ಹಿನ್ನಲೆಯಲ್ಲಿ ಎಚ್ಚೆತ್ತುಕೊಂಡಿರುವ ಕೇಂದ್ರ ಸರ್ಕಾರ ಕೂಡಲೇ ಚಿಕಿತ್ಸೆ ಸನ್ನದ್ಧತೆ ಪರಿಶೀಲನೆ ನಡೆಸುವಂತೆ ರಾಜ್ಯ ಸರ್ಕಾರಗಳಿಗೆ ಸೂಚನೆ ನೀಡಿದೆ.

ಹೆಚ್9ಎನ್2 ಸಾಂಕ್ರಾಮಿಕ ಉಲ್ಬಣದ ಬೆನ್ನಲ್ಲೇ ಚೀನಾದಲ್ಲಿ ಉಸಿರಾಟ ಸಂಬಂಧಿ ಅನಾರೋಗ್ಯ ಪ್ರಕರಣಗಳು ಹೆಚ್ಚುತ್ತಿವೆ. ಅದರಲ್ಲೂ ಮಕ್ಕಳಲ್ಲಿ ಉಸಿರಾಟದ ಸಮಸ್ಯೆ ಪ್ರಕರಣಗಳು ಗಣನೀಯವಾಗಿ ಏರಿಕೆಯಾಗುತ್ತಿದ್ದು, ಈ ಹಿನ್ನೆಲೆಯಲ್ಲಿ ಭಾರತದಲ್ಲಿ ಅಂತಹ ಪರಿಸ್ಥಿತಿ ಎದುರಾದರೆ ಅದನ್ನು ನಿರ್ವಹಿಸುವ ನಿಟ್ಟಿನಲ್ಲಿ ಚಿಕಿತ್ಸೆಗೆ ಬೇಕಾದ ತಯಾರಿ ಬಗ್ಗೆ ಪರಿಶೀಲನೆ ನಡೆಸಲು ಕೇಂದ್ರದ ಆರೋಗ್ಯ ಸಚಿವಾಲಯ ಮುಂದಾಗಿದೆ.

ರಾಜ್ಯ ಸರ್ಕಾರಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಸರ್ಕಾರಿ ಆಸ್ಪತ್ರೆಗಳಲ್ಲಿ ಸನ್ನದ್ಧತೆಯ ಕ್ರಮಗಳನ್ನು ತಕ್ಷಣವೇ ಪರಿಶೀಲಿಸಬೇಕು ಎಂದು ಅದು ಸಲಹೆ ನೀಡಿದೆ. ದೇಶವು ಕೋವಿಡ್‌ನಿಂದ ಬಳಲಿರುವ ಹಿನ್ನೆಲೆಯಲ್ಲಿ ಅದನ್ನು ಗಮನದಲ್ಲಿಟ್ಟುಕೊಂಡು ಪರಿಷ್ಕೃತ ಕಾರ್ಯಾಚರಣೆಯ ಮಾರ್ಗಸೂಚಿಗಳನ್ನು ಜಾರಿಗೆ ತರಬೇಕು ಎಂದು ತಿಳಿಸಲಾಗಿದೆ. ಶೀತ ಜ್ವರ, ಉಸಿರಾಟ ಸಮಸ್ಯೆಗಳ ಬಗ್ಗೆ ಜಿಲ್ಲಾ ಮತ್ತು ರಾಜ್ಯಮಟ್ಟದಲ್ಲಿ ನಿಕಟವಾಗಿ ಮೇಲ್ವಿಚಾರಣೆ ಮಾಡಬೇಕು. ಮೈಕೋಪ್ಲಾಸ್ಮಾ ನ್ಯುಮೋನಿಯಾ, ಕೋವಿಡ್ ಸೋಂಕಿನಿಂದ ಬಳಲಿದವರಲ್ಲಿ ಉಸಿರಾಟದ ಕಾಯಿಲೆಗಳು ಹೆಚ್ಚಾಗಿದ್ದು, ಆರೋಗ್ಯ ಸಚಿವಾಲಯವು ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸುತ್ತಿದೆ. ಜನರು ಈ ಬಗ್ಗೆ ಆತಂಕಪಡುವ ಅಗತ್ಯವಿಲ್ಲ ಎಂದು ಅದು ಪ್ರಕಟಣೆಯಲ್ಲಿ ತಿಳಿಸಿದೆ.

ಚಳಿಗಾಲದ ದೃಷ್ಟಿಯಿಂದ ಈ ಕಾರ್ಯಾಚರಣೆ ಅತ್ಯಂತ ಮುಖ್ಯವಾಗಿದ್ದು, ಇದು ಉಸಿರಾಟದ ಕಾಯಿಲೆಯ ಪ್ರಕರಣಗಳಲ್ಲಿ ಹೆಚ್ಚಳಕ್ಕೆ ಕಾರಣವಾಗುತ್ತದೆ. ಭಾರತ ಸರ್ಕಾರವು ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸುತ್ತಿದೆ.

ಸಾರ್ವಜನಿಕ ಆರೋಗ್ಯ ಮತ್ತು ಆಸ್ಪತ್ರೆಯ ಸಿದ್ಧತೆಗಳಾದ ಹಾಸಿಗೆಗಳು, ಔಷಧಗಳು ಮತ್ತು ಇನ್ಫ್ಲುಯೆನ್ಸಕ್ಕೆ ಲಸಿಕೆಗಳು, ವೈದ್ಯಕೀಯ ಆಮ್ಲಜನಕ, ಪ್ರತಿಜೀವಕಗಳು, ವೈಯಕ್ತಿಕ ರಕ್ಷಣಾ ಸಾಧನಗಳು, ಪರೀಕ್ಷಾ ಕಿಟ್ ಗಳು ಮತ್ತು ಕಾರಕಗಳ ಲಭ್ಯತೆಯನ್ನು ತಕ್ಷಣವೇ ಪರಿಶೀಲಿಸುವಂತೆ ಸಲಹೆ ನೀಡಿದ್ದಾರೆ. ಇದಲ್ಲದೇ ಆಮ್ಲಜನಕ ಘಟಕಗಳು ಮತ್ತು ವೆಂಟಿಲೇಟರ್‌ಗಳ ಕಾರ್ಯನಿರ್ವಹಣೆ, ಮತ್ತು ಸೋಂಕು ನಿಯಂತ್ರಣ ಅಭ್ಯಾಸಗಳನ್ನು ಪರಿಶೀಲಿಸುವಂತೆ ಎಲ್ಲಾ ರಾಜ್ಯ ಸರ್ಕಾರಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ಕೇಂದ್ರ ಆರೋಗ್ಯ ಸಚಿವಾಲಯ ಸೂಚಿಸಿದೆ.

ಸಂವಿಧಾನದಿಂದ ಪ್ರಜ್ಞಾವಂತ ಸಮಾಜ ನಿರ್ಮಾಣ



ಮೈಸೂರು, ನ. 26– ಸಂವಿಧಾನದ ಆಶಯಗಳು ಮತ್ತು ಕಾನೂನುಗಳನ್ನು ಪ್ರತಿಯೊಬ್ಬರು ಅರಿತು ನಡೆದರೆ ಪ್ರಜ್ಞಾವಂತ ಸಮಾಜ ಮತ್ತು ರಾಷ್ಟ್ರ ನಿರ್ಮಾಣ ಸಾಧ್ಯ ಎಂದು ಕೆಪಿಸಿಸಿ ಸದಸ್ಯರಾದ ನಜರ್‌ಬಾದ್ ನಟರಾಜ್ ತಿಳಿಸಿದರು.

ಸಂವಿಧಾನ ಸಮರ್ಪಣಾ ದಿನದ ಅಂಗವಾಗಿ ಹೊಯ್ಸಳ ಟ್ರಸ್ಟ್ ವತಿಯಿಂದ ಟೌನ್‌ಹಾಲ್‌ನಲ್ಲಿ ಡಾ.ಬಿ.ಆರ್.ಅಂಬೇಡ್ಕರ್‌ರವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ, ಆನಂತರ ಅವರು ಮಾತನಾಡಿದರು. ಪ್ರತಿಯೊಬ್ಬ ನಾಗರಿಕರು ಸಂವಿಧಾನದ ಅರಿವು ಪಡೆದರೆ ಪ್ರಜ್ಞಾವಂತಿಕೆಯ ರಾಷ್ಟ್ರ ನಿರ್ಮಾಣ ಸಾಧ್ಯ. ಸಂಘಟನೆಗಳು ಸಮಾಜವನ್ನು ಜಾಗೃತಿಗೊಳಿಸುತ್ತಿವೆ ಎಂದರು. ಇದೇ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡ ವರುಣ ಮಹದೇವ್, ರಾಜೀವ್ ಗಾಂಧಿ ಪಂಚಾಯತ್‌ರಾಜ್ ಪ್ರಧಾನ ಕಾರ್ಯದರ್ಶಿ ಲೋಕೇಶ್, ಗೋಪಾಲ್, ಜೆಟ್ಟಿಹುಂಡಿ ಮಂಜು, ಮಹದೇವ್ ಪ್ಲೇಯವುಡ್, ಪಂಡೆ ಮಹದೇವ್, ನಿತೀಶ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಇಂದು ಪುತ್ತರಿ ಹಬ್ಬ

ಮಡಿಕೇರಿ, ನ.26– ಕೊಡಗಿನ ಪ್ರಮುಖ ಹಬ್ಬಗಳಲ್ಲಿ ಒಂದಾಗಿರುವ ಧಾನ್ಯ ಲಕ್ಷ್ಮಿಯನ್ನು ಮನೆ ತುಂಬಿಕೊಳ್ಳುವ ಪುತ್ತರಿ ಹಬ್ಬ ನ.27ರಂದು ಜಿಲ್ಲೆಯಾದ್ಯಂತ ನಡೆಯಲಿದೆ. ನ.13ರಂದು ಕಕ್ಕಬ್ಬೆಯ ಶ್ರೀಪಾಡಿ ಇಗ್ಗುತಪ್ಪ ದೇವಾಲಯದಲ್ಲಿ ಹಬ್ಬಕ್ಕೆ ಮುಹೂರ್ತ ನಿಗದಿ ಮಾಡಲಾಗಿದ್ದು, ಅದರಂತೆ ಸೋಮವಾರ ನಾಡಿನಾದ್ಯಂತ ಪುತ್ತರಿ ಹಬ್ಬಾಚರಣೆ ಶ್ರದ್ಧಾ ಭಕ್ತಿಯೊಂದಿಗೆ ಸಂಭ್ರಮದಿಂದ ನಡೆಯಲಿದೆ.

ಶ್ರೀಪಾಡಿ ಇಗ್ಗುತಪ್ಪ ದೇವಾಲಯದಲ್ಲಿ ಅಮ್ಮಂಗೇರಿ ಜ್ಯೋತಿಷ್ಯರು ಮುಹೂರ್ತ ನಿಗದಿಪಡಿಸಿದ ಪ್ರಕಾರ ಮೊದಲಿಗೆ ಶ್ರೀ ಪಾಡಿ ಇಗ್ಗುತ್ತಪ್ಪ ದೇವಾಲಯದಲ್ಲಿ ರಾತ್ರಿ 7.20ಕ್ಕೆ ನೆರೆ ಕಟ್ಟುವುದು, 8.20ಕ್ಕೆ ಕದಿರು ತೆಗೆಯುವುದು, ರಾತ್ರಿ 9.20ಕ್ಕೆ ಪ್ರಸಾದ ಸ್ವೀಕಾರ ಕಾರ್ಯ ನಡೆಯಲಿದೆ. ಬಳಿಕ ನಾಡಿನಾದ್ಯಂತ ರಾತ್ರಿ 7.45ಕ್ಕೆ ನೆರೆ ಕಟ್ಟುವುದು, 8.45ಕ್ಕೆ ಕದಿರು ತೆಗೆಯುವುದು ಮತ್ತು ರಾತ್ರಿ 9.45ಕ್ಕೆ ಭೋಜನಕ್ಕೆ ಸಮಯ ನಿಗದಿಯಾಗಿದೆ.

ಜಿಲ್ಲೆಯ ವಿವಿಧ ದೇವಾಲಯಗಳು, ಕೊಡವ ಸಮಾಜಗಳು, ಗೌಡ ಸಮಾಜಗಳು, ಸಂಘ ಸಂಸ್ಥೆಗಳು ಹಬ್ಬಾಚರಣೆ ಸಿದ್ಧತೆ ಮಾಡಿಕೊಂಡಿವೆ. ನಗರ ಪ್ರದೇಶಗಳಲ್ಲಿ ಭತ್ತದ ಕದಿರಿನ ಕೊರತೆ ಇರುವ ಹಿನ್ನೆಲೆಯಲ್ಲಿ ಗ್ರಾಮೀಣ ಭಾಗಗಳಿಂದ ಭತ್ತದ ಕದಿರನ್ನು ತಂದು ಕೃತಕ ಗದ್ದೆಯನ್ನು ಮಾಡಿ ಅಲ್ಲಿ ಸಾಂಪ್ರದಾಯಿಕ ಪೂಜೆ ಸಲ್ಲಿಸಿ ಕದಿರು ಕುಯ್ಯಲಾಗುತ್ತದೆ. ಬಳಿಕ ನೆರೆದಿದ್ದವರಿಗೆ ನೆರೆ ಸಹಿತ ಹಂಚಲಾಗುತ್ತದೆ.

ಕೊಡವ ಹೋಂ ಲ್ಯಾಂಡ್ ಸ್ವಾಯತ್ತತೆ ನ್ಯಾಯಾಲಯದ ಮೂಲಕ ದೊರೆಯಲಿದೆ

ವಿರಾಟ್ ಹಿಂದೂಸ್ಥಾನ್ ಸಂಘಂನ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಜಗದೀಶ್ ಶೆಟ್ಟಿ ವಿಶ್ವಾಸ



ಮಡಿಕೇರಿ, ನ.26– ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಬೇಡಿಕೆಯ 'ಕೊಡವ ಹೋಂ ಲ್ಯಾಂಡ್ ಸ್ವಾಯತ್ತತೆ' ನ್ಯಾಯಾಲಯದ ಮೂಲಕವೇ ದೊರಕಲಿದೆ ಎಂದು ವಿರಾಟ್ ಹಿಂದೂಸ್ಥಾನ್ ಸಂಘಂನ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಜಗದೀಶ್ ಶೆಟ್ಟಿ ವಿಶ್ವಾಸ ವ್ಯಕ್ತಪಡಿಸಿದರು.

ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆಯ 33ನೇ ವಾರ್ಷಿಕೋತ್ಸವ ಮತ್ತು ಭಾರತ ಸಂವಿಧಾನ ದಿನಾಚರಣೆ ಪ್ರಯುಕ್ತ ನಗರದ ಹೊರವಲಯದ ಕ್ಯಾಪಿಟಲ್ ವಿಲೇಜ್‌ನಲ್ಲಿ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಖ್ಯಾತ ಅರ್ಥಶಾಸ್ತ್ರಜ್ಞರೂ ಆದ ರಾಜ್ಯಸಭಾ ಸದಸ್ಯ ಡಾ.ಸುಬ್ರಮಣಿಯನ್‌ಸ್ವಾಮಿ ಅವರು ಸಂವಿಧಾನ ಮತ್ತು ನ್ಯಾಯಾಲಯದ ಮೇಲೆ ವಿಶ್ವಾಸವಿರಿಸಿದ್ದು ಹೈಕೋರ್ಟ್‌ನಲ್ಲಿ ಕೊಡವ ಹೋಂ ಲ್ಯಾಂಡ್ ಸ್ವಾಯತ್ತತೆ ಕುರಿತಂತೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದಾರೆ. ವಕೀಲರಾದ ಸತ್ಯಸಬರ್‌ವಾಲ್ ಮತ್ತು ಬೆಂಗಳೂರಿನ ಕಿರಣ್ ಎಂಬುವರ ಸಹಿತ 4 ಮಂದಿ ವಕೀಲರ ತಂಡ ಕಾನೂನು ಹೋರಾಟದ ಪ್ರಕ್ರಿಯೆಯ ಭಾಗವಾಗಿದ್ದಾರೆ. ಈಗಾಗಲೇ ಈ ಅರ್ಜಿ ವಿಚಾರಣೆ ಆರಂಭವಾಗಿದ್ದು, ವಿಚಾರಣೆ ಸಂದರ್ಭ ಕೇಂದ್ರ ಸರ್ಕಾರದ ವಿಳಂಬ ಧೋರಣೆಗೆ ಹೈಕೋರ್ಟ್ ದಂಡ ವಿಧಿಸಿದೆ ಎಂದು ಮಾಹಿತಿ ನೀಡಿದರು.

ನ.29ರಂದು ಮತ್ತೆ ಹೈಕೋರ್ಟ್ ಮುಂದೆ ಕೊಡವ ಹೋಂ ಲ್ಯಾಂಡ್ ಕುರಿತ ಅರ್ಜಿ ವಿಚಾರಣೆಗೆ ಬರಲಿದೆ. ಈಗಾಗಲೇ ಡಾ.ಸುಬ್ರಮಣಿಯನ್‌ಸ್ವಾಮಿ ಅವರು ಕೊಡವ ಲ್ಯಾಂಡ್ ಸ್ವಾಯತ್ತತೆ ಕುರಿತು ವಿಜಯೋತ್ಸವ ಆಚರಿಸಲು ಕೊಡಗಿಗೆ ಬರುವುದಾಗಿ ಹೇಳಿದ್ದಾರೆ. ಮುಂದಿನ ಕೆಲವೇ ಸಮಯದಲ್ಲಿ ಈ ಕುರಿತು ಅಂತಿಮ ತೀರ್ಪು ಬರಲಿದ್ದು, ಸಂವಿಧಾನ ಬದ್ಧವಾಗಿಯೇ ಕೊಡವ ಹೋಂ ಲ್ಯಾಂಡ್ ಬೇಡಿಕೆ ಈಡೇರಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

> ಕೊಡವರು ಕೊಡಗಿನ ಮೂಲ ನಿವಾಸಿಗಳಾಗಿದ್ದು, ಸಾವಿರಾರು ವರ್ಷಗಳ ಹಿಂದೆ ಇಲ್ಲಿ ನೆಲೆ ನಿಂತಿದ್ದಾರೆ. ಆದರೆ ಸೂಕ್ಷ್ಮ ಕೊಡವ ಬುಡಕಟ್ಟು ಸಮುದಾಯವನ್ನು ನಾಶ ಮಾಡಲು ಹುನ್ನಾರ ನಡೆಸಲಾಗುತ್ತಿದ್ದು, ಸಿಎನ್‌ಸಿ ಇದರ ವಿರುದ್ಧ ಹೋರಾಡುತ್ತಿದೆ. ಅದರ ಅಂಗವಾಗಿ ಕೊಡವ ಸಮುದಾಯದವರಲ್ಲಿ ಜಾಗೃತಿ ಮೂಡಿಸಲು ಪಾದಯಾತ್ರೆ ನಡೆಸಲಾಗಿದೆ
> – ಎನ್.ಯು.ನಾಚಪ್ಪ, ಸಿಎನ್‌ಸಿ ಸಂಚಾಲಕ.

ಸಿಎನ್‌ಸಿ ಸಂಘಟನೆ ನ್ಯಾಯ ಮತ್ತು ಸಂವಿಧಾನ ಬದ್ಧ ಬೇಡಿಕೆಗಳಿಗೆ ನಿರಂತರ ಹೋರಾಟ ನಡೆಸಿಕೊಂಡು ಬರುತ್ತಿರುವುದು ಶ್ಲಾಘನೀಯ ಎಂದ ಅವರು, ಕೊಡವ ಸಮುದಾಯದ ವಿವಿಧ ಬೇಡಿಕೆಗಳ ಈಡೇರಿಕೆ ಕುರಿತು ಜನರಲ್ಲಿ ಜಾಗೃತಿ ಮೂಡಿಸಲು ಸಿಎನ್‌ಸಿ ಸಂಘಟನೆ ಜಿಲ್ಲಾದ್ಯಂತ ಯಶಸ್ವಿ ಪಾದ ಯಾತ್ರೆ ನಡೆಸಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಇದೇ ವೇಳೆ ಡಾ.ಸುಬ್ರಮಣಿಯನ್ ಸ್ವಾಮಿ ಮತ್ತವರ ಪತ್ನಿ ಸಿಎನ್‌ಸಿಯ 33ನೇ ವಾರ್ಷಿಕೋತ್ಸವ ಹಾಗೂ ಸಂವಿಧಾನ ದಿನದ ಕುರಿತು ನೀಡಿರುವ ಶುಭ ಸಂದೇಶದ ವಿಡಿಯೋವನ್ನು ಎಲ್‌ಇಡಿ ಪರದೆಯ ಮೂಲಕ ಪ್ರದರ್ಶಿಸಲಾಯಿತು. ಕಾರ್ಯಕ್ರಮಕ್ಕೂ ಮುನ್ನ ವಿರಾಟ್ ಹಿಂದೂಸ್ಥಾನ್ ಸಂಘಂನ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಜಗದೀಶ್ ಶೆಟ್ಟಿ ಅವರನ್ನು ತೆರೆದ ಜೀಪಿನಲ್ಲಿ ಮೆರವಣಿಗೆ ಕರೆದೊಯ್ಯಲಾಯಿತು. ಸಿಎನ್‌ಸಿ ಸಂಚಾಲಕ ಎನ್.ಯು.ನಾಚಪ್ಪ ಅವರು ಗಾಳಿಯಲ್ಲಿ ಗುಂಡು ಸಿಡಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಮುಕ್ಕೋಡ್ಲು ವ್ಯಾಲಿಡ್ಯೂ ತಂಡದಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

ಕಾರ್ಯಕ್ರಮದಲ್ಲಿ ಕಲಿಯಂಡ ಪ್ರಕಾಶ್, ಅಪ್ಪಚೆಟ್ಟೋಳಂಡ ಮನು ಮುತ್ತಪ್ಪ, ಪೂಮಾಲೆ ಪತ್ರಿಕೆ ಸಂಪಾದಕ ಅಜ್ಜಿನಿಕಂಡ ಮಹೇಶ್ ನಾಚಯ್ಯ, ರೈತ ಸಂಘದ ಅಧ್ಯಕ್ಷ ಕಾಡ್ಯಮಾಡ ಮನು ಸೋಮಯ್ಯ, ಕಾಫಿ ಬೋರ್ಡ್ ಮಾಜೀ ಅಧ್ಯಕ್ಷೆ ಆದೇಂಗಡ ತಾರಾ ಅಯ್ಯಮ್ಮ, ಕುಕ್ಕೇರ ಜಯ ಚಿಣ್ಣಪ್ಪ, ನಂದಿನೆರವಂಡ ನಿಶಾ, ಚಂಬಂಡ ಜನತ್, ಪುಲ್ಲೇರ ಕಾಳಪ್ಪ ಸೇರಿದಂತೆ ಜಿಲ್ಲೆಯ ವಿವಿಧ ಭಾಗಗಳಿಂದ ಕೊಡವ ಕೊಡವತಿಯರು ಸಾಂಪ್ರದಾಯಿಕ ಉಡುಗೆಯಲ್ಲಿ ಪಾಲ್ಗೊಂಡಿದ್ದರು.

ಕೊಡಗಿನಲ್ಲಿ ಮಿತಿ ಮೀರಿದ ಕಾಡಾನೆಗಳ ಹಾವಳಿ

ವಿರಾಜಪೇಟೆಯ ಬೇಟೋಳಿಯಲ್ಲಿ 4 ಕಾಡಾನೆ ಪ್ರತ್ಯಕ್ಷ



ಮಡಿಕೇರಿ, ನ.26– ಕೊಡಗು ಜಿಲ್ಲೆಯಲ್ಲಿ ಕಾಡಾನೆಗಳ ಹಾವಳಿ ಮಿತಿ ಮೀರಿದ್ದು, ಕಾಡಾನೆಗಳ ಹಿಂಡು ಕಾಡಿನಿಂದ ತೋಟ, ಇದೀಗ ತೋಟದಿಂದ ಮನೆಯಂಗಳಕ್ಕೆ ಬಂದು ಉಪಟಳ ನೀಡಲು ಆರಂಭಿಸಿದೆ.

ವಿರಾಜಪೇಟೆ ತಾಲೂಕಿನ ಬೇಟೋಳಿ ಗ್ರಾಮದಲ್ಲಿ 4 ಕಾಡಾನೆಗಳು ಕಾಣಿಸಿಕೊಂಡಿವೆ. ಕಳೆದ 3 ದಿನಗಳಿಂದ ಮುಖ್ಯ ರಸ್ತೆಯಲ್ಲಿ ಸಂಚರಿಸುತ್ತಿರುವ ಕಾಡಾನೆಗಳು ಇಲ್ಲಿನ ಡಿಹೆಚ್‌ಎಸ್ ಮಿಲ್ ಆವರಣದಲ್ಲಿ ಕಾಣಿಸಿಕೊಂಡು ಆತಂಕ ಸೃಷ್ಟಿಸಿತು. ನಿಲ್ಲಿಸಿದ್ದ ಕಾರುಗಳ ಪಕ್ಕದಲ್ಲೇ ಸ್ವಲ್ಪ ಹೊತ್ತು ಅಡ್ಡಾಡಿದ 2 ಕಾಡಾನೆಗಳು ಯಾವುದೇ ಹಾನಿ ಮಾಡದೆ ಮರಳಿದೆ. ಇದೀಗ ಆನೆಗಳು ಇಲ್ಲಿನ ಶ್ರೀಭದ್ರಕಾಳಿ ದೇವಸ್ಥಾನದ ಬಳಿ ಇದ್ದು, ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅರಣ್ಯ ಇಲಾಖೆ ಸಿಬ್ಬಂದಿ ಕಾಡಾನೆಗಳನ್ನು ಕಾಡಿಗಟ್ಟಲು ಪ್ರಯತ್ನಿಸಿದರು. ಸಾರ್ವಜನಿಕರು ಸಂಚರಿಸುವಾಗ ಎಚ್ಚರದಿಂದ ಇರಬೇಕೆಂದು ಅಧಿಕಾರಿಗಳು ಇದೇ ವೇಳೆ ಮನವಿ ಮಾಡಿದ್ದು, ಕಾಡಾನೆ ಹಾವಳಿ ತಡೆಗೆ ಸರ್ಕಾರ ಶಾಶ್ವತ ಪರಿಹಾರ ಸೂಚಿಸಬೇಕೆಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ದುಬೈನಲ್ಲಿ ಶಾಸಕ ಪೊನ್ನಣ್ಣ ದಂಪತಿಗೆ ಸನ್ಮಾನ



ಮಡಿಕೇರಿ, ನ.26– ಯುಎಇ ಕೊಡವ ಕಮಿಟಿ ದುಬೈನಲ್ಲಿ ಆಯೋಜಿಸಿದ್ದ ಪುತ್ತರಿ ಸಾಂಸ್ಕೃತಿಕ ಉತ್ಸವಗಳ ಕಾರ್ಯಕ್ರಮದಲ್ಲಿ ಶಾಸಕ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ ದಂಪತಿಯನ್ನು ಸನ್ಮಾನಿಸಲಾಯಿತು. ಶಾಸಕ ಪೊನ್ನಣ್ಣ ಮಾತನಾಡಿ, ಪ್ರಜಾಪ್ರಭುತ್ವದಲ್ಲಿ ಕೊಡವ ಸಮುದಾಯ ಪ್ರಾತಿನಿಧ್ಯದ ಮಹತ್ವವನ್ನು ವಿವರಿಸಿದರು. ಕೊಡವರನ್ನು ಸಂಪರ್ಕಿಸುವ ಮಹತ್ವ ಮತ್ತು ಅದರ ಪ್ರಸ್ತುತತೆ ಹಾಗೂ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ವ್ಯವಸ್ಥಿತವಾಗಿ ಪಾಲ್ಗೊಳ್ಳುವಿಕೆಯ ಅಗತ್ಯ ತಿಳಿಸಿದರು. ಜಾಗತಿಕ ಮಟ್ಟದಲ್ಲಿ ಕೊಡವರನ್ನು ಸಂಪರ್ಕಿಸುವಲ್ಲಿ ಮಹತ್ವದ ಪಾತ್ರ ವಹಿಸಿರುವ ಪಳೆಂಗಡ ಅಮಿತ್ ಅವರ ಪಾತ್ರವನ್ನೂ ಶ್ಲಾಘಿಸಿದರು.

ಹಾಕಿ: ಮೂರ್ನಾಡು ಬ್ಲೇಜ್ ಕ್ಲಬ್ ಚಾಂಪಿಯನ್



ಗೋಣಿಕೊಪ್ಪ, ನ.26– ಪೊನ್ನಂಪೇಟೆ ಕರ್ನಾಟಕ ಪಬ್ಲಿಕ್ ಶಾಲೆಯ ಟರ್ಫ್ ಮೈದಾನದಲ್ಲಿ ಹಾಕಿ ಕೂರ್ಗ್ ವತಿಯಿಂದ ನಡೆದ ಹಾಕಿ ಲೀಗ್ ಟೂರ್ನಿ ಫೈನಲ್‌ನಲ್ಲಿ ಮೂರ್ನಾಡು ಬ್ಲೇಜ್ ಕ್ಲಬ್ ತಂಡ 3–2 ಅಂತರದ ಗೋಲುಗಳಿಂದ ಜಯ ಗಳಿಸುವ ಮೂಲಕ ಚಾಂಪಿಯನ್ ಆಗಿ ಹೊರಹೊಮ್ಮಿತು.

ವಿರೋಚಿತ ಸೋಲು ಅನುಭವಿಸಿದ ಬೇಗೂರು ಈಶ್ವರ ಯೂತ್ ಕ್ಲಬ್ ರನ್ನರ್ ಅಪ್ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿತು. 25 ತಂಡಗಳು ಭಾಗವಹಿಸಿದ್ದ ಟೂರ್ನಿಯಲ್ಲಿ 42 ಪಂದ್ಯಗಳು ನಡೆದವು. ಒಟ್ಟು 206 ಗೋಲುಗಳು ದಾಖಲಾದವು. ತೀವ್ರ ಕುತೂಹಲ ಮೂಡಿಸಿದ್ದ ಫೈನಲ್ ಪಂದ್ಯದಲ್ಲಿ ಕೊನೆ 10 ನಿಮಿಷಗಳಲ್ಲಿ ಉತ್ತಮ ಆಟ ಮೂಡಿಬಂತು. ಅಂತಿಮವಾಗಿ ಬ್ಲೇಜ್ ತಂಡ ಶೂಟೌಟ್‌ನಲ್ಲಿ 3–2 ಗೋಲುಗಳಿಂದ ಗೆದ್ದು ಬೀಗಿತು. 52ನೇ ನಿಮಿಷದಲ್ಲಿ ಗ್ಯಾನ್, ಬೇಗೂರು ಪರ 57ನೇ ನಿಮಿಷದಲ್ಲಿ ಚಿರಂತ್ ಗೋಲು ಹೊಡೆದು ಸಮಬಲ ಸಾಧಿಸಿದರು. ಟೈ ಬ್ರೇಕರ್‌ಗೆ ಶೂಟೌಟ್ ಮೊರೆ ಹೋಗಲಾಯಿತು. ಬ್ಲೇಜ್ ಆಟಗಾರರಾದ ಸಜನ್, ಮೇರಿಯಂಡ ರಾಯಲ್, ಬೇಗೂರು ತಂಡದ ಬೋಪಣ್ಣ ಗೋಲು ಹೊಡೆದರು.

ಬೆಸ್ಟ್: ಟೂರ್ನಿಯುದ್ದಕ್ಕೂ ಉತ್ತಮ ಪ್ರದರ್ಶನ ನೀಡಿದ ಬ್ಲೇಜ್ ತಂಡದ ವಲ್ಲಂಡ ಸೋಮಣ್ಣ ಉತ್ತಮ ಗೋಲ್ ಕೀಪರ್, ಮಲ್ಮ ತಂಡದ ಮಾದಂಡ ಅಪ್ಪಯ್ಯ ಬೆಸ್ಟ್ ಡಿಫೆಂಡರ್, ಬೇಗೂರು ತಂಡದ ಮಾಪಣಮಾಡ ಬೋಪಣ್ಣ ಬೆಸ್ಟ್ ಮಿಡ್ ಫೀಲ್ಡರ್, ಅಶ್ವಿನಿ ಸ್ಪೋರ್ಟ್ಸ್ ಫೌಂಡೇಷನ್ ಆಟಗಾರ ಕಾಂಡಂಡ ಕುಶಾಲಪ್ಪ ಬೆಸ್ಟ್ ಫಾರ್ವರ್ಡ್ ಪ್ರಶಸ್ತಿ ಸ್ವೀಕರಿಸಿದರು.

ನಿರ್ದೇಶಕರಾಗಿ ಕರವಂಡ ಅಪ್ಪಣ್ಣ, ತೀರ್ಪುಗಾರರಾಗಿ ನೆಲ್ಲಮಕ್ಕಡ ಪವನ್, ಚೆಯ್ಯಂಡ ಅಪ್ಪಚ್ಚು, ಕೋಡಿಪಣಿಯಂಡ ಗಣಪತಿ, ಕುಪ್ಪಂಡ ದಿನ್, ಪಟ್ರಪಂಡ ಸಚಿನ್, ಅಪ್ಪಚೆಟ್ಟೋಳಂಡ ಅಯ್ಯಪ್ಪ, ಬೊಟ್ಟಂಗಡ ಕೌಶಿಕ್, ಚಂದಪಂಡ ಆಕಾಶ್, ಚೋಯಮಾಡಂಡ ಚೆಂಗಪ್ಪ, ಮೇಕತಂಡ ತೀಸಾ, ಮೂಕಚಂಡ ನಾಚಪ್ಪ, ಪಂಡೀರ ಸುಬ್ರಮಣಿ, ಅರುಣ್, ಸಣ್ಣುವಂಡ ಲೋಕೇಶ್, ಕೊಂಡೀರ ಕೀರ್ತಿ, ಅಮ್ಮಂಡೀರ ಚೇತನ್, ಕೊಕ್ಕಲೆಮಾಡ ಗೌತಮಿ ಕಾರ್ಯನಿರ್ವಹಿಸಿದರು. ಚೆಪ್ಪುಡೀರ ಎ. ಕಾರ್ಯಪ್ಪ, ಮಾಳೇಟಿರ ಶ್ರೀನಿವಾಸ್ ವೀಕ್ಷಕ ವಿವರಣೆ ನೀಡಿದರು.

ಒಲಿಂಪಿಯನ್ ಅಶ್ವಿನಿ ನಾಚಪ್ಪ ಮಾತನಾಡಿ, ಹಾಕಿ ಕ್ರೀಡೆಗೆ ಹೆಚ್ಚು ಪ್ರೋತ್ಸಾಹ ದೊರೆಯುವಂತಾಗಿದೆ. ಉತ್ತಮ ಆಟವನ್ನು ನಾವು ನೋಡುವಂತಾಗಿದೆ ಎಂದರು.

ಕ್ಯಾಲ್ಸ್ ಶಾಲೆ ಮುಖ್ಯಸ್ಥ ಮನೆಯಪಂಡ ದತ್ತ ಕರುಂಬಯ್ಯ, ಉದ್ಯಮಿ ನಾಮೇರ ಬೋಪಣ್ಣ, ಕಾಫಿ ಬೆಳೆಗಾರ ಚೆಪ್ಪುಡೀರ ಮಂದಣ್ಣ, ಕೂರ್ಗ್ ಅಧ್ಯಕ್ಷ ಪಳಚಂಡ ಲವಕುಮಾರ್, ಕಾರ್ಯದರ್ಶಿ ಅಮ್ಮಂಡೀರ ಚೇತನ್, ನಿರ್ದೇಶಕಿ ಯಮುನಾ ಚೆಂಗಪ್ಪ, ರೇಷ್ಮಾ ಶಿವಚಾಳಿಯಂಡ ವಿದ್ಯಾ ಬಹುಮಾನ ವಿತರಿಸಿದರು.

ಸಿಂಚನ ದೇಚಮ್ಮಗೆ 4 ಚಿನ್ನದ ಪದಕ



ಮಡಿಕೇರಿ, ನ.26– ಇತ್ತೀಚೆಗೆ ಮೈಸೂರಿನಲ್ಲಿ ನಡೆದ ಸೆಂಟ್ ಫಿಲೋಮಿನಾ(ಸ್ವಾಯತ್ತ) ಕಾಲೇಜಿನ 9ನೇ ಘಟಿಕೋತ್ಸವದಲ್ಲಿ ಕಂಡಂಗಾಲ ಗ್ರಾಮದ ಮುಲ್ಲೇಂಗಡ ಸಿಂಚನ ದೇಚಮ್ಮ 4 ಚಿನ್ನದ ಪದಕ ಪಡೆದಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದಿಂದ ಬಿಎಸ್ಸಿ ಪದವಿ ಪಡೆದಿರುವ ಇವರು ಭೌತಶಾಸ್ತ್ರ, ರಸಾಯನಶಾಸ್ತ್ರ ಮತ್ತು ಗಣಿತದಲ್ಲಿ ಅತಿ ಹೆಚ್ಚು ಅಂಕ ಗಳಿಸುವುದರೊಂದಿಗೆ ಪ್ರಥಮ ರ್‍ಯಾಂಕ್ ಪಡೆದಿದ್ದಾರೆ. ಈಕೆ ಕಂಡಂಗಾಲ ನಿವಾಸಿ ಮುಲ್ಲೇಂಗಡ ಸುರೇಶ್ ಭೀಮಯ್ಯ ಮತ್ತು ಕನಿಕೆ ದಂಪತಿ ಪುತ್ರಿ

ಅಂಬೇಡ್ಕರ್ ಚಿಂತನೆ, ವಿಚಾರಧಾರೆ ಅಳವಡಿಸಿಕೊಳ್ಳಿ

• ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಕರೆ • ವಿವಿಧೆಡೆ ಸಂವಿಧಾನ ದಿನಾಚರಣೆ



ಚಾಮರಾಜನಗರ, ನ.26–ಡಾ.ಬಿ.ಆರ್. ಅಂಬೇಡ್ಕರ್ ಅವರು ತಾತ್ವಿಕ ನೆಲೆಗಟ್ಟಿನಲ್ಲಿ ರಚಿಸಿರುವ ಸಂವಿಧಾನದಿಂದ ದೇಶ ಸುಭದ್ರ ಹಾಗೂ ಸಾರ್ವಭೌಮ ರಾಷ್ಟ್ರವಾಗಿದ್ದು, ಪ್ರತಿಯೊಬ್ಬರು ಅಂಬೇಡ್ಕರ್ ಅವರ ಚಿಂತನೆ ಹಾಗೂ ವಿಚಾರಧಾರೆಗಳನ್ನು ಅಳವಡಿಸಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಶಿಲ್ಪಾ ನಾಗ್ ತಿಳಿಸಿದರು.

ನಗರದ ಜೆ.ಎಚ್.ಪಟೇಲ್ ಸಭಾಂಗಣದಲ್ಲಿ ಭಾನುವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಅಂಬೇಡ್ಕರ್ ಜನ್ಮ ದಿನ ಮತ್ತು ಸಂವಿಧಾನ ದಿನದ ಅಂಗವಾಗಿ ಆಯೋಜಿಸಿದ್ದ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸಾಮಾಜಿಕ ಅಸಮಾನತೆ ವಿರುದ್ಧ ಹೋರಾಡಿದ ಅಂಬೇಡ್ಕರ್ ಅವರ ಜೀವನ ಸಾಧನೆ, ವ್ಯಕ್ತಿತ್ವ ಎಲ್ಲರಿಗೂ ದಾರಿದೀಪವಾಗಿದೆ. ಅವರು ದೇಶಕ್ಕೆ ಕೊಡುಗೆಯಾಗಿ ನೀಡಿದ ಸಂವಿಧಾನದಿಂದ ವಿಶ್ವದಲ್ಲೇ ಭಾರತ ಮಾದರಿ ಪ್ರಜಾಸತ್ತಾತ್ಮಕ ರಾಷ್ಟ್ರವಾಗಿ ಹೊರಹೊಮ್ಮಿದೆ. ಸಂವಿಧಾನದಲ್ಲಿ ಸ್ವಾತಂತ್ರ್ಯ, ಸಮಾನತೆ, ಶೋಷಣೆ ವಿರುದ್ಧ, ಧಾರ್ಮಿಕ, ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಹಕ್ಕು ಹಾಗೂ ಸಂವಿಧಾನಿಕ ಪರಿಹಾರದ ಮೂಲಹಕ್ಕುಗಳನ್ನು ನೀಡಿ ಆಧುನಿಕ ಭಾರತದ ನಿರ್ಮಾತೃವಾಗಿದ್ದಾರೆ ಎಂದು ತಿಳಿಸಿದರು.

ಮೈಸೂರಿನ ಮಹಾರಾಜ ಕಾಲೇಜಿನ ಆಡಳಿತಾಧಿಕಾರಿ ಡಾ.ವಿ.ಷಣ್ಮುಗಂ ಮಾತನಾಡಿ, ಸಂವಿಧಾನ ಸಾಮಾಜಿಕ ಒಪ್ಪಂದದ ಮೇಲೆ ಸೃಷ್ಟಿಯಾಗಿರುವ ದಾಖಲೆಯಾಗಿದೆ. ಸಂವಿಧಾನ ದೇಶದ ಕಾನೂನಿನ ಮಹಾನ್ ಗ್ರಂಥವಾಗಿದ್ದು, ಎಲ್ಲಾ ಕಾನೂನುಗಳು ಸಂವಿಧಾನಿಕ ವ್ಯಾಪ್ತಿಯಲ್ಲಿ ಬರಲಿವೆ. ಪ್ರತಿಯೊಬ್ಬರು ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ರಾಜಕೀಯ ಹಾಗೂ ಧಾರ್ಮಿಕ ಜೀವನ ಸಂವಿಧಾನದಡಿ ರೂಪುಗೊಳ್ಳಲಿದೆ ಎಂದರು.

ಪ್ರಸ್ತುತ ಹಾಗೂ ಮುಂದಿನ ಪೀಳಿಗೆಯ ಪ್ರಗತಿ ಸಂವಿಧಾನದ ಗುರಿಯಾಗಿದ್ದು, ಸಮಸಮಾಜ ನಿರ್ಮಾಣ ಸಂವಿಧಾನದ ಆಶಯವಾಗಿದೆ. ಸಂವಿಧಾನದ ಅನುಷ್ಠಾನದಿಂದ ಸಮಾಜ ಚಲನೆಯಾಗಲಿದೆ. ಸಮೃದ್ಧ ಭಾರತ ಕಟ್ಟುವ ಶಕ್ತಿ ಸಂವಿಧಾನಕ್ಕಿದೆ. ಸಂವಿಧಾನಕ್ಕೆ ಗೌರವ ಸಲ್ಲಿಸುವ ನಿಟ್ಟಿನಲ್ಲಿ ಎಲ್ಲರಲ್ಲೂ ನಾಗರಿಕ ಪ್ರಜ್ಞೆ, ಜಾಗೃತಗೊಳ್ಳಬೇಕು ಎಂದು ತಿಳಿಸಿದರು.

ಕಾರ್ಯಕ್ರಮದ ಆರಂಭದಲ್ಲಿ ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಸಂವಿಧಾನ ಪೀಠಿಕೆ ಬೋಧಿಸಿದರು. ತಿ.ನರಸೀಪುರ ನಳಂದ ಬುದ್ಧ ವಿಹಾರದ ಬೋಧಿರತ್ನ ಬಂತೇಜಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದರು. ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಆನಂದ್ ಪ್ರಕಾಶ್ ಮೀನಾ ಅಧ್ಯಕ್ಷತೆ ವಹಿಸಿದ್ದರು. ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಿಗೆ 'ಸಂವಿಧಾನ ಓದು' ಪುಸ್ತಕವನ್ನು ವಿತರಿಸಲಾಯಿತು. ನಗರದ ಪೇಟೆ ಪ್ರೈಮರಿ ಶಾಲೆಯ ಪುಟ್ಟ ವಿದ್ಯಾರ್ಥಿನಿ ನುಸಾಹ್ ಫಾತಿಮಾ ಖಾನ್ ಮಾಡಿದ ಸಂವಿಧಾನ ಪೀಠಿಕೆ ವಾಚನ ಹಾಗೂ ವೇದಿಕೆ ಮುಂಭಾಗದಲ್ಲಿ ಕಲೆ ನಟರಾಜ್ ಹಾಗೂ ಜನಪದ ಮಹೇಶ್ ನಡೆಸಿಕೊಟ್ಟ ಗಾಯನ ಕಾರ್ಯಕ್ರಮ ಎಲ್ಲರ ಗಮನ ಸೆಳೆಯಿತು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು, ಜಿಪಂ ಉಪಕಾರ್ಯದರ್ಶಿ ಲಕ್ಷ್ಮೀ, ವಿಚಾರ ಸಂಕಿರಣದ ಉಪಸಮಿತಿ ಅಧ್ಯಕ್ಷ ಹಬೀಬ್, ನಗರಸಭೆ ಪೌರಾಯುಕ್ತ ರಾಮದಾಸ್, ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕ ಮಲ್ಲಿಕಾರ್ಜುನ್ ಇದ್ದರು.

ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಸಂವಿಧಾನ ದಿನಾಚರಣೆ



ಚಾಮರಾಜನಗರ, ನ.26–ನಗರದ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಭಾನುವಾರ ಸಂವಿಧಾನ ದಿನ ಆಚರಿಸಲಾಯಿತು.

ಅಂಬೇಡ್ಕರ್ ಭಾವಚಿತ್ರಕ್ಕೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಪುಷ್ಪಾರ್ಚನೆ ಮಾಡಿ ಮಾತನಾಡಿ, ಅಂಬೇಡ್ಕರ್ ನ.26ರಂದು ದೇಶಕ್ಕೆ ಸಂವಿಧಾನ ಸಮರ್ಪಣೆ ಮೂಲಕ ಸಮಗ್ರ ಅಭಿವೃದ್ಧಿಗೆ ಕಾರಣೀಭೂತರಾದರು. ಮಹಾನ್ ಪುರುಷರು ಸಮರ್ಪಣೆ ಮಾಡಿದ ಈ ದಿನವನ್ನು ನಾವೆಲ್ಲರೂ ಹಬ್ಬದ ಮಾದರಿಯಲ್ಲಿ ಆಚರಣೆ ಮಾಡುವ ಜೊತೆಗೆ ಶೋಷಿತ ಸಮಾಜಗಳು ತುಳಿತಕ್ಕೊಳಗಾದವರಿಗೆ ನ್ಯಾಯ ಕಲ್ಪಿಸಿ, ಅವರ ಆಶಯವನ್ನು ಈಡೇರಿಸಲು ಕಂಕಣಬದ್ಧರಾಗೋಣ ಎಂದರು.

ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಚಿಕ್ಕಮಹದೇವ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎ.ಎಸ್.ಗುರುಸ್ವಾಮಿ, ಮಹಮದ್ ಅಸ್ಗರ್ ಮುನ್ನಾ, ಕಾರ್ಯದರ್ಶಿ ಶಿವಕುಮಾರ್, ಪರಿಶಿಷ್ಟ ಜಾತಿ ವಿಭಾಗದ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸೋಮೇಶ್, ನಗರಸಭಾ ಸದಸ್ಯರಾದ ಚಿನ್ನಮ್ಮ ನೀಲಮ್ಮ, ಕಲಾವತಿ, ಗ್ರಾಮಾಂತರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ನಾಗಶ್ರೀ, ನಾಗರತ್ನ, ಭಾಗ್ಯಮ್ಮ, ಸುವರ್ಣ ಹನೂರು, ಜಿಪಂ ಮಾಜಿ ಸದಸ್ಯ ಸೋಮನಾಯಕ್, ನಗರಸಭಾ ಮಾಜಿ ಸದಸ್ಯರಾದ ಪದ್ಮ ಪುರುಷೋತ್ತಮ್, ಮಹದೇವಯ್ಯ, ಪುಟ್ಟಸ್ವಾಮಿ, ಪರಿಶಿಷ್ಟ ಜಾತಿ ವಿಭಾಗದ ಜಿಲ್ಲಾ ಪ್ರಧಾನ ಕಾರ್ಯದರ್ಶಿ, ಮುತ್ತಿಗೆ ದೊರೆ, ಕಾಗಲವಾಡಿ ಚಂದ್ರು, ನಟರಾಜು, ಮರಿಯಾದಹುಂಡಿ ಕುಮರ್, ವೀರಭದ್ರಸ್ವಾಮಿ, ಚೂಡಾ ಮಾಜಿ ಅಧ್ಯಕ್ಷ ಸುಹೇಲ್, ನಸ್ರುಲ್ಲಾ ಖಾನ್, ನಯಾಜ್, ಆಯಿಬ್ ಖಾನ್, ಅಬ್ಬಾಸ್, ಅಪ್ಸರ್‌ಅಹಮದ್ ಇಂಬ್ರಾನ್‌ಅಹಮದ್, ಪಾಟೇಲ್ ಮಹದೇವಸ್ವಾಮಿ, ಸೇವಾ ದಳದ ಅಧ್ಯಕ್ಷ ಜಯರಾಜು, ಉಪಾಧ್ಯಕ್ಷ ಎಂ.ಸಿ.ನಾಗರಾಜು, ಶೇಷಣ್ಣ, ಕಾಂತರಾಜು ಉತ್ತವಳ್ಳಿ, ಪುರುಷೋತ್ತಮ್, ಶೇಖರಪ್ಪ, ಸೋಮಣ್ಣ ಎನ್‌ಎಸ್‌ಯುಐ ಮೋಹನ್, ರಾಜು, ಗ್ರಾಪಂ ಉಪಾಧ್ಯಕ್ಷ ರಾಚ್ಚಪ್ಪ, ಬಸವಣ್ಣ, ಗಣೇಶ್, ಅಕ್ಷಯ್, ಸ್ವಾಮಿನಾಯಕ್, ಸ್ವಾಮಿ ಹಾಜರಿದ್ದರು.

ಸಂವಿಧಾನದ ಆಶಯಗಳನ್ನು ಗೌರವಿಸೋಣ



ಕೊಳ್ಳೇಗಾಲ, ನ.26–ಅಂಬೇಡ್ಕರ್ ರಚಿಸಿರುವ ಸಂವಿಧಾನದ ಘನತೆಯನ್ನು ಎಲ್ಲರೂ ಎತ್ತಿ ಹಿಡಿಯುವ ಮೂಲಕ ಸಂವಿಧಾನದ ಆಶಯಗಳನ್ನು ಗೌರವಿಸೋಣ. ಯುವ ಪೀಳಿಗೆಯು ಸಹ ಸಂವಿಧಾನದ ಆಶಯ ಅರಿತು ಜಾಗೃತಿಗೊಳಿಸುವ ನಿಟ್ಟಿನಲ್ಲಿ ಮುಂದಾಗಬೇಕು ಎಂದು ಕಾಂಗ್ರೆಸ್ ರಾಜ್ಯ ಘಟಕದ ಕಾರ್ಮಿಕ ವಿಭಾಗದ ಕಾರ್ಯದರ್ಶಿ ಜಿ.ಸಿ.ಕಿರಣ್ ಹೇಳಿದರು.

ಸಂವಿಧಾನ ದಿನ ಅಂಗವಾಗಿ ಭಾನುವಾರ ಪಟ್ಟಣದ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಮಾತನಾಡಿದ ಅವರು, ಸಂವಿಧಾನ ಎಂಬುದು ಮಹಾನ್ ಗ್ರಂಥ. ಅಂತಹ ಗ್ರಂಥದ ಕರ್ತವನ್ನು ನಾವೆಲ್ಲರೂ ಗೌರವಿಸೋಣ, ಅವರ ಆಶಯಗಳನ್ನು ಎತ್ತಿ ಹಿಡಿಯೋಣ ಎಂದರು.

ಭಾರತಕ್ಕೆ ಸಂವಿಧಾನವೇ ಮುಖ್ಯ ಕಾನೂನು. ಕ್ರಿಯಾಶೀಲತೆ ಎಂಬ ದೊಡ್ಡ ಶಕ್ತಿ ಸಂವಿಧಾನದಲ್ಲಿದೆ. ಎಲ್ಲಾ ನಾಗರಿಕರ ಮೂಲ ಹಕ್ಕುಗಳನ್ನು ಸಂವಿಧಾನ ಖಾತರಿಪಡಿಸುತ್ತದೆ. ಸಂವಿಧಾನದ ಮೂಲ ಇಂಗ್ಲಿಷ್ ಆವೃತ್ತಿಯಲ್ಲಿ 1,17,369 ಪದಗಳಿವೆ. ಇಲ್ಲಿಯವರೆಗೆ, ಸಂವಿಧಾನ 100ಕ್ಕೂ ಹೆಚ್ಚು ತಿದ್ದುಪಡಿಗಳಿಗೆ ಒಳಗಾಗಿದೆ ಎಂದು ತಿಳಿಸಿದರು.



ಚಾಮರಾಜನಗರದ ಅಂಬೇಡ್ಕರ್ ಬಡಾವಣೆಯ ಭೀಮರಾವ್ ಹೆಬ್ಬಾಗಿಲಿನಲ್ಲಿ ದಲಿತ ಸಂಘರ್ಷ ಸಮಿತಿ (ಡಿ.ಜಿ.ಸಾಗರ್ ಬಣ) ವತಿಯಿಂದ ಭಾನುವಾರ ಸಂವಿಧಾನ ದಿನ ಆಚರಿಸಲಾಯಿತು. ದಸಂಸ ಜಿಲ್ಲಾ ಸಂಚಾಲಕ ಸಿ.ಎಂ.ಶಿವಣ್ಣ, ಆಟೋ ಉಮೇಶ್, ಉಮೇಶ್ ಕುಮಾರ್, ಯ.ಇಟ್ಟಿಗೆ ಮಹದೇವಯ್ಯ, ಕಲಾ ತಂಡದ ದಿಲೀಪ್ ಕುಮಾರ್, ಮಲ್ಲಿಕಾರ್ಜುನ, ಸಿ.ಎಸ್.ರಂಗಸ್ವಾಮಿ ಇದ್ದರು.

ವಿಶ್ವಕರ್ಮರು ಮೊದಲು ಸಂಘಟಿತರಾಗಬೇಕು

ವಿಧಾನಪರಿಷತ್ ಸದಸ್ಯ ಕೆ.ಪಿ.ನಂಜುಂಡಿ ಕರೆ



ಚಾಮರಾಜನಗರ, ನ.26– ರಾಜ್ಯದಲ್ಲಿ ವಿಶ್ವಕರ್ಮರು ಮೊದಲು ಸಂಘಟಿತರಾಗಬೇಕು ಎಂದು ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾದ ರಾಜ್ಯಾಧ್ಯಕ್ಷ ಹಾಗೂ ವಿಧಾನ ಪರಿಷತ್ ಸದಸ್ಯ ಕೆ.ಪಿ.ನಂಜುಂಡಿ ಕರೆ ನೀಡಿದರು.

ತಾಲೂಕಿನ ಚಂದಕವಾಡಿ ಗ್ರಾಮದಲ್ಲಿ ನಡೆದ 151ನೇ ವಿಶ್ವಕರ್ಮ ಜನಜಾಗೃತಿ ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು, ನಮ್ಮ ಸಮಾಜದವರು ಪಂಚ ಕಸುಬುಗಳ ಮೂಲಕ ಕೊಡುಗೆಗಳನ್ನು ನೀಡುತ್ತಿದ್ದಾರೆ. ಆದರೆ, ಯಾವುದೇ ಸರ್ಕಾರ ಸಮಾಜದ ಆಶೋತ್ತರಗಳನ್ನು ಈಡೇರಿಸುವಲ್ಲಿ ಸಂಪೂರ್ಣ ವಿಫಲವಾಗಿವೆ. ದೇವಸ್ಥಾನ ಮತ್ತು ಗುಡಿಯಲ್ಲಿರಿಸುವ ವಿಗ್ರಹಗಳನ್ನು ಕೆತ್ತನೆ ಮಾಡುವ ಸಮಾಜದ ಒಬ್ಬರನ್ನು ದೇವಸ್ಥಾನಗಳ ಸಮಿತಿಗೆ ನೇಮಕ ಮಾಡುತ್ತಿಲ್ಲ. ಮಕ್ಕಳು ವಿದ್ಯಾವಂತರಾದ ಬಳಿಕ ಅವರಿಗೆ ಉದ್ಯೋಗ ನೀಡುತ್ತಿಲ್ಲ. ನಮ್ಮ ಸಮಾಜವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಬೇಕು ಎಂದು ಹೋರಾಟ ಮಾಡುತ್ತಲೇ ಬಂದಿದ್ದೇವೆ. ಆದರೂ ಸರ್ಕಾರ ಗಮನಹರಿಸುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ನಾನು ಕಳೆದ 25 ವರ್ಷಗಳಿಂದ ರಾಜಕೀಯದ ಒಳ–ಹೊರಗೂ ನೋಡಿದ್ದೇನೆ. ಪ್ರಸ್ತುತ ಸ್ಥಿತಿಯಲ್ಲಿ ವಿಶ್ವಕರ್ಮರನ್ನು ಬುಡ ಸಮೇತ ಕಿತ್ತುಹಾಕಲು ಹೊರಟಿದ್ದಾರೆ. ಆದ್ದರಿಂದ ನಾವು ಸಂಘಟಿತರಾಗಿ ಹೋರಾಟ ನಡೆಸಬೇಕು. ತಂತ್ರಜ್ಞಾನ ಮುಂದುವರಿದಿದ್ದು, ಮುಂದಿನ ದಿನಗಳಲ್ಲಿ ಪಂಚ ಕಸುಬುಗಳು ಬಂಡವಾಳಶಾಹಿಗಳ ಪಾಲಾಗುತ್ತಿವೆ. ಉದ್ಯೋಗ ಕಳೆದುಕೊಂಡು ಬೀದಿಪಾಲಾಗುವ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ನನ್ನನ್ನು ಸರ್ಕಾರ ಎಂಎಲ್‌ಸಿಯನ್ನಾಗಿ ಮಾಡಿದೆ. ಆದರೆ, ಇದರಲ್ಲಿ ಅಧಿಕಾರವಿಲ್ಲದೇ ನಮ್ಮ ಜನರಿಗೆ ಯಾವುದೇ ಅನುಕೂಲ ಮಾಡಲು ಸಾಧ್ಯವಾಗುತ್ತಿಲ್ಲ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಜಾತಿಗಣತಿ ಬಹಿರಂಗಪಡಿಸುವುದಾಗಿ ಹೇಳಿದ್ದಾರೆ. ಇದಕ್ಕೆ ನಮ್ಮ ಸಮುದಾಯದ ಸಂಪೂರ್ಣ ಬೆಂಬಲವಿದೆ. ರಾಜ್ಯದಲ್ಲಿ ವಿಶ್ವಕರ್ಮ ಸಮಾಜ 40 ಲಕ್ಷ ಜನಸಂಖ್ಯೆ ಹೊಂದಿದೆ. ಸರ್ಕಾರ ತನ್ನ ದಾಖಲೆಗಳಲ್ಲಿ 7 ರಿಂದ 10 ಲಕ್ಷ ಮಾತ್ರ ಇದೆ ಎಂದು ಸುಳ್ಳು ಹೇಳುತ್ತಿದೆ. ಹೀಗಾಗಿ ಎಲ್ಲಾ ಕಾಯಕ ಸಮಾಜಗಳ ಜನಗಣತಿ ಅಂಕಿ–ಅಂಶ ಬಹಿರಂಗವಾದರೆ ಮೀಸಲಾತಿಯಿಂದ ಆಗುತ್ತಿರುವ ಅನ್ಯಾಯವನ್ನು ಸರಿಪಡಿಸಬಹುದು ಎಂದು ಅಭಿಪ್ರಾಯಪಟ್ಟರು.

ಜನಗಣತಿಯನ್ನು ಬಹಿರಂಗಪಡಿಸುವ ಸರ್ಕಾರದ ನಿಲುವನ್ನು ಬೆಂಬಲಿಸಿ ಡಿ.1ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ನಡೆಯುವ ಧರಣಿಯಲ್ಲಿ ಸಮಾಜದ ಹೆಚ್ಚಿನ ಬಂಧುಗಳು ಪಾಲ್ಗೊಳ್ಳಬೇಕು ಎಂದು ತಿಳಿಸಿದರು. ಇದೇ ವೇಳೆ ಚಂದಕವಾಡಿ ಗ್ರಾಮದ ವಿಶ್ವಕರ್ಮರಿಗೆ ರುದ್ರಭೂಮಿ ಹಾಗೂ ಸಮುದಾಯ ಭವನಕ್ಕೆ ಜಾಗ ಒದಗಿಸಿ ಕೊಡುವಂತೆ ಕೆ.ಪಿ.ನಂಜುಂಡಿ ಅವರು ಗ್ರಾಪಂ ಅಧ್ಯಕ್ಷ ನಟರಾಜ್ ಅವರಿಗೆ ಮನವಿ ಸಲ್ಲಿಸಿದರು.

ಇದಕ್ಕೂ ಮೊದಲು ಗ್ರಾಮದ ಶ್ರೀ ಲಕ್ಷ್ಮಿದೇವಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ, ವಿಶ್ವಕರ್ಮ ಭಾವಚಿತ್ರವನ್ನು ಅದ್ಧೂರಿಯಾಗಿ ಮೆರವಣಿಗೆ ಮಾಡಲಾಯಿತು. ಮಹಿಳೆಯರು ಕಳಸ ಹೊತ್ತು ಮೆರವಣಿಗೆಗೆ ಮೆರಗು ನೀಡಿದರು. ಮಹಿಳಾ ಘಟಕದ ರಾಜ್ಯಾಧ್ಯಕ್ಷೆ ಸೌಭಾಗ್ಯ, ಮುಖಂಡರಾದ ಮಂಜುನಾಥ್ ವಿಶ್ವಕರ್ಮ, ಡಿ.ಎಲ್.ಕುಮಾರ್, ನಾಗೇಂದ್ರ, ಕಾಂತರಾಜು, ಮುಳ್ಳೂರು ಸಿದ್ದಪ್ಪಾಜಿ, ಸುದರ್ಶನ್, ಹೇಮಂತ್ ತಾಳವಾಡಿ, ಪುಟ್ಟಸ್ವಾಮಿ ಆಚಾರ್, ಹನೂರಿನ ಸಿದ್ದಪ್ಪಾಜಿ, ಲೋಕೇಶ್, ರೋಹಿತ್ ಮತ್ತಿತರರು ಇದ್ದರು.

ಒಂದನೇ ಪುಟದಿಂದ

ವರ್ಷಾ ಸಾಧನೆ







ತುಂಬಾ ಪ್ರೀತಿ ಹೊಂದಿರುವ ವರ್ಷಾ ಅವರ ಈ ಕೆಲಸ ವೋಕಲ್ ಫಾರ್ ಲೋಕಲ್ ಅಡಿಯಲ್ಲಿ ಹಲವರಿಗೆ ಉದ್ಯೋಗಾವಕಾಶ ನೀಡಿದೆ ಎಂದು ಪ್ರಧಾನಿ ಮೆಚ್ಚುಗೆ ವ್ಯಕ್ತಪಡಿಸಿದರು. ಎರಡು ವರ್ಷದ ಹಿಂದೆ ಮೋದಿಯವರು ಮನ್ ಕೀ ಬಾತ್‌ನಲ್ಲಿ ಪ್ರಸ್ತಾಪಿಸಿದ್ದ ವಿಷಯಗಳಿಂದ ಪ್ರೇರಣೆಗೊಂಡ

ಉಮ್ಮತ್ತೂರಿನ ಎಂ.ಟೆಕ್ ಪದವೀಧರೆ ವರ್ಷಾ ಅವರು, 'ಆಕೃತಿ ಇಕೋ ಫ್ರೆಂಡ್ಲಿ ಎಂಟರ್ ಪ್ರೈಸಸ್' ಎಂಬ ಸಂಸ್ಥೆಯನ್ನು ಸ್ಥಾಪಿಸಿ, ಬಾಳೆದಿಂಡಿನ ಕಾಂಡದಿಂದ ನಾರು ಸಂಗ್ರಹಿಸಿ, ಅದರಿಂದ ಚಾಪೆ, ಮ್ಯಾಟ್, ಕೈಚೀಲ, ಗಡಿಯಾರ ಸೇರಿದಂತೆ ವಿವಿಧ ಕರಕುಶಲ ವಸ್ತುಗಳನ್ನು ತಯಾರಿಸುತ್ತಿದ್ದಾರೆ. ಅಲ್ಲದೇ ಬಾಳೆದಿಂಡಿನಿಂದ ಉಪ್ಪಿನಕಾಯಿ, ಚಟ್ನಿಪುಡಿ ಸೇರಿದಂತೆ ಕೆಲವು ತಿನಿಸುಗಳನ್ನೂ ಕೂಡ ತಯಾರಿಸುತ್ತಿದ್ದಾರೆ. ತಾವು ತಯಾರಿಸಿದ ಉತ್ಪನ್ನಗಳನ್ನು ಇ-ಶಾಪಿಂಗ್ ತಾಣಗಳ ಮೂಲಕ ಮಾರಾಟ ಮಾಡುತ್ತಿದ್ದಾರೆ.

ಕಾರ್ಯಕರ್ತರ ನೆರವಿಗೆ ಕಂಟ್ರೋಲ್ ರೂಂ

ಈ ಕುರಿತು ಟ್ವೀಟ್ ಮಾಡಿರುವ ಅವರು, ಸಾಮಾಜಿಕ ಜಾಲತಾಣಗಳಲ್ಲಿ ಸಕ್ರಿಯರಾಗಿರುವ ನಮ್ಮ ಬಿಜೆಪಿ ಕಾರ್ಯಕರ್ತರನ್ನು ಗುರಿಯಾಗಿಟ್ಟುಕೊಂಡು ಪೊಲೀಸ್ ಕಿರುಕುಳ ನೀಡುತ್ತಿರುವ ಬಗ್ಗೆ ದೂರುಗಳು ಕೇಳಿಬರುತ್ತಿವೆ. ಸಾಮಾಜಿಕ ಜಾಲತಾಣ ಸೇರಿದಂತೆ ಯಾವುದೇ ವೇದಿಕೆಗಳಲ್ಲಿ ಕಾಂಗ್ರೆಸ್ ಸರ್ಕಾರದ ಜನವಿರೋಧಿ ಧೋರಣೆಯ ವಿರುದ್ಧ ಹಾಗೂ ಸರ್ಕಾರದ ವೈಫಲ್ಯಗಳ ವಿರುದ್ಧ ದನಿ ಎತ್ತಲು ಕಾರ್ಯಕರ್ತರು ಯಾವುದಕ್ಕೂ ಅಂಜ ಬೇಕಿಲ್ಲ, ಎದೆಗುಂದ ಬೇಕಿಲ್ಲ ಎಂದಿದ್ದಾರೆ.

ಸಂವಿಧಾನವು ಜನರಿಗೆ ನೀಡಿರುವ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕಲು ಕಾನೂನು ಪೊಲೀಸರಿಗೆ ಅಧಿಕಾರ ನೀಡಿಲ್ಲ. ಈ ನಿಟ್ಟಿನಲ್ಲಿ ನಮ್ಮ ಕಾರ್ಯಕರ್ತರ ಬಂಧು'ಗಳಿಗೆ ಯಾವುದೇ ತೊಂದರೆ, ಬೆದರಿಕೆ, ಕಿರುಕುಳ ಎದುರಾದರೆ ತಕ್ಷಣವೇ ಪಕ್ಷವು ನೆರವಿಗೆ ಬರುತ್ತದೆ ಎಂದರು. ರಾಜ್ಯ ಹಾಗೂ ಜಿಲ್ಲೆಯ ಪಕ್ಷದ ಕಚೇರಿಗಳಲ್ಲಿ ಶೀಘ್ರದಲ್ಲೇ ಕಂಟ್ರೋಲ್ ರೂಂ ತೆರೆಯುವ ಬಗ್ಗೆ ನಿರ್ಧರಿಸಲಾಗುವುದು. ಇದು ದೂರುಗಳನ್ನು ಸ್ವೀಕರಿಸಲು ಮತ್ತು ನಮ್ಮ ಕಾರ್ಯಕರ್ತರಿಗೆ ಕಾನೂನು ನೆರವು ದಿನದ 24 ಗಂಟೆಯೂ ಕಾರ್ಯ ನಿರ್ವಹಿಸುತ್ತದೆ' ಎಂದು ವಿಜಯೇಂದ್ರ ಹೇಳಿದರು

ಒಂದೇ ಕುಟುಂಬದ ಐವರ ಆತ್ಮಹತ್ಯೆ

ಕಾರಿದ್ದರಿಂದ ಬದುಕುವುದಕ್ಕಾಗಿ ತುಮಕೂರಿಗೆ ಬಂದೆವು ಎಂದು ಡೆತ್‌ನೋಟ್‌ನಲ್ಲಿ ಉಲ್ಲೇಖಿಸಿರುವ ಗರೀಬ್ ಸಾಬ್, ಇಲ್ಲಿಗೆ ಬಂದ ನಂತರ ಸಾಲ ಹೆಚ್ಚಾಯಿತು. ಊಟಕ್ಕೂ ತೊಂದರೆಯಾಗಿದೆ. ಮೂರು ತಿಂಗಳ ಬಾಡಿಗೆ ಕೊಡಬೇಕಾಗಿದೆ ಎಂದಿರುವ ಅವರು, ನಾವು ಬಾಡಿಗೆಗೆ ಇರುವ ಮನೆಯ ಕೆಳಗಿನ ಮನೆಯಲ್ಲಿರುವ ಖಲಂದರ್, ಅವರ ಮಗಳು ಸಾನಿಯಾ, ಅವರ ಹಿರಿಯ ಮಗ, ಮೇಲಿನ ಮನೆಯ ಶಬಾನಾ ಮತ್ತು ಅವರ ಮಗಳು ಸಾನಿಯಾ ನಮಗೆ ಬಹಳ ಹಿಂಸೆ ಕೊಡುತ್ತಿದ್ದರು. ನಮಗೆ ಸಹಾಯ ಮಾಡುತ್ತಿದ್ದವರಿಗೆ ಚಾಡಿ ಹೇಳುತ್ತಿದ್ದರು. ನಮಗೆ ಸಾಲ ಕೊಟ್ಟವರಿಗೆ ಚಾಡಿ ಹೇಳಿ ಗಲಾಟೆ ಮಾಡಿಸುತ್ತಿದ್ದರು. ಇವರ ಹಿಂಸೆಯಿಂದಾಗಿ ನಾವು ಪ್ರಾಣ ಬಿಡುತ್ತಿದ್ದೇವೆ ಎಂದು ಗರೀಬ್ ಸಾಬ್ ಡೆತ್‌ನೋಟ್ ಹಾಗೂ ವೀಡಿಯೋದಲ್ಲಿ ತಿಳಿಸಿದ್ದಾರೆ. ಘಟನಾ ಸ್ಥಳಕ್ಕೆ ತುಮಕೂರು ಎಸ್ಪಿ ಕೆ.ವಿ.ಅಶೋಕ್, ಜಿಲ್ಲಾಧಿಕಾರಿ ಶ್ರೀನಿವಾಸ್ ಹಾಗೂ ಅಧಿಕಾರಿಗಳು ಭೇಟಿ ನೀಡಿದ್ದರು. ಡೆತ್‌ನೋಟ್ ಮತ್ತು ವೀಡಿಯೋ ಹೇಳಿಕೆ ಆಧರಿಸಿ ಕ್ರಮ ಕೈಗೊಳ್ಳುವುದಾಗಿ ಎಸ್ಪಿ ತಿಳಿಸಿದ್ದಾರೆ.

ಕ್ಯಾಮರಾ ಟ್ರಾಕ್‌ನಲ್ಲಿ 2 ಹುಲಿಗಳ ಪ್ರತ್ಯಕ್ಷ



ಓಡಾಡಿರುವ ದೃಶ್ಯ ಸೆರೆ ಸಿಕ್ಕಿದೆ. ಈ ಹಿನ್ನೆಲೆಯಲ್ಲಿ ಎರಡೂ ಹುಲಿಗಳ ದೃಶ್ಯವನ್ನು ಕೂಲಂಕುಷವಾಗಿ ಪರಿಶೀಲಿಸಿದ ಅರಣ್ಯ ಸಿಬ್ಬಂದಿಯ ತಂಡ, ಮಹಿಳೆಯನ್ನು ಬಲಿ ಪಡೆದ ಹುಲಿ ಗುರುತಿಸುವಲ್ಲಿ ಯಶಸ್ವಿಯಾಗಿದೆ. ಆ ಹುಲಿಯ ಮೇಲಿದ್ದ ಪಟ್ಟೆ ಸೇರಿದಂತೆ ಇನ್ನಿತರ ಗುರುತು ಆಧರಿಸಿ ಕಾರ್ಯಾಚರಣೆ ಮುಂದುವರೆಸಲಾಗಿದೆ.



ಹುಲಿ ಘರ್ಜನೆ: ಕಳೆದ ರಾತ್ರಿಯಿಡೀ ಕಾರ್ಯಾಚರಣೆ ನಡೆಸುತ್ತಿದ್ದ ಅರಣ್ಯ ಸಿಬ್ಬಂದಿಗೆ ಎರಡು ಪ್ರತ್ಯೇಕ ಸ್ಥಳಗಳಲ್ಲಿ ಹುಲಿ ಘರ್ಜನೆ ಹಾಗೂ ಜಿಂಕೆಗಳ ಚೀರಾಟ ಕೇಳಿಬಂದಿದೆ. ರಾತ್ರಿ 11.45ಕ್ಕೆ ಹುಲಿ ಘರ್ಜನೆ ಕೇಳಿ ಅರಣ್ಯ ಸಿಬ್ಬಂದಿಗಳು ಕಾರ್ಯಾಚರಣೆ ನಡೆಸಿದಾಗ ಕಾಳನಮುಂಟಿ ಸೋಲಾರ್ ಶೆಡ್ ಬಳಿ ಹಸುವೊಂದನ್ನು ಹುಲಿ ಬಲಿ ಪಡೆದಿರುವುದು ಪತ್ತೆಯಾಗಿದೆ. ಅರಣ್ಯ ಸಿಬ್ಬಂದಿಗಳ ಆಗಮನದ ಶಬ್ದ ಕೇಳಿ ಹುಲಿ ಜಾನುವಾರು ಕಳೇಬರ ತಿನ್ನದೇ ಪಲಾಯನಗೈದಿದೆ. ಈ ಸ್ಥಳವು ಮಹಿಳೆ ಬಲಿ ಪಡೆದ ಸ್ಥಳದಿಂದ ಕೇವಲ 1 ಕಿ.ಮೀ. ಅಂತರದಲ್ಲಿರುವುದರಿಂದ ಇದೇ ಹುಲಿ ಮಹಿಳೆ ರತ್ನಮ್ಮ ಅವರ ಮೇಲೆ ದಾಳಿ ಮಾಡಿದೆ ಎಂದು ನಿರ್ಧರಿಸಲಾಗಿದೆ.

ಮತ್ತೊಂದು ಜಾನುವಾರು ಬಲಿ: ಹುಲಿ ಸೆರೆಗೆ ಕಾರ್ಯಾಚರಣೆ ಮುಂದುವರೆಸಿದ್ದ ಸಂದರ್ಭದಲ್ಲಿ ಮುಂಜಾನೆ 3 ಗಂಟೆಯಲ್ಲಿ ಓಂಕಾರ ಮತ್ತು ಹೆಡಿಯಾಲ ಗಡಿ ಭಾಗದಲ್ಲಿ ಹುಲಿಯ ಘರ್ಜನೆ ಕೇಳಿಬಂದಿದೆ. ಆ ಸ್ಥಳಕ್ಕೆ ಮತ್ತೊಂದು ತಂಡ ಕೂಂಬಿಂಗ್ ಕಾರ್ಯಾಚರಣೆ ನಡೆಸಿ ಪರಿಶೀಲಿಸಿದಾಗ ಕಲ್ಲಾರೆಕಂಡಿ ಸ್ಥಳದಲ್ಲಿ ಜಾನುವಾರುವೊಂದನ್ನು ಹತ್ಯೆ ಮಾಡಿದ್ದು ಕಂಡು ಬಂದಿದೆ. ಈ ಸ್ಥಳ ಮಹಿಳೆ ಬಲಿ ಪಡೆದ ಸ್ಥಳಕ್ಕೆ 2.50 ಕಿ.ಮೀ. ದೂರ ಇರುವುದರಿಂದ ಈ ಹುಲಿ ಬೇರೆ ಹುಲಿಯಾಗಿದೆ ಎಂದು ಅಂದಾಜಿಸಲಾಗಿದೆ. ಆದರೂ ಡ್ರೋಣ್ ಕ್ಯಾಮರಾದಲ್ಲಿ ಹುಲಿಯ ಟ್ರಾಕ್ ಪತ್ತೆ ಹಚ್ಚಲು ಕಾರ್ಯಾಚರಣೆ ನಿಯೋಜಿಸಲಾಗಿದ್ದು, ಕ್ಯಾಮರಾ ಟ್ರಾಪ್‌ಗಳನ್ನು ಅಳವಡಿಸಲಾಗಿದೆ. ಇಂದು ರಾತ್ರಿ ಜಾನುವಾರುವಿನ ಮೃತದೇಹ ಭಕ್ಷಿಸಲು ಹುಲಿ ಬರಲಿದೆ ಎಂಬ ನಿರೀಕ್ಷೆ ಅರಣ್ಯ ಸಿಬ್ಬಂದಿಗಳದ್ದಾಗಿದೆ. ಒಂದು ವೇಳೆ ಹುಲಿ ಬಂದರೆ ಅದರ ಮೈಮೇಲಿನ ಪಟ್ಟೆ ಗುರುತನ್ನು ಆಧರಿಸಿ ಅರವಳಿಕೆ ಮದ್ದು ನೀಡಿ ಸೆರೆ ಹಿಡಿಯಲು ಸರ್ವ ಸನ್ನದ್ಧವಾಗಿ ತಂಡ ಕಾರ್ಯಾಚರಣೆಗಿಳಿದಿದೆ. ಮತ್ತೊಂದು ತಂಡ ಮಹಿಳೆ ಬಲಿ ಪಡೆದ ಸ್ಥಳದ ಸುತ್ತಮುತ್ತ ಕಾರ್ಯಾಚರಣೆ ಮುಂದುವರೆಸಿದ್ದು, ಹುಲಿ ಸೆರೆ ಹಿಡಿಯಲೇ ಬೇಕೆಂಬ ಛಲದೊಂದಿಗೆ ಸಿಬ್ಬಂದಿಗಳು ಮುಂದಾಗಿದ್ದಾರೆ.

ಸ್ಥಳದಲ್ಲೇ ಬೀಡು ಬಿಟ್ಟ ಅಧಿಕಾರಿಗಳು: ಬಂಡೀಪುರದ ಹೆಡಿಯಾಲ ವಲಯವು ಮೈಸೂರು ಜಿಲ್ಲೆಯ ವ್ಯಾಪ್ತಿಗೆ ಒಳಪಡುವುದರಿಂದ ಹುಲಿ ಸೆರೆ ಕಾರ್ಯಾಚರಣೆ ಸ್ಥಳಕ್ಕೆ ಮೈಸೂರು ವೃತ್ತದ ಸಿಎಫ್ ಡಾ. ಮಾಲತಿಪ್ರಿಯ, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕ ಡಾ. ಬಿ.ರಮೇಶ್ ಕುಮಾರ್ ಸೇರಿದಂತೆ ಹಿರಿಯ ಅಧಿಕಾರಿಗಳು ಸ್ಥಳದಲ್ಲೇ ಮೊಕ್ಕಾಂ ಹೂಡಿದ್ದು, ಕಾರ್ಯಾಚರಣೆಯ ನೇತೃತ್ವದೊಂದಿಗೆ ಮೇಲ್ವಿಚಾರಣೆ ಮಾಡುವ ಮೂಲಕ ಸಿಬ್ಬಂದಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕಾರ್ಯಾಚರಣೆಯ ಯಶಸ್ವಿಗೆ ಹಿರಿಯ ಅಧಿಕಾರಿಗಳು ಸಾಥ್ ನೀಡುತ್ತಿದ್ದಾರೆ. ಈ ಸಂದರ್ಭದಲ್ಲಿ ಬಂಡೀಪುರ ಹೆಡಿಯಾಲ ವಲಯದ ಎಸಿಎಫ್ ಪರಮೇಶ್, ಹೆಡಿಯಾಲ ಆರ್‌ಎಫ್‌ಓ ಎ.ಆರ್.ನಾರಾಯಣ, ಹೆಚ್ಚುವರಿ ಆರ್‌ಎಫ್‌ಓ ನರೇಶ್, ಪಶುವೈದ್ಯಾಧಿಕಾರಿ ವಾಸಿಂ ಮಿರ್ಜಾ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ನಿರ್ಲಕ್ಷ್ಯಕ್ಕೆ ಒಳಗಾಗಿ ಶಿಥಿಲಾವಸ್ಥೆ ತಲುಪುತ್ತಿರುವ ಶಿವನ ಮೂರ್ತಿಯುಳ್ಳ ಮೈಸೂರಿನ ಅಗ್ರಹಾರ ವೃತ್ತ

● ಇದ್ದೂ ಇಲ್ಲದಂತಾಗಿರುವ ನೀರಿನ ಕಾರಂಜಿ ● ಪ್ರತಿದಿನ ಸಾವಿರಾರು ವಾಹನ ಸಂಚರಿಸುವ ವೃತ್ತದ ಅವ್ಯವಸ್ಥೆ ● ಕೆ.ಆರ್.ಕ್ಷೇತ್ರ ವ್ಯಾಪ್ತಿಯ ವೃತ್ತ





ಮೈಸೂರು, ನ.26(ಎಂಟಿವೈ)– ಸಾಂಸ್ಕೃತಿಕ ನಗರಿ ಮೈಸೂರಿಗೆ ಪಾರಂಪರಿಕ ಮೆರಗು ಹೆಚ್ಚಿಸುತ್ತಿರುವ ಪಾರಂಪರಿಕ ಕಟ್ಟಡ ಹಾಗೂ ವೃತ್ತಗಳು ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳ ನಿರ್ಲಕ್ಷ್ಯದಿಂದಾಗಿ ಶಿಥಿಲಾವಸ್ಥೆಗೆ ಜಾರುತ್ತಿದ್ದು, ಮೈಸೂರಿನ ಪ್ರಮುಖ ಹಾಗೂ ಹಳೆ ವೃತ್ತದಲ್ಲಿ ಒಂದಾದ ಅಗ್ರಹಾರದ ನೀರಿನ ಕಾರಂಜಿಯುಳ್ಳ ವೃತ್ತ ಶಿಥಿಲಗೊಂಡು ಅಭಾಸದ ಸಂಕೇತವಂತೆ ಭಾಸವಾಗುತ್ತಿದೆ.

ಮೈಸೂರಿನ ಪ್ರಮುಖ ವೃತ್ತವೂ ಹಾಗೂ ಹೆಚ್ಚು ವಾಹನ ಸಂಚರಿಸುವ ರಸ್ತೆ ಸಂಪರ್ಕ ಹೊಂದಿರುವ ವೃತ್ತಗಳಲ್ಲಿ ಅಗ್ರಹಾರದ ಮಾಧವರಾವ್ ವೃತ್ತವೂ ಒಂದಾಗಿದೆ. 5 ರಸ್ತೆಗೆ ಸಂಪರ್ಕ ಹೊಂದಿರುವ ಮಾಧವರಾವ್ ವೃತ್ತದಲ್ಲಿ ಅತ್ಯಾಕರ್ಷಕ ನೀರಿನ ಕಾರಂಜಿಯಿದ್ದು, ಅದರ ಮಧ್ಯ ಭಾಗದಲ್ಲಿ ನಾಲ್ಕು ಬಾಹುಗಳಲ್ಲೂ ಮೆಟ್ಟಿಲು ಮಾದರಿಯಂತೆ ವಿನ್ಯಾಸಗೊಳಿಸಿ, ಮೇಲ್ಭಾಗದಲ್ಲಿ ಈಶ್ವರ ವಿಗ್ರಹ ಪ್ರತಿಷ್ಠಾಪಿಸಲಾಗಿದೆ. ಅಲ್ಲದೆ, ವೃತ್ತದ ಬಾಹುಗಳಿಗೆ ತ್ರಿವರ್ಣ ಧ್ವಜದ ಮಾದರಿಯಲ್ಲಿ ತ್ರಿವರ್ಣ ಬಳಿದು ಅಲಂಕಾರ ಮಾಡಲಾಗಿದೆ. ದೇಶಭಕ್ತಿ ಹಾಗೂ ದೈವಭಕ್ತಿ ಬಿಂಬಿಸಬೇಕಾದ ವೃತ್ತ ಇದೀಗ ಶಿಥಿಲಗೊಂಡು ಮೂಗು ಮುರಿಯುವ ಪರಿಸ್ಥಿತಿಯಲ್ಲಿದೆ.

ಮೈಸೂರಿನ ಕೆ.ಆರ್.ವಿಧಾನಸಭಾ ಕ್ಷೇತ್ರ ವ್ಯಾಪ್ತಿಗೆ ಸೇರುವ ಮಾಧವರಾವ್(ಅಗ್ರಹಾರ) ವೃತ್ತ ಈ ಹಿಂದೆ ಮೈಸೂರು ಮಹಾನಗರ ಪಾಲಿಕೆಯ ವಾರ್ಡ್ ನಂ.1ರ ವ್ಯಾಪ್ತಿಗೆ ಒಳಪಟ್ಟಿತ್ತು. ವಾರ್ಡ್ ಪುನರ್ ವಿಂಗಡಣೆಯಿಂದಾಗಿ ಕಳೆದ ಕೆಲ ವರ್ಷಗಳಿಂದ ಪಾಲಿಕೆಯ 51ರ ವಾರ್ಡ್ ವ್ಯಾಪ್ತಿಗೆ ಸೇರಿಸಲಾಗಿದೆ. ಮೈಸೂರು ಮಹಾನಗರ ಪಾಲಿಕೆ ಮುಖ್ಯ ಕಚೇರಿ ಸಮೀಪವೇ ಇರುವ ಅಗ್ರಹಾರ ವೃತ್ತಕ್ಕೆ ಕಾಯಕಲ್ಪ ನೀಡುವಲ್ಲಿ ದಿವ್ಯ ನಿರ್ಲಕ್ಷ್ಯದ ಫಲವಾಗಿ ವೃತ್ತದ ಬಾಹುಗಳು ಕುಸಿಯುತ್ತಿವೆ.

ಮೈಸೂರಿನ ಮಹಾತ್ಮಗಾಂಧಿ ರಸ್ತೆ, ನ್ಯೂ ಸಯ್ಯಾಜಿರಾವ್ ರಸ್ತೆ, ನೂರೊಂದು ಗಣಪತಿ ದೇವಾಲಯದ ರಸ್ತೆ, ತ್ಯಾಗರಾಜ ರಸ್ತೆ ಸಂಪರ್ಕ ಕಲ್ಪಿಸುವ ಈ ವೃತ್ತದ ಮೂಲಕ ಊಟಿ, ಕೇರಳ, ಹೆಚ್.ಡಿ.ಕೋಟೆ, ನಂಜನಗೂಡು, ಅರಮನೆ, ನ್ಯಾಯಾಲಯ ಸೇರಿದಂತೆ ವಿವಿಧ ಬಡಾವಣೆಗಳಿಗೆ ತೆರಳುವ ವಾಹನಗಳು ಸಂಚರಿಸುತ್ತವೆ. ಆದರೆ, ಕಳೆದ 3-4 ವರ್ಷದಿಂದ ನಿರ್ವಹಣೆಯ ಕೊರತೆಯಿಂದ ಅಗ್ರಹಾರದ ವೃತ್ತ ಶಿಥಿಲಗೊಳ್ಳುತ್ತಿದೆ. ಈಗಾಗಲೇ ನೀರಿನ ಕಾರಂಜಿ ಸ್ತಬ್ಧಗೊಂಡು ಸಾಕಷ್ಟು ವರ್ಷಗಳೇ ಕಳೆದಿವೆ. ಕೂಡಲೇ ಶಿಥಿಲಗೊಂಡಿರುವ ಮಾಧವರಾವ್ ವೃತ್ತವನ್ನು ನವೀಕರಣ ಮಾಡುವಂತೆ ಸಾರ್ವಜನಿಕರು ಆಗ್ರಹಿಸಿದ್ದಾರೆ.

15 ದಿನದಲ್ಲಿ ತಾತ್ಕಾಲಿಕ ಕ್ರಮ

ಮೈಸೂರಿನ ಅಗ್ರಹಾರದ ವೃತ್ತ ಶಿಥಿಲಾವಸ್ಥೆ ತಲುಪಿದೆ. ಈ ವೃತ್ತವನ್ನು ನವೀಕರಿಸಲು ಕಳೆದ ವರ್ಷ ಪಾಲಿಕೆ ಬಜೆಟ್‌ನಲ್ಲಿ 50 ಲಕ್ಷ ರೂ. ಮೀಸಲಿಡಲು ನಿರ್ಧರಿಸಲಾಗಿತ್ತು. ಆದರೆ, ಫೌಂಟೇನ್ ಸ್ಥಗಿತಗೊಂಡಿರುವುದು ಹಾಗೂ ವೃತ್ತಕ್ಕೆ ಸಿಗ್ನಲ್ ಅಳವಡಿಸುವ ಉದ್ದೇಶ ಹೊಂದಿದ್ದ ಕಾರಣ ನವೀಕರಣ ಕಾಮಗಾರಿ ಆರಂಭಿಸಿರಲಿಲ್ಲ. ಅಲ್ಲದೆ, ಇನ್ನಷ್ಟು ಅನುದಾನದ ಅಗತ್ಯವಿದೆ. ಈ ಹಿನ್ನೆಲೆಯಲ್ಲಿ ಖಾಸಗಿ ಸಂಸ್ಥೆಗಳ ಸಹಭಾಗಿತ್ವದಲ್ಲಿ ಅಗ್ರಹಾರ ವೃತ್ತ ಪುನರ್ ನಿರ್ಮಿಸಲು ನಿರ್ಧರಿಸಲಾಗಿದೆ. ಪಾಲಿಕೆ ಚುನಾವಣೆ ನಡೆದು ಮೇಯರ್ ಆಯ್ಕೆಯಾದ ಬಳಿಕ ಕೌನ್ಸಿಲ್ ಸಭೆಯಲ್ಲಿ ಅನುಮೋದನೆ ಪಡೆದ ನಂತರ ವೃತ್ತ ನಿರ್ಮಾಣ ಕಾಮಗಾರಿ ನಡೆಸಲಾಗುತ್ತದೆ. ವೃತ್ತದ ಬಾಹುಗಳು ಶಿಥಿಲಗೊಂಡಿರುವುದರಿಂದ 15 ದಿನದಲ್ಲಿ ತಾತ್ಕಾಲಿಕ ಕಾಮಗಾರಿ ನಡೆಸಿ, ಮುರಿದಿರುವ ಬಾಹುಗಳನ್ನು ರಿಪೇರಿ ಮಾಡಿ, ಬಣ್ಣ ಬಳಿಯಲು ಹಾಗೂ ವೃತ್ತದ ವಾತಾವರಣ ಉತ್ತಮಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

\- ಟಿ.ಎಸ್.ಶ್ರೀವತ್ಸ, ಶಾಸಕರು, ಕೆ.ಆರ್.ಕ್ಷೇತ್ರ

ಜಾತಿ ಗಣತಿ ವರದಿಯಿಂದ ಯಾವ ಜಾತಿಗೆ ಏನು ತೊಂದರೆ?

ಬುದ್ಧ ಧಮ್ಮ ಸಮಿತಿ ಕಾರ್ಯದರ್ಶಿ ಮಹದೇವಪ್ಪ



ಮೈಸೂರು, ನ.26– ಜಾತಿ ಗಣತಿ ವರದಿ ಬಿಡುಗಡೆಯಿಂದ ಯಾವ ಜಾತಿಯವರಿಗೆ ಏನು ತೊಂದರೆಯಾಗುತ್ತದೆ ಎಂದು ಕರ್ನಾಟಕ ಬುದ್ಧ ಧಮ್ಮ ಸಮಿತಿಯ ಕಾರ್ಯದರ್ಶಿ ಆರ್.ಮಹದೇವಪ್ಪ ಪ್ರಶ್ನಿಸಿದ್ದಾರೆ.

ದಲಿತ ಸಂಘರ್ಷ ಸಮಿತಿ ವತಿಯಿಂದ 74ನೇ ಸಂವಿಧಾನ ದಿನಾಚರಣೆ ಅಂಗವಾಗಿ ಮೈಸೂರಿನ ಇಂಜಿನಿಯರ್‌ಗಳ ಸಂಸ್ಥೆ ಸಭಾಂಗಣದಲ್ಲಿ ಭಾನುವಾರ ಆಯೋಜಿಸಿದ್ದ 'ಜನತಂತ್ರ ವ್ಯವಸ್ಥೆಯಲ್ಲಿ ಜನಗಣತಿಯ ಅನಿವಾರ್ಯತೆ' ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡಿದ ಅವರು,

ದೇಶದ ಸಂಪತ್ತನ್ನು ಪ್ರಬಲ ಎರಡು–ಮೂರು ಜಾತಿಯವರು ಅನುಭವಿಸುತ್ತಿದ್ದಾರೆ. ಉಳಿದ ಜಾತಿಯವರಲ್ಲಿ ಜೀವನ ನಿರ್ವಹಣೆಗೂ ಕಷ್ಟಪಡುವವರು ಬಹಳಷ್ಟಿದ್ದಾರೆ. ಜಾತಿ ಕಾರಣಕ್ಕಾಗಿ ಒಂದೆಡೆ ಎಲ್ಲವನ್ನೂ ಕಳೆದುಕೊಂಡರೆ ಮತ್ತೊಂದೆಡೆ ಅವಮಾನ ಅನುಭವಿಸುತ್ತಿದ್ದಾರೆ. ಯಾವುದೇ ಯೋಜನೆ ರೂಪಿಸುವುದು ಹಾಗೂ ಸೌಲಭ್ಯ ಒದಗಿಸುವ ನಿಟ್ಟಿನಲ್ಲಿ ಜನಸಂಖ್ಯೆ ತಿಳಿಯುವ ಅಗತ್ಯವಿದೆ. ಹಾಗಾಗಿ ಜಾತಿ ಜನಗಣತಿ ವರದಿ ಬಿಡುಗಡೆ ಮಹತ್ವದ್ದಾಗಿದೆ. ಇದರಿಂದ ಯಾವ ಜಾತಿಯವರಿಗೇನು ತೊಂದರೆ? ಎಂದು ಆಕ್ರೋಶ ವ್ಯಕ್ತಪಡಿಸಿದರು.

ಎರಡು ಪ್ರಬಲ ಜಾತಿಯವರನ್ನು ಮಾತ್ರ ಓಲೈಸುವ ರಾಜಕೀಯ ಪಕ್ಷಗಳಿಗೆ ಬೇರೆ ಜಾತಿಗಳ ಮತ ಬೇಡವೇ?. ಎಲ್ಲೆಡೆಯೂ ಬಲಾಢ್ಯ ಜಾತಿಗಳ ಪ್ರಾಬಲ್ಯವೇ ಇರುವುದರಿಂದ ಯಾವ ಜಾತಿಯವರು ಎಷ್ಟಿದ್ದಾರೆ ಎಂಬುದು ಎಲ್ಲರಿಗೂ ಗೊತ್ತಾಗಲೇಬೇಕು. ದೇಶದ ಅಭಿವೃದ್ಧಿಗೆ ಜಾತಿ ಜನಗಣತಿ ಸಹಕಾರಿ. ರಾಜ್ಯದಲ್ಲೂ ವರದಿ ಬಿಡುಗಡೆಯೊಂದಿಗೆ ಸಾಂಸ್ಕೃತಿಕ ಕ್ರಾಂತಿ ಆಗಬೇಕಿದೆ ಎಂದು ತಿಳಿಸಿದರು.

ಜಾತಿ ಗಣತಿ ವರದಿ ಬಗ್ಗೆ ಲಘುವಾಗಿ ಮಾತನಾಡುವುದು ನಾಚಿಕೆಗೇಡಿನ ಸಂಗತಿ. ಬಿಡುಗಡೆಯಾದ ನಂತರ ಯಾರಿಗಾದರೂ ಅನ್ಯಾಯವಾಗಿದ್ದಲ್ಲಿ ಪ್ರತಿಭಟಿಸಲು ಅವಕಾಶ ಇದೆ. ಅಪ್ಪನ ಆಸ್ತಿಯಲ್ಲಿ ಮಕ್ಕಳು ಪಾಲು ಕೇಳುವಂತೆ ದೇಶ ಹಾಗೂ ರಾಜ್ಯದ ಸಂಪತ್ತಿನಲ್ಲಿ ನಾವೆಲ್ಲರೂ ಪಾಲು ಕೇಳಬೇಕು ಎಂದ ಅವರು, ಸರ್ಕಾರದ ಆಯೋಗ ಸಿದ್ಧಪಡಿಸಿದ್ದ ವರದಿ ಕಳವಾಗಿದ್ದರೆ ಸಂಬಂಧಿಸಿದವರ ಮೇಲೆ ಪ್ರಕರಣ ದಾಖಲಿಸಬೇಕು ಎಂದು ಒತ್ತಾಯಿಸಿದರು.

ಪ್ರಗತಿಪರ ಕೃಷಿಕ ಚಿನ್ನಸ್ವಾಮಿ ವಡ್ಡಗೆರೆ ಮಾತನಾಡಿ, ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಸ್ಥಿತಿಗತಿ ತಿಳಿಸುವ ಜಾತಿ ಗಣತಿ ಸಮೀಕ್ಷಾ ವರದಿ ಬಿಡುಗಡೆಗೆ ಎಲ್ಲಾ ಕಡೆಯೂ ಹಕ್ಕೊತ್ತಾಯ ಮಂಡಿಸಬೇಕು. ಅಧಿಕೃತವಾಗಿ ಸರ್ಕಾರದ ಕೈ ಸೇರುವ ಮುನ್ನವೇ ಕೆಲವರು ವರದಿ ವಿರುದ್ಧ ಧ್ವನಿ ಎತ್ತಿದ್ದಾರೆ. ಆದರೆ ಸರ್ಕಾರ ವರದಿ ಸ್ವೀಕಾರ ಮಾಡಿ, ಸಾರ್ವಜನಿಕ ಚರ್ಚೆಗೆ ಅವಕಾಶ ನೀಡಬೇಕು ಎಂದರು. ಕಾರ್ಯಕ್ರಮದಲ್ಲಿ ಸ್ವರಾಜ್ ಇಂಡಿಯಾ ಪಕ್ಷದ ಮುಖಂಡ ಉಗ್ರ ನರಸಿಂಹೇಗೌಡ ಮಾತನಾಡಿದರು. ದಸಂಸ ಜಿಲ್ಲಾ ಸಂಚಾಲಕ ಚೋರನಹಳ್ಳಿ ಶಿವಣ್ಣ ಮುಖಂಡರಾದ ಕಿರಂಗೂರು ಸ್ವಾಮಿ, ಶಿವಕುಮಾರ್, ಶಿವಮೂರ್ತಿ ಮತ್ತಿತರರಿದ್ದರು.



ಮೈಸೂರು ನಗರ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಎಂ. ಶ್ರೀನಿವಾಸ್ ಕುಮಾರ್ ಅವರ ಹುಟ್ಟು ಹಬ್ಬವನ್ನು, ವಾರ್ಡ್ ನಂ. 44ರ ಜನತಾ ನಗರ, ಬೋಗಾದಿ 2ನೇ ಹಂತ ಮತ್ತು ಟೆಲಿಕಾಂ ಲೇಔಟ್‌ನ ಕಾಂಗ್ರೆಸ್ ಕಾರ್ಯಕರ್ತರು ಮತ್ತು ನಾಗರಿಕರು ಆಚರಿಸಿದರು.



ಸಂವಿಧಾನ ಸಮರ್ಪಣಾ ದಿನಾಚರಣೆಯ ಅಂಗವಾಗಿ ಮಾನಸಗಂಗೋತ್ರಿಯ ಗ್ರಂಥಾಲಯದ ಮುಂಭಾಗ ಇರುವ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಪುತ್ಥಳಿಗೆ ಮಾಲಾರ್ಪಣೆ ಹಾಗೂ ಪುಷ್ಪಾರ್ಚನೆಯನ್ನು ಮಾಡಿ ಸಂವಿಧಾನದ ಪ್ರಸ್ತಾವನೆಯನ್ನು ಬೋಧಿಸಲಾಯಿತು. ಈ ವೇಳೆ ದಲಿತ ವಿದ್ಯಾರ್ಥಿ ಒಕ್ಕೂಟದ ಅಧ್ಯಕ್ಷ ಪರಂಜ್ಯೋತಿ ಬಿ ಆರ್, ಕಾರ್ಯಾಧ್ಯಕ್ಷ ಕಿರಣ್ ಮೌರ್ಯ, ಉಪಾಧ್ಯಕ್ಷ ಪ್ರೀತಮ್ ಹಾಗೂ ಪದಾಧಿಕಾರಿಗಳು ಹಾಜರಿದ್ದರು.

ಸ್ಕೂಟರ್‌ಗೆ ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿ: ಮಹಿಳೆ ಸಾವು

ಮೈಸೂರು ಅರಮನೆ ಬಳಿ ದುರಂತ



ಮೈಸೂರು, ನ.26(ಬಿಎಲ್‌ಯು)– ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿ ಹೊಡೆದ ಪರಿಣಾಮ ಸ್ಕೂಟರ್ ಹಿಂಬದಿಯಲ್ಲಿದ್ದ ಮಹಿಳೆ ಸಾವನ್ನಪ್ಪಿರುವ ಘಟನೆ ಮೈಸೂರಿನ ಕೋಟೆ ಮಾರಮ್ಮ ದೇವಸ್ಥಾನದ ಬಳಿ ಭಾನುವಾರ ಸಂಭವಿಸಿದೆ.

ಮೈಸೂರಿನ ಅಶೋಕಪುರಂನ ಅಂಬೇಡ್ಕರ್ ಕಾಲೋನಿ ವಾಸಿ ರಾಜೇಶ್ವರಿ (38) ಮೃತಪಟ್ಟ ಮಹಿಳೆಯಾಗಿದ್ದು, ಇವರು ತಮಿಳುನಾಡಿನ ಸತ್ಯಮಂಗಲ ಬಳಿಯ ಬಣ್ಣಾರಿ ಅಮ್ಮನ್ ದೇವಸ್ಥಾನಕ್ಕೆ ಹೊರಟ್ಟಿದ್ದರು. ಸಹೋದರ ಭುವನೇಶ್ವರ್ ಅವರು ರಾಜೇಶ್ವರಿ ಅವರನ್ನು ಗ್ರಾಮಾಂತರ ಬಸ್ ನಿಲ್ದಾಣಕ್ಕೆ ಡ್ರಾಪ್ ಕೊಡಲು ಸ್ಕೂಟರ್‌ನಲ್ಲಿ ತೆರಳುತ್ತಿದ್ದರು. ಕೋಟೆ ಮಾರಮ್ಮ ದೇವಸ್ಥಾನದ ಬಳಿಯ ತಿರುವಿನಲ್ಲಿದ್ದ ರಸ್ತೆ ಮಧ್ಯೆ ಇರಿಸಿದ್ದ ಬ್ಯಾರಿಕೇಡ್‌ಗೆ ಡಿಕ್ಕಿ ಹೊಡೆಯುವುದನ್ನು ತಪ್ಪಿಸಲು ಭುವನೇಶ್ವರ್ ಸ್ಕೂಟರ್ ಅನ್ನು ಸ್ವಲ್ಪ ಬಲಕ್ಕೆ ತಿರುಗಿಸಿದ್ದಾರೆ. ಈ ವೇಳೆ ಹಿಂದಿನಿಂದ ಬರುತ್ತಿದ್ದ ಬಸ್ ಡಿಕ್ಕಿ ಹೊಡೆದಿದೆ. ಅಪಘಾತದ ರಭಸಕ್ಕೆ ಇಬ್ಬರೂ ಸ್ವಲ್ಪ ದೂರ ಹಾರಿ ಬಿದ್ದರು. ತಲೆಗೆ ಪೆಟ್ಟು ಬಿದ್ದ ಕಾರಣ ರಾಜೇಶ್ವರಿ ಅವರು ಸ್ಥಳ ದಲ್ಲೇ ಮೃತಪಟ್ಟರು. ಭುವನೇಶ್ವರ್‌ಗೂ ಗಾಯಗಳಾಗಿದ್ದು, ಅದೃಷ್ಟವಶಾತ್ ಪ್ರಾಣಾಪಾಯದಿಂದಪಾರಾಗಿದ್ದಾರೆ. ರಾಜೇಶ್ವರಿ ಹೆಲ್ಮೆಟ್ ತಂದಿದ್ದರೂ ಅದನ್ನು ಧರಿಸಿದೆ ಸ್ಕೂಟರ್ ಮುಂದಿಟ್ಟಿದ್ದರು. ಪ್ರಾಯಶಃ ಹೆಲ್ಮೆಟ್ ಧರಿಸಿದ್ದರೆ ರಾಜೇಶ್ವರಿ ಬದುಕುಳಿಯುತ್ತಿದ್ದರೇನೊ ಎಂದು ಪೊಲೀಸರು ತಿಳಿಸಿದ್ದಾರೆ.

ಈ ಸುಬಂಧನಗರು ದೇವರಾಜ ಸಂಚಾರಿ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಸ್ಕೂಟರ್‌ಗೆ ಡಿಕ್ಕಿ ಹೊಡೆದಿರುವ ಕೆಎಸ್‌ಆರ್‌ಟಿಸಿ ಬಸ್ (ಕೆಎ-09, ಎಫ್-5211) ಅನ್ನು ವಶಕ್ಕೆ ಪಡೆದಿರುವ ಪೊಲೀಸರು ತನಿಖೆ ಕೈಗೊಂಡಿದ್ದಾರೆ. ಅಪಘಾತದ ವಿಷಯ ತಿಳಿದ ಸ್ಥಳಕ್ಕೆ ಭೇಟಿ ನೀಡಿದ ಕೆಎಸ್‌ಆರ್‌ಟಿಸಿ ಅಧಿಕಾರಿಗಳು ಮೃತರ ಕುಟುಂಬಸ್ಥರಿಗೆ ಸದ್ಯಕ್ಕೆ 25 ಸಾವಿರ ಪರಿಹಾರ ನೀಡಿದ್ದಾರೆ.

ಕೋಟೆ ಮಾರಮ್ಮ ದೇವಸ್ಥಾನದ ಬಳಿ ತುಕ್ಕು ಹಿಡಿದ ಗ್ರಿಲ್ ಸ್ಲ್ಯಾಬ್‌ಗೆ ಅಮಾಯಕರು ಬಲಿಯಾಗುತ್ತಿದ್ದರೂ ಕಣ್ಮುಚ್ಚಿರುವ ನಗರ ಪಾಲಿಕೆ

● ಅವೈಜ್ಞಾನಿಕ ಗ್ರಿಲ್ ಸ್ಲ್ಯಾಬ್ ನಿರ್ಮಾಣ ಇದಕ್ಕೆ ಕಾರಣ ● ಮೈಸೂರಿನಲ್ಲಿದೆ 12 ಬ್ಲ್ಯಾಕ್ ಸ್ಪಾಟ್



ಮೈಸೂರು, ನ.26(ಬಿಎಲ್‌ಯು)– ರಸ್ತೆ ಪಕ್ಕ ನಗರಪಾಲಿಕೆಯವರು ಅವೈಜ್ಞಾನಿಕವಾಗಿ ನಿರ್ಮಾಣ ಮಾಡಿರುವ ಮಳೆ ನೀರಿನ ಓಪನ್ ಗ್ರಿಲ್ ಸ್ಲ್ಯಾಬ್‌ಗಳು ಅಪಘಾತಕ್ಕೆ ಬಾಯ್ತೆರೆದಿವೆ. ಮೈಸೂರಿನ ಕೋಟೆ ಮಾರಮ್ಮ ದೇವಸ್ಥಾನ ಬಳಿಯ ಗ್ರಿಲ್ ಸ್ಲ್ಯಾಬ್‌ನಿಂದ ಪ್ರತಿ ದಿನ ಸರಣಿ ಅಪಘಾತಗಳು ಸಂಭವಿಸುತ್ತಿದ್ದು, ಇಂದು ಮಹಿಳೆಯೊಬ್ಬರು ಇದಕ್ಕೆ ಬಲಿಯಾಗಿದ್ದಾರೆ.

ಕೋಟೆ ಮಾರಮ್ಮ ದೇವಸ್ಥಾನದ ಬಳಿಯ ತಿರುವಿನ ರಾಜಪಥದ ಪಕ್ಕದಲ್ಲಿ ಮಳೆ ನೀರು ಹರಿದು ಹೋಗುವ ಚರಂಡಿಗೆ ಅವೈಜ್ಞಾನಿಕವಾಗಿ ಓಪನ್ ಗ್ರಿಲ್ ಸ್ಲ್ಯಾಬ್ ನಿರ್ಮಿಸಲಾಗಿದೆ. ವಾಹಗಳು ಸಂಚರಿಸಿ ಗ್ರಿಲ್ ತುಕ್ಕು ಹಿಡಿದು ಒಂದು ಕಡೆ ಕುಸಿದಿದೆ. ಅಪಘಾತ ತಪ್ಪಿಸಲು ಸಂಚಾರಿ ಪೊಲೀಸರು ಗ್ರಿಲ್ ಸ್ಲ್ಯಾಬ್ ಪಕ್ಕದಲ್ಲಿ ಬ್ಯಾರಿಕೇಡ್ ನಿಲ್ಲಿಸಿದ್ದಾರೆ.

ಎರಡು ರಸ್ತೆ ಕೂಡುವ ಈ ತಿರುವು ಕಿಷ್ಕಿಂದೆಯಾಗಿದೆ. ಗನ್ ಹೌಸ್ ಹಾಗೂ ಅರಮನೆ ಕಡೆಯಿಂದ ಬರುವ ಎಲ್ಲಾ ವಾಹನಗಳು ಈ ತಿರುವು ಮೂಲಕ ಹಾರ್ಡಿಂಗ್ ಸರ್ಕಲ್ ಕಡೆ ಸಾಗುತ್ತವೆ. ಬಸ್, ಕಾರು ಸೇರಿದಂತೆ ಇತರೆ ವಾಹನಗಳು ಒಂದೇ ಬಾರಿ ಎರಡು ಕಡೆಯಿಂದ ಬಂದಾಗ ಈ ತಿರುವಿನಲ್ಲಿ ಅಪಘಾತಗಳು ಸಂಭವಿಸುತ್ತವೆ. ಜೊತೆಗೆ ಎರಡು ಕಡೆಯಿಂದ ವಾಹನಗಳು ಒಂದೇ ಬಾರಿ ಬರುವ ಕಾರಣ ಇದೇ ತಿರುವಿನಲ್ಲಿ ಪದೇ ಪದೇ ಟ್ರಾಫಿಕ್ ಜಾಮ್ ಕೂಡ ಆಗುತ್ತದೆ.

ಇದೇ ತಿರುವಿನ ರಾಜಪಥದ ಪಕ್ಕದಲ್ಲಿ ಮಳೆ ನೀರು ಹರಿದು ಹೋಗುವ ಚರಂಡಿಗೆ ನಗರಪಾಲಿಕೆಯವರು ಗ್ರಿಲ್ ಸ್ಲ್ಯಾಬ್ ನಿರ್ಮಾಣ ಮಾಡಿದ್ದಾರೆ. ಇದು ಅವೈಜ್ಞಾನಿಕವಾಗಿದೆ. ಜೊತೆಗೆ ಗ್ರಿಲ್‌ಗಳು ಗಟ್ಟಿಯಾಗಿಲ್ಲದ ಕಾರಣ ಅದರ ಮೇಲೆ ವಾಹನಗಳು ಸಂಚರಿಸಿ ಹಳ್ಳವಾಗಿದೆ. ವೇಗವಾಗಿ ಬರುವ ದ್ವಿಚಕ್ರ ವಾಹನಗಳು ಹಳ್ಳದಲ್ಲಿ ಬಿದ್ದು ಅಪಘಾತ ಸಂಭವಿಸುತ್ತಿದ್ದ ಕಾರಣ ಸಂಚಾರಿ ಪೊಲೀಸರು ಪಕ್ಕದಲ್ಲಿ ಬ್ಯಾರಿಕೇಡ್ ನಿಲ್ಲಿಸಿದ್ದಾರೆ. ಬ್ಯಾರಿಕೇಡ್‌ಗೆ ಡಿಕ್ಕಿ ಹೊಡೆಯುವುದನ್ನು ತಪ್ಪಿಸಲು ವಾಹನ ಸವಾರರು ಬಲಕ್ಕೆ ತಿರುಗಿಸಿದ ಸಂದರ್ಭದಲ್ಲಿ ಹಿಂದಿನಿಂದ ಬರುವ ವಾಹನಗಳು ಡಿಕ್ಕಿ ಹೊಡೆಯುತ್ತವೆ.

> ಕೆಲವು ಬ್ಲ್ಯಾಕ್ ಸ್ಪಾಟ್‌ಗಳಲ್ಲಿ ರೋಡ್ ಹಂಪ್ಸ್ ನಿರ್ಮಾಣ, ಹೈಮಾಸ್ಟ್ ಲೈಟ್ ಅಳವಡಿಕೆ ಸೇರಿದಂತೆ ಹಲವು ಕ್ರಮ ಕೈಗೊಂಡು ಅಪಘಾತಗಳು ಸಂಭವಿಸದಂತೆ ಕ್ರಮ ಕೈಗೊಳ್ಳಲಾಗಿದೆ. ಆದರೆ ನಂಜನಗೂಡು ರಸ್ತೆಯ ಎಪಿಎಂಸಿ ವೃತ್ತ ಸೇರಿದಂತೆ ಇತರೆಡೆ ಇರುವ ಬ್ಲ್ಯಾಕ್ ಸ್ಪಾಟ್ ಗಳಲ್ಲಿ ಫ್ಲೈ ಓವರ್ ನಿರ್ಮಾಣ ಮಾಡಬೇಕಿದೆ. ಈ ಸಂಬಂಧ ಜಿಲ್ಲಾಡಳಿತ ಹಾಗೂ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ವಿವರಣೆ ನೀಡಲಾಗಿದೆ ಎಂದು ಜಾಹ್ನವಿ ಹೇಳಿದರು.
>
> \- ಜಾಹ್ನವಿ, ಸಂಚಾರ ವಿಭಾಗದ ಡಿಸಿಪಿ

ಗ್ರಿಲ್ ಪಕ್ಕದಲ್ಲಿ ಬ್ಯಾರಿಕೇಡ್ ನಿಲ್ಲಿಸಿರುವುದರಲ್ಲಿ ಸಂಚಾರಿ ಪೊಲೀಸರ ತಪ್ಪೇನು ಇಲ್ಲ. ಆದರೆ ಕಿಷ್ಕಿಂದೆಯಾದ ರಸ್ತೆಯ ತಿರುವಿನಲ್ಲಿ ಓಪನ್ ಗ್ರಿಲ್ ಸ್ಲ್ಯಾಬ್ ಅನ್ನು ನಗರಪಾಲಿಕೆಯವರು ಅವೈಜ್ಞಾನಿಕವಾಗಿ ನಿರ್ಮಿಸಿರುವುದು ಇಷ್ಟೆಲ್ಲಾ ಅವ್ಯವಸ್ಥೆಗೆ ಕಾರಣವಾಗಿದೆ. ಇದರಿಂದ ಈ ತಿರುವಿನಲ್ಲಿ ಸರಣಿ ಅಪಘಾತಗಳು ಸಂಭವಿಸುತ್ತಿವೆ.

ನಗರಪಾಲಿಕೆಯವರು ಈಗಲಾದರೂ ಈ ಗ್ರಿಲ್ ಅನ್ನು ಬದಲಿಸಬೇಕು. ಇಲ್ಲ ದಿದ್ದರೆ ಸರಣಿ ಅಪಘಾತಕ್ಕೆ ಬಹಳಷ್ಟು ಜನರು ಬಲಿಯಾಗಬೇಕಾಗುತ್ತದೆ ಎಂದು ಸಾರ್ವಜನಿಕರು ಆತಂಕ ವ್ಯಕ್ತಪಡಿಸಿದ್ದಾರೆ.

ಮೈಸೂರು ನಗರದಲ್ಲಿ ಸರಣಿ ಅಪಘಾತಗಳಾಗುವ 12 ಬ್ಲ್ಯಾಕ್ ಸ್ಪಾಟ್‌ಗಳನ್ನು ಗುರುತಿಸಲಾಗಿದೆ. ಈ ಬಗ್ಗೆ ಪೊಲೀಸ್ ಇಲಾಖೆಯು ಜಿಲ್ಲಾಧಿಕಾರಿಗಳಿಗೆ ವರದಿ ನೀಡಿದೆ. ಪೊಲೀಸ್ ಇಲಾಖೆ, ಜಿಲ್ಲಾಡಳಿತ ಹಾಗೂ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಸೇರಿ ಹಲವು ಕ್ರಮ ಕೈಗೊಳ್ಳಬೇಕಿದೆ ಎಂದು ಸಂಚಾರ ವಿಭಾಗದ ಡಿಸಿಪಿ ಜಾಹ್ನವಿ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ನೀರಿನ ಪೈಪು ಒಡೆದು ಪೋಲಾಗುತ್ತಿರುವ ನೀರು

ಅಧಿಕಾರಿಗಳು, ಜನಪ್ರತಿನಿಧಿಗಳ ನಿರ್ಲಕ್ಷ್ಯ



ಬನ್ನೂರಿನ ಸಂತೇಮಾಳದಲ್ಲಿ ಕುಡಿಯುವ ನೀರಿನ ಪೈಪ್‌ಲೈನ್ ಒಡೆದು ನೀರು ಕಾಲುವೆ ಸೇರುತ್ತಿರುವುದು.

ಬನ್ನೂರು, ನ.26– ಎಷ್ಟೋ ಕಡೆ ಕುಡಿಯಲು ನೀರಿಲ್ಲ, ಕುಡಿಯುವ ನೀರಿಗಾಗಿ ಎಷ್ಟೋ ಜೀವಗಳು ಪರಿತಪಿಸುತ್ತಿವೆ. ಇತ್ತ ರೈತರು ನೀರಿಗಾಗಿ ಬೃಹತ್ ಹೋರಾಟವನ್ನೇ ಮಾಡುತ್ತಿದ್ದಾರೆ. ಆದರೆ ಬನ್ನೂರಿನ ಪಟ್ಟಣದಲ್ಲಿ ಮಾತ್ರ ಕುಡಿಯುವ ನೀರು ಮುಖ್ಯ ರಸ್ತೆಯಲ್ಲಿ ಕಾಲುವೆಯಂತೆ ಹರಿಯುತ್ತಿದ್ದು, ಪುರಸಭಾ ಅಧಿಕಾರಿಗಳು ಕಣ್ಮುಚ್ಚಿ ಕುಳಿತಿದ್ದಾರೆ.

ಇದು ಪಟ್ಟಣದಲ್ಲಿನ ಪ್ರಸ್ತುತ ಚಿತ್ರಣವಾಗಿದ್ದು, ಸಂತೆಮಾಳದ ಬಸವೇಶ್ವರ ವೃತ್ತದ ಸಮೀಪದಲ್ಲೆ ಪೈಪ್‌ಲೈನ್ ಒಡೆದು, ಎಲ್ಲರ ಕಣ್ಣೆದುರೆ ನೀರು ಪೋಲಾಗುತ್ತಿದ್ದರೂ, ಅಧಿಕಾರಿಗಳು, ಜನಪ್ರತಿನಿಧಿಗಳು ತಮಗೆ ಸಂಬಂಧಿಸಿದ್ದಲ್ಲ ಎನ್ನುವಂತೆ ತಮ್ಮ ಕೆಲಸದಲ್ಲಿ ತಲ್ಲೀನರಾಗಿರುವುದು ವಿಪರ್ಯಾಸವಾಗಿದೆ.

ಪ್ರತಿ ದಿನ ಪುರಸಭಾ ಅಧಿಕಾರಿಗಳು ಸೇರಿದಂತೆ, ಜನಪ್ರತಿನಿಧಿಗಳು ಇದೆ ರಸ್ತೆಯಲ್ಲಿ ಓಡಾಡುತ್ತಿದ್ದರೂ, ಈ ಬಗ್ಗೆ ಗಮನ ಹರಿಸದೆ ಮೌನವಾಗಿ ಕುಳಿತ್ತಿದ್ದಾರೆ. ನೀರು ಯಾರಿಗೂ ಸಲ್ಲದಂತೆ ಕಾಲುವೆ ಸೇರುತ್ತಿದೆ. ದಿನದ 24 ಗಂಟೆಯು ಹರಿಯುತ್ತಿರುವ ನೀರಿನಿಂದ ಸಾಕಷ್ಟು ನಷ್ಟವಾಗುತ್ತಿರುವು ಬೇಸರದ ಸಂಗತಿಯಾಗಿದೆ. ಇದು ಜನನಿಬಿಡ ಪ್ರದೇಶದ ಅಂಗಡಿ ಮುಂದೆಯೇ ಹರಿಯುತ್ತಿದ್ದು, ವ್ಯಾಪಾರಸ್ಥರು, ಪುರಸಭಾ ಸದಸ್ಯರು, ಸಾರ್ವಜನಿಕರು ಮೌನವಹಿಸಿದ್ದು, ಅಧಿಕಾರಿಗಳ ದಿವ್ಯ ನಿರ್ಲಕ್ಷ್ಯದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ನಾಳೆ ತಿ.ನರಸೀಪುರದಲ್ಲಿ ಗುಡ್ಡಗಾಡು ಓಟದ ಸ್ಪರ್ಧೆ

240 ಕಾಲೇಜುಗಳಿಂದ 500ಕ್ಕೂ ಹೆಚ್ಚು ಸ್ಪರ್ಧಿಗಳು ಭಾಗಿ

ಮುಖ್ಯಮಂತ್ರಿ ಸಿದ್ದರಾಮಯ್ಯರಿಂದ ಉದ್ಘಾಟನೆ



ತಿ.ನರಸೀಪುರ. ನ.26– ಮೈಸೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗದ ವತಿಯಿಂದ 2023–24ನೇ ಸಾಲಿನ ಮಹಿಳಾ ಹಾಗೂ ಪುರುಷರ ಗುಡ್ಡಗಾಡು ಓಟದ (ಕ್ರಾಸ್ ಕಂಟ್ರಿ) ಸ್ಪರ್ಧೆ ಮತ್ತು ಆಯ್ಕೆ ಪ್ರಕ್ರಿಯೆಯನ್ನು ಪಟ್ಟಣದ ಬೈರಾಪುರ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸಹಯೋಗದಲ್ಲಿ ನ.28ರಂದು ನಡೆಸಲಾಗುವುದು ಎಂದು ಮೈಸೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ.ಸಿ.ವೆಂಕಟೇಶ್ ತಿಳಿಸಿದರು.

ಕಾಲೇಜಿನ ಸಭಾಂಗಣದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪಟ್ಟಣದ ಮಹಿಳಾ ಕಾಲೇಜಿನಿಂದ 10 ಕಿ.ಮೀ ಓಟದ ಸ್ಪರ್ಧೆ ಆರಂಭಗೊಂಡು ವರುಣ ವಿಧಾನಸಭಾ ಕ್ಷೇತ್ರದ ಈಶ್ವರಗೌಡನಹಳ್ಳಿಯವರೆಗೂ ಓಟದ ಸ್ಪರ್ಧೆ ನಡೆಯಲಿದೆ ಎಂದರು. ಈ ಸ್ಪರ್ಧೆಗೆ ಮೈಸೂರು ವಿಶ್ವವಿದ್ಯಾನಿಲಯದ ಸುಮಾರು 240 ಸಂಯೋಜಿತ ಕಾಲೇಜುಗಳಿಂದ 500ಕ್ಕೂ ಹೆಚ್ಚು ಮಹಿಳಾ ಹಾಗೂ ಪುರುಷ ಕ್ರೀಡಾಪಟುಗಳು ಭಾಗವಹಿಸಲಿದ್ದಾರೆ. ವಿವಿಧ ಕಾಲೇಜಿನಿಂದ ಬಂದಂತಹ ದೈಹಿಕ ಶಿಕ್ಷಣದ ನಿರ್ದೇಶಕರುಗಳಿಗೆ ಹಾಗೂ ಸ್ಪರ್ಧಿಗಳಿಗೆ ಊಟ ವಸತಿ ಸೌಲಭ್ಯಗಳನ್ನು ಒದಗಿಸಲಾಗುವುದು ಎಂದು ಅವರು ಹೇಳಿದರು.

ಕಾಲೇಜಿನ ಪ್ರಾಂಶುಪಾಲ ಪ್ರೊ.ವಿ.ವಿ. ಜಗದೀಶ್ ಮಾತನಾಡಿ, ನ.28ರಂದು ಬೆಳಗ್ಗೆ 6 ಗಂಟೆಗೆ ಕಾಲೇಜು ಆವರಣದ ಮುಂಭಾಗ ಗುಡ್ಡಗಾಡು ಓಟದ ಸ್ಪರ್ಧೆಯ ಉದ್ಘಾಟನೆ ಮತ್ತು ಬಹುಮಾನ ವಿತರಣಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಉದ್ಘಾಟನಾ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್ ಸಿ.ಮಹದೇವಪ್ಪ, ಲೋಕಸಭಾ ಸದಸ್ಯ ಶ್ರೀನಿವಾಸ್ ಪ್ರಸಾದ್, ಮಾಜಿ ಶಾಸಕ ಹಾಗೂ ಆಶ್ರಯ ಸಮಿತಿ ಅಧ್ಯಕ್ಷ ಡಾ. ಯತೀಂದ್ರ ಸಿದ್ದರಾಮಯ್ಯ, ಕೆಡಿಪಿ ಸದಸ್ಯ ಸುನಿಲ್ ಬೋಸ್ ಹಾಗೂ ಸದಸ್ಯರುಗಳು, ತಾಲೂಕು ಅಧಿಕಾರಿ ವರ್ಗ ಭಾಗವಹಿಸಲಿದ್ದಾರೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಬನ್ನೂರು ಸರ್ಕಾರಿ ಪದವಿ ಪೂರ್ವ ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕ ಡಾ. ಪಶುಪತಿ, ಪ್ರೊ. ಬಿ.ಪಿ. ಇಂದಿರಾ, ಡಾ. ಎಂ. ನೇತ್ರಾವತಿ, ಲಲಿತಾ ಕುಮಾರಿ, ದೈಹಿಕ ಶಿಕ್ಷಣ ವಿಭಾಗದ ಪಿ.ಕೆ. ಶಶಿರೇಖಾ ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಗರಡಿ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಬ್ಯಾಡ್ ಮ್ಯಾನರ್ಸ್ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಟೈಗರ್–3 (ಹಿಂದಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಶುಗರ್ ಫ್ಯಾಕ್ಟರಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಸಪ್ತ ಸಾಗರದಾಚೆ ಎಲ್ಲೋ–ಸೈಡ್ B(ಕ)	2 ಪ್ರದರ್ಶನಗಳು
ರಾಜಕಮಲ್	
ಆಧಿಕೇಶವ (ತೆ)	4 ಪ್ರದರ್ಶನಗಳು
ಸಂಗಂ	
ಗರಡಿ (ಕ)	4 ಪ್ರದರ್ಶನಗಳು
ಲಿಡೋ	
ಶುಗರ್ ಫ್ಯಾಕ್ಟರಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಗರಡಿ (ಕ)	4 ಪ್ರದರ್ಶನಗಳು
ಪ್ರಭಾ	
ಟಗರು ಫಲ್ಯ(ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್ — ದೂ : 4240422/4241800

ಸ್ಕ್ರೀನ್ 1	ಟೈಗರ್ 3(ಹಿಂ): ಬೆ.10.20ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ, ಟಗರುಪಲ್ಯ (ಕ): ಮ.1.20ಕ್ಕೆ.
ಸ್ಕ್ರೀನ್ 2	ದಿ ವೆಕೆಂಟ್ ಹೌಸ್ (ಕ): ಬೆ.11ಕ್ಕೆ, ರಾಜಯೋಗ (ಕ): ಮ.1.15ಕ್ಕೆ, ನೇತ್ರಂ (ಕ): ಸಂ.4.30ಕ್ಕೆ, ಗರಡಿ (ಕ): ರಾ.7.10ಕ್ಕೆ, ಸ್ಪಾರ್ಕ್ ಲೈಫ್ (ತೆ): ರಾ.10ಕ್ಕೆ.
ಸ್ಕ್ರೀನ್ 3	ಟ್ರೋಲ್ಸ್ ಬ್ಯಾಂಡ್ ಟುಗೆದರ್ (3ಡಿ)(ಇಂ): ಬೆ.11ಕ್ಕೆ, ಮ.3.35ಕ್ಕೆ, ಸಂ.5.30ಕ್ಕೆ, ಬೆಂಬಿಡದ ನಾವಿಕ (ಕ): ಮ.1ಕ್ಕೆ, ಶೇಶಮ್ ಮೈಕ್ ಇಲ್ ಫಾತಿಮಾ (ಮ): ರಾ.7.30ಕ್ಕೆ, ದಿ ಹಂಗರ್ ಗೇಮ್ಸ್ (ಇಂ): ರಾ.10.10ಕ್ಕೆ.
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10.05ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.

INOX LIVE THE MOVIE — ಐನಾಕ್ಸ್ ಮೂವೀಸ್ — ದೂ : 2533444 / 2433456

ಸ್ಕ್ರೀನ್ 1	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.9.40ಕ್ಕೆ, ಮ.12.50ಕ್ಕೆ, ಸಂ.4ಕ್ಕೆ, ರಾ.7.10ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.9ಕ್ಕೆ, ಮ.12.10ಕ್ಕೆ, ಸಂ.3.20ಕ್ಕೆ, ಸಂ.6.30ಕ್ಕೆ, ರಾ.9.40ಕ್ಕೆ.
ಸ್ಕ್ರೀನ್ 3	ಟೈಗರ್ 3 (ಹಿಂ): ಬೆ.9.10ಕ್ಕೆ, ಮ.12.30ಕ್ಕೆ, ಮ.3.50ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 4	ಮಂಗಳವಾರಂ (ತೆ): ಬೆ.9.10ಕ್ಕೆ, ಮ.12.25ಕ್ಕೆ, ಸಂ.6.45ಕ್ಕೆ, ಗರಡಿ (ಕ): ಮ.3.40ಕ್ಕೆ, ಟೈಗರ್ 3 (ಹಿಂ): ರಾ.10ಕ್ಕೆ.

MVC ಮೈಸೂರು ವಿಷನ್ ಸಿನಿಮಾ — ದೂ : 0821–2973519

ಸ್ಕ್ರೀನ್ 1	ದಿ ವೆಕೆಂಟ್ ಹೌಸ್ (ಕ): ಬೆ.11ಕ್ಕೆ, ಸಂ.4.10ಕ್ಕೆ, ರಾಜಯೋಗ (ಕ): ಮ.1.05ಕ್ಕೆ, ಸಂ.6.15ಕ್ಕೆ, ಟಗರುಪಲ್ಯ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10ಕ್ಕೆ, ಮ.1.15ಕ್ಕೆ, ರಾ.7.30ಕ್ಕೆ, ಟೈಗರ್ 3 (ಹಿಂ): ಸಂ.4.20ಕ್ಕೆ.
ಸ್ಕ್ರೀನ್ 3	ಟೈಗರ್ 3(ಹಿಂ): ಬೆ.11ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.3.45ಕ್ಕೆ, ಸಂ.6.35ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಟಗರುಪಲ್ಯ (ಕ): ಬೆ.10.30ಕ್ಕೆ, ಸಂ.4.10ಕ್ಕೆ, ಸಂ.6.50ಕ್ಕೆ, ಟೈಗರ್ 3 (ಹಿಂ): ಮ.1.05ಕ್ಕೆ, ರಾ.9.30ಕ್ಕೆ.

PVR CINEMAS — ಪಿವಿಆರ್ ಸಿನಿಮಾಸ್ — ಮೊ.ನಂ: 8951357139 — ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಘೋಸ್ಟ್ (ಕ): ಬೆ.9ಕ್ಕೆ, ಬೆ.10.20ಕ್ಕೆ, ಮ.1.15ಕ್ಕೆ, ಮ.3.20ಕ್ಕೆ, ರಾ.7.35ಕ್ಕೆ, ರಾ.9.45ಕ್ಕೆ, ರಾ.10.30ಕ್ಕೆ, 12th ಫೇಲ್ (ಹಿಂ): ಮ.3.50ಕ್ಕೆ, ಭಗವಂತ್ ಕೇಸರಿ (ತೆ): ರಾ.7.05ಕ್ಕೆ, ಗಣಪತ್: ಎ ಹೀರೋ (ಹಿಂ): ಸಂ.4.10ಕ್ಕೆ, ಕಿಲ್ಲರ್ಸ್ ಆಫ್ ಫ್ಲವರ್ ಮೂನ್ (ಇಂ): ಬೆ.10ಕ್ಕೆ, ಮ.2.05ಕ್ಕೆ, ಸಂ.6.10ಕ್ಕೆ, ರಾ.10.15ಕ್ಕೆ, ಲಿಯೋ (ಕ): ಮ.12.45ಕ್ಕೆ, ಲಿಯೋ (ತ): ಬೆ.11.55ಕ್ಕೆ, ಸಂ.4.10ಕ್ಕೆ, ಸಂ.6.15ಕ್ಕೆ, ರಾ.9.40ಕ್ಕೆ, ರಾ.10.30ಕ್ಕೆ, ಮುಜಿಬ್ ದಿ ಮೇಕಿಂಗ್ ಆಫ್ ಎ ನೇಷನ್ (ಹಿಂ): ರಾ.10ಕ್ಕೆ, ಟಗರುಪಲ್ಯ (ಕ): ಮ.1ಕ್ಕೆ, ರಾ.7ಕ್ಕೆ, ತೇಜಸ್ (ಹಿಂ): ಬೆ.11.05ಕ್ಕೆ, ಮ.1.45ಕ್ಕೆ, ಸಂ.4.25ಕ್ಕೆ, ರಾ.7.05ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಕನ್ನಡದ ಬೇರು ನೆನೆಯದೆ ಹೂ ಅರಳದು...!



ಸರಗೂರು, ನ.26– ಕನ್ನಡದ ಬೇರು ನೆನೆಯದೆ ಹೂ ಅರಳದು ಎಂದು ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ನಿಕಟ ಪೂರ್ವ ಅಧ್ಯಕ್ಷಡಾ.ವೈಡಿ. ರಾಜಣ್ಣ ತಿಳಿಸಿದ್ದಾರೆ.

ಸಮೀಪದ ಎಂ.ಎಂ.ಕೆ. ಸ್ವತಂತ್ರ ಪದವಿ ಪೂರ್ವ ಕಾಲೇಜು ತುಂಬಸೋಗೆಯಲ್ಲಿ ನಡೆದ ಮಕ್ಕಳ ದಿನಾಚರಣೆ, ಕನ್ನಡ ರಾಜ್ಯೋತ್ಸವ ಮತ್ತು ಸಾಂಸ್ಕೃತಿಕ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಒಂದು ತಲೆಮಾರಿನಲ್ಲಿ ಸಾಮಾಜಿಕ ಪ್ರಜ್ಞೆ ಹಾಗೂ ವಿಚಾರ ಪ್ರಜ್ಞೆ ಬೆಳೆಯಲಿಕ್ಕೆ ಮಾತೃಭಾಷೆ ಹಾಗೂ ನೆಲದ ಭಾಷೆಯಿಂದ ಮಾತ್ರ ಸಾಧ್ಯ. ಈ ದಿಸೆಯಲ್ಲಿ ಕನ್ನಡ ನಾಡಿನಲ್ಲಿ ವಿಧ್ಯಾರ್ಥಿಗಳಿಗೆ ಕನ್ನಡ ಭಾಷೆಯ ಪರಂಪರೆ ಅಗತ್ಯ ಕುರಿತಾದ ಬೇರು ನೆಟ್ಟಲ್ಲಿ ಕನ್ನಡದ ಹೂವು ಎದೆಯೊಳಗೆ ಅರಳುತ್ತದೆ ಎಂದರು.

ಹಿರಿಯ ಪತ್ರಕರ್ತ ರವೀಂದ್ರ ಜೋಶಿ ಮಾತನಾಡಿ, ಕನ್ನಡ ಭಾಷೆ ನಮ್ಮ ಉಸಿರು. ಭಾಷೆಯನ್ನು ಸುಲಲಿತವಾಗಿ ಮಾತನಾಡುವುದನ್ನು ಕಲಿಯಬೇಕು. ಪ್ರಪಂಚದ ಯಾವುದೇ ಭಾಷೆಯನ್ನು ಕಲಿತರು ನಮ್ಮ ಕನ್ನಡ ಭಾಷೆಯನ್ನು ಮರೆಯಬಾರದು. ಇದು ತಾಯಿ ಭಾಷೆ. ಹೆಚ್ಚು ಭಾಷೆಗಳನ್ನು ಕಲಿತಾಗ ನಮಗೆ ಜ್ಞಾನ ಹೆಚ್ಚುತ್ತದೆ. ಇತರ ಭಾಷೆಯನ್ನು ದ್ವೇಷಿಸಬಾರದು. ನಮ್ಮ ಭಾಷೆಯನ್ನು ಉಳಿಸುವ ಅಗತ್ಯವಿಲ್ಲ ಭಾಷೆಯನ್ನು ಬಳಸಿದರೆ ಅದೇ ಉಳಿಯುತ್ತದೆ ಎಂದರು.

ಇದೇ ಸಂದರ್ಭದಲ್ಲಿ ಸರ್ಕಾರಿ ಮಹಿಳಾ ಕಾಲೇಜು ಹುಣಸೂರಿನ ಜೀವಶಾಸ್ತ್ರ ಉಪನ್ಯಾಸಕರಾದ ಎಚ್.ಎನ್.ಗಿರೀಶ್ ಮಾತನಾಡಿ, ಗ್ರಾಮೀಣ ಭಾಗದಿಂದ ಬಂದಂತಹ ಉಪನ್ಯಾಸಕ ನಾನು. ಶಿಕ್ಷಕ ವೃತ್ತಿಯನ್ನು ಪ್ರೀತಿಸುತ್ತೇನೆ ಹಾಗೂ ಗೌರವಿಸುತ್ತೇನೆ. ನಾನು ವಿದ್ಯಾರ್ಥಿಗಳನ್ನು ನಮ್ಮ ಮಕ್ಕಳಂತೆ ಬೋಧಿಸುತ್ತೇನೆ. ನನ್ನ ಕಾಲೇಜಿನಲ್ಲಿ ಪ್ರಾರಂಭದಲ್ಲಿ 18 ವಿದ್ಯಾರ್ಥಿಗಳು ವಿಜ್ಞಾನ ವಿಭಾಗಕ್ಕೆ ಸೇರ್ಪಡೆಯಾಗಿದ್ದರು. ಇವತ್ತು 200ಕ್ಕೂ ಹೆಚ್ಚು ವಿದ್ಯಾರ್ಥಿನಿಯರು ವಿಜ್ಞಾನ ವಿಭಾಗಕ್ಕೆ ಸೇರ್ಪಡೆಯಾಗಿದ್ದಾರೆ. ಶಿಕ್ಷಕರಿಗೆ ಸಾಮಾಜಿಕ ಜವಾಬ್ದಾರಿ ಬೇಕು. ಪರಿಸರದ ಬಗ್ಗೆ ಕಾಳಜಿ; ಸಾಮಾಜಿಕ ಕಳಕಳಿ ಇರಬೇಕು. ಇವೆರಡನ್ನು ನಾನು ಮೈಗೂಡಿಸಿ ಕೊಂಡಿರುವುದರಿಂದಲೇ ನನಗೆ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಹಾಗೂ ರಾಷ್ಟ್ರಪ್ರಶಸ್ತಿ ಸಿಕ್ಕಿದ್ದುದು ಎಂದರು,

ತಹಸೀಲ್ದಾರ್ ರುಕಿಯಾಬೇಗಂ ಮಾತನಾಡಿ, ವಿದ್ಯಾರ್ಥಿಗಳಿಗೆ ಪದವಿ ಹಂತ ಬಹುಮುಖ್ಯ ಇಲ್ಲಿ ನಮ್ಮ ಹಣೆಬರಹವನ್ನು ನಾವೆ ಬರೆದುಕೊಳ್ಳಬಹುದು. ನಾವು ಏನಾಗಬೇಕು ಎನ್ನುವುದನ್ನು ನಾವೇ ತೀರ್ಮಾನಿಸಿ ನಿರ್ಧಾರ ತೆಗೆದುಕೊಳ್ಳಬೇಕು ಎಂದರು.

ಸಾಹಿತಿ ಡಾ. ಎಂ.ಎಸ್. ರವಿಶಂಕರ್ ಮಾತನಾಡಿದರು. ತಹಸೀಲ್ದಾರ್ ರುಕಿಯಾಬೇಗಂ, ಜನಪದ ಗಾಯಕ ಅಮ್ಮರಾಮಚಂದ್ರ ಹಾಗೂ ರಾಜ್ಯ ಮತ್ತು ರಾಷ್ಟ್ರ ಪ್ರಶಸ್ತಿ ವಿಜೇತರು ಮತ್ತು ಜೀವಶಾಸ್ತ್ರ ಉಪನ್ಯಾಸಕರಾದ ಎಚ್.ಎನ್. ಗಿರೀಶ್ ಅವರನ್ನು ಕಾರ್ಯಕ್ರಮದಲ್ಲಿ ಸನ್ಮಾನಿಸಲಾಯಿತು. ಮಕ್ಕಳು ಕನ್ನಡ ನಾಡು, ನುಡಿಗೆ ಸಂಬಂಧಿಸಿದಂತೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೀಡಿ ಉತ್ತಮ ಪ್ರದರ್ಶನ ಮಾಡಿದರು.

ಪ್ರಾಂಶುಪಾಲ ಎಸ್.ಪಿ.ಪ್ರಕಾಶ್, ರಾಜ್ಯ ಸಾರಿಗೆ ಸಂಸ್ಥೆ ಬಸ್ ಘಟಕದ ವ್ಯವಸ್ಥಾಪಕ ಭೋಗನಾಯಕ, ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಕನ್ನಡ ಪ್ರಮೋದ್, ಕಾಲೇಜಿನ ಸಿಡಿಸಿ ಅಧ್ಯಕ್ಷ ಮೋಹನ್ ಕುಮಾರ್, ಸದಸ್ಯರಾದ ವೈದ್ಯನಾಥ, ಸಕಲೇಶ್, ಶ್ರೀಧರ್, ಉಪನ್ಯಾಸಕರಾದ ಜಾನ್ ಭಾಸ್ಕೋ, ಪ್ರಸನ್ನ ಕುಮಾರ್, ಸಿದ್ದಾರ್ಥ, ಸಿದ್ದರಾಜು, ಮನೋಜ್, ಮೋಹನ್, ಮಹದೇವಿ, ನವ್ಯ, ಶುಷ್ಮಾ, ರಂಜು, ಕನ್ಯಾಕುಮಾರಿ, ಅರ್ಪಿತ, ವಿಜಯಲಕ್ಷ್ಮಿ ಮೊದಲಾದವರು ಭಾಗವಹಿಸಿದ್ದರು.

ಕವಿತೆಗಳು ಸಂತಸ, ಸಂದೇಶ ಕೊಡುವಂತಿರಬೇಕು: ವೈ.ಡಿ.ರಾಜಣ್ಣ



ನಂಜನಗೂಡು, ನ26– ಕವಿತೆಗಳು ಸಾರ್ವಜನಿಕರಿಗೆ ಸಂತಸ ಹಾಗೂ ಸಂದೇಶ ನೀಡುವಂತಿರಬೇಕು ಎಂದು ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ವೈ.ಡಿ.ರಾಜಣ್ಣ ತಿಳಿಸಿದ್ದಾರೆ.

ನಗರದ ಗುರು ಭವನದಲ್ಲಿ ಏಳನೇ ವರ್ಷದ ವಾರ್ಷಿಕೋತ್ಸವದ ಅಂಗವಾಗಿ ಕವಿಗೋಷ್ಠಿಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಇಂದು ಕರ್ನಾಟಕದಲ್ಲಿ ಸಾಧನೆ ಮಾಡಿದವರ ಬಗ್ಗೆ ಅರಿಯಬೇಕು. ನಾಡು, ನುಡಿ, ಜಲದ ಬಗ್ಗೆ ರವಿ ಕಾಣದ್ದನ್ನು ಕವಿ ಕಂಡ ಎಂದು ಹೇಳಿ ಕವಿಗಳಾಗಿ ಎಂದರು. ಇದೇ ಸಂದರ್ಭದಲ್ಲಿ ಮಹದೇವಪ್ರಸಾದ, ರಂಜನ ಪ್ರಸಾದ್, ಮಧುಸೂದನ್, ಸತೀಶ್. ಎಸ್.ದಳವಾಯಿ, ಅಭಿನಯ, ರಾಜಪ್ಪ ಆರುಷಿ, ಸಾಲಿಗ್ರಾಮ ಗುರುರಾಘವೇಂದ್ರ, ಚೇತನ್ ಕುಮಾರ್ ಮುಂತಾದವರು ಕವನ ವಾಚನ ಮಾಡಿದರು.

ಕವಿತೆ ಬರೆಯುವ ಹಾಗೂ ಕವಿತೆಯಲ್ಲಿ ಒಳಗೊಂಡಿರಬೇಕಾದ ವಸ್ತು ವಿಷಯ ಹಾಗೂ ಪ್ರಸ್ತುತ ಕವಿಗಳು ಹೆಚ್ಚು ಹೆಚ್ಚು ಕವನಗಳನ್ನು, ಸಾಹಿತ್ಯಗಳನ್ನು ಬರೆಯುವುದರಲ್ಲಿ ತೊಡಗಿಸಿಕೊಂಡಿರುವುದು ಶ್ಲಾಘನೀಯ ಹಾಗೂ ಕವಿತೆ ಬರೆಯುವ ರೀತಿ ಮುಂತಾದವುಗಳ ಬಗ್ಗೆ ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ಸತೀಶ್ ಚಂದ್ರ ತಿಳಿಸಿದರು.

ಇದೇ ಸಂದರ್ಭದಲ್ಲಿ ವೇದಿಕೆಯ ವತಿಯಿಂದ ದೇವಿರಮ್ಮನಹಳ್ಳಿ, ಹೊಸಹಳ್ಳಿ, ಕರಳಪುರ ಸರ್ಕಾರಿ ಶಾಲೆಗಳಲ್ಲಿ ನಡೆಸಿದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ಸುಮಾರು 65 ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ ಮಾಡಲಾಯಿತು. ತಾಲೂಕು ಘಟಕದ ಅಧ್ಯಕ್ಷ ಚೇತನ್ ಶರ್ಮ, ರಾಜ್ಯ ಕಾರ್ಯಾಧ್ಯಕ್ಷರು ಸೌಂದಿಕಜೋಯಿಸ್, ಸುಧಾ ಗಣೇಶ್ ಮೂರ್ತಿ, ಸದಸ್ಯರು ಶ್ರೀಕಂಠ ಮೂರ್ತಿ, ಶ್ರೀಕಾಂತ್, ಶೋಭ ನಾಗಶಯನ, ಮಹೇಶ್, ರವಿಶಂಕರ್, ಶ್ರೀನಿವಾಸ್, ರಮೇಶ್, ಕವಿಗಳು, ಶಾಲಾ ಮಕ್ಕಳು ಹಾಗೂ ಇತರರು ಭಾಗವಹಿಸಿದ್ದರು.

ಗುರುವಿಗೆ ಗೌರವ ಕೊಡುವ ಪ್ರವೃತ್ತಿ ಇಲ್ಲವಾಗುತ್ತಿದೆ

ಗುರುವಂದನಾ ಕಾರ್ಯಕ್ರಮದಲ್ಲಿ ಪದವಿ ಪೂರ್ವ ಕಾಲೇಜುಗಳ ಉಪ ನಿರ್ದೇಶಕ ಮರಿಸ್ವಾಮಿ ವಿಷಾದ



ಹೆಚ್.ಡಿ. ಕೋಟೆ, ನ.26– ಪ್ರಸ್ತುತ ದಿನಗಳಲ್ಲಿ ವಿದ್ಯೆ ಕಲಿಸಿದ ಗುರುಗಳಿಗೆ ವಿದ್ಯಾರ್ಥಿಗಳು ಗೌರವ ಸಲ್ಲಿಸುವ ಪ್ರವೃತ್ತಿಯೇ ಇಲ್ಲವಾಗಿದೆ ಎಂದು ಮೈಸೂರು ಪದವಿ ಪೂರ್ವ ಕಾಲೇಜುಗಳ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಮರಿಸ್ವಾಮಿ ವಿಷಾದ ವ್ಯಕ್ತಪಡಿಸಿದರು.

ಪಟ್ಟಣದ ಜೂನಿಯರ್ ಕಾಲೇಜು ಮೈದಾನದಲ್ಲಿ ಹಳೇ ವಿದ್ಯಾರ್ಥಿ ಸಂಘದ ವತಿಯಿಂದ ಭಾನುವಾರ ಸಂವಿಧಾನ ಸಮರ್ಪಣಾ ದಿನದ ಅಂಗವಾಗಿ ಆಯೋಜಿಸಲಾಗಿದ್ದ ಗುರುವಂದನಾ ಕಾರ್ಯಕ್ರಮವನ್ನು ಉದ್ದೇಶಿಸಿ ಅವರು ಮಾತನಾಡಿದರು.

ಹಿಂದಿನ ದಿನಗಳಲ್ಲಿ ವಿದ್ಯೆ ಬುದ್ಧಿ ಕಲಿಸಿದ ಗುರುಗಳನ್ನು ವಿದ್ಯಾರ್ಥಿಗಳು ಮನಃಪೂರ್ವಕವಾಗಿ ಗೌರವ ನೀಡುತ್ತಿದ್ದರು, ಅಂದು ಗುರುವಿಗೆ ಗೌರವ ನೀಡಿದ ವಿದ್ಯಾರ್ಥಿಗಳು ಇಂದು ಹಲವು ಪ್ರಮುಖ ಹುದ್ದೆಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ ಎಂದು ತಿಳಿಸಿದರು.

ವಿದ್ಯಾರ್ಥಿಗಳು ಗುರುಗಳನ್ನು ತಾತ್ಸಾರ ಮನೋಭಾವದಿಂದ ಕಾಣುತ್ತಾರೆ. ಸದೃಢ ಸಮಾಜವನ್ನು ಮತ್ತು ಭಾರತವನ್ನು ನಿರ್ಮಾಣ ಮಾಡಲು ಶಿಕ್ಷಣ ಕ್ಷೇತ್ರದ ಪಾತ್ರ ಮಹತ್ವಾದದ್ದು, ಈ ಕ್ಷೇತ್ರದಲ್ಲಿ ದುಡಿಯುವ ಪ್ರತಿಯೊಬ್ಬ ವ್ಯಕ್ತಿಗೂ ಸಹ ಅದರದೇ ಆದ ಮಹತ್ವವಿದೆ ಎಂದು ತಿಳಿಸಿದರು.

ಉಪ ನಿರ್ದೇಶಕ ಆನಂದರಾಜು ಅವರು ಮಾತನಾಡಿ, ನಿರಂತರ ಕಲಿಕೆ ಯಾವ ಶಿಕ್ಷಕನಲ್ಲಿ ಇರುತ್ತದೋ ಅಂತಹ ಶಿಕ್ಷಕ ಮಾತ್ರ ಉತ್ತಮ ಶಿಕ್ಷಕನಾಗಲು ಸಾಧ್ಯ. ಶಿಕ್ಷಕನಾದವನಿಗೆ ಮೂರು ಗುಣಗಳು ಇರಬೇಕು. ತನ್ನ ವಿಷಯವನ್ನು, ತನ್ನ ವೃತ್ತಿಯನ್ನು ಹಾಗೂ ತನ್ನ ವಿದ್ಯಾರ್ಥಿಗಳನ್ನು ತನ್ನ ಮಕ್ಕಳ ಸ್ಥಾನದಲ್ಲಿ ನೋಡಬೇಕು. ಆಗ ಮಾತ್ರ ಉತ್ತಮ ಶಿಕ್ಷಕ ಆಗಲು ಸಾಧ್ಯ ಎಂದರು.

ಅಭಿನಂದನೆ ಸ್ವೀಕರಿಸಿ ಮಾತನಾಡಿದ ಮುಖ್ಯಶಿಕ್ಷಕ ಎಚ್.ಎನ್.ಎಸ್.ಬೇಗ್, ನೀವು ವಿದ್ಯಾರ್ಥಿಗಳಾಗಿದ್ದ ಸಂದರ್ಭದಲ್ಲಿ ಪ್ರಬುದ್ಧರಾಗಿರಲಿಲ್ಲ. ಪ್ರಸ್ತುತ ನೀವು ಪ್ರಜ್ಞಾವಂತರಾಗಿ ಸಮಾಜದಲ್ಲಿ ಉನ್ನತ ಸ್ಥಾನಗಳನ್ನು ಅಲಂಕರಿಸಿದ್ದು, ಅದರಲ್ಲೂ ವೈದ್ಯರು, ಉಪನ್ಯಾಸಕರು, ಯೋಧರಾಗಿ ಇರುವುದನ್ನು ಕಂಡು ಸಂತೋಷವಾಗಿದೆ. ತಾಲೂಕಿಗೆ ಹಾಗೂ ಗುರುಗಳಿಗೆ ಹೆಮ್ಮೆ ತರುವಂಥ ಕೆಲಸ ಆಗಿದ್ದು ಮತ್ತಷ್ಟು ಕೆಲಸ ಆಗಿ ವನಸಿರಿ ನಾಡಿಗೆ ಹೆಮ್ಮೆ ತರುವಂಥ ಕೆಲಸವನ್ನು ಮಾಡಿ ಎಂದು ಆಶಿಸಿದರು.

ಕಾಲೇಜಿನ ಪ್ರಾಂಶುಪಾಲ ಎಂ.ವಿ. ಹನುಮಂತರಾವ್, ಆನಂದ ರಾಜ್, ಮರಿಸ್ವಾಮಿ, ಉಪನ್ಯಾಸಕ ಮೋಹನ್, ಕಾಲೇಜು ಅಭಿವೃದ್ಧಿ ಸಮಿತಿ ಅಧ್ಯಕ್ಷ ಎಚ್.ಸಿ. ನರಸಿಂಹಮೂರ್ತಿ, ನಿವೃತ್ತ ಪ್ರಾಂಶುಪಾಲ ಚಲುವಯ್ಯ, ಕಾಳಿಂಗೇಗೌಡ, ಚಲುವ ಅರಸ್, ಮುತ್ತುರಾಜ್, ನಂದೀಶ್, ರವೀಂದ್ರ, ವೀರಪ್ಪಾಜಿ, ಶಿವರಾಮಯ್ಯ, ಮಲ್ಲಿಕಾರ್ಜುನಸ್ವಾಮಿ, ನಿವೃತ್ತ ಶಿಕ್ಷಕ ಶಿವಸ್ವಾಮಿ, ಪದ್ಮನಾಭ್, ಶ್ರೀಲತಾ, ಸಿದ್ದರಾಜು, ಕೆ. ಸವಿತಾ, ಬೇಗ್, ಮೈಥಿಲಿ, ಶಿವಾನಂದಸ್ವಾಮಿ, ಕೆ.ಸಿ. ಕೊಂಡಯ್ಯ, ಲಂಕಣ್ಣ, ಎಂ.ಕೆ. ಪುಟ್ಟಸ್ವಾಮಿ, ಲಕ್ಷ್ಮೀನಾರಾಯಣ, ಮಂಜುನಾಥ, ಚಿಕ್ಕಣ್ಣ, ಜವರಯ್ಯ, ಮಹೇಶ್, ಮಹದೇವಮ್ಮ, ಉಷಾ ಕಿರಣ, ಪಿ.ಗುಣ, ಲೀಲಾವತಿ, ಚನ್ನಪ್ಪ, ರಮೇಶ್, ರಾಜೇಶ್, ರವಿಕುಮಾರ್, ಪುರಸಭಾ ಸದಸ್ಯ ಐಡಿಯಾ ವೆಂಕಟೇಶ್, ಹನುಮಯ್ಯ, ಗುರುಸ್ವಾಮಿ, ಮೂರ್ತಿ ಇದ್ದರು.

ತಲಕಾಡು ಅಸ್ತಿಕೇರಿ ಮಠಕ್ಕೆ ರಾಜ್ಯ ಹೈಕೋರ್ಟ್ ನ್ಯಾಯಮೂರ್ತಿಗಳ ಭೇಟಿ



ತಿ.ನರಸೀಪುರ ನ.26– ತಲಕಾಡು ಅಸ್ತಿಕೇರಿ ಮಠಕ್ಕೆ ರಾಜ್ಯ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಟಿ.ಜಿ. ಶಿವಶಂಕರ ಗೌಡ್ರು ಭೇಟಿ ನೀಡಿದ್ದರು. ಈ ವೇಳೆ ಮಠದ ಶ್ರೀಗಳಾದ ಡಾ. ಶ್ರೀ ಸಿದ್ದಮಲ್ಲಿಕಾರ್ಜುನ ಸ್ವಾಮೀಜಿ ನ್ಯಾಯಮೂರ್ತಿಗಳನ್ನು ಸನ್ಮಾನಿಸಿ, ಆಶೀರ್ವದಿಸಿದರು.

ಮೈಸೂರು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಶ್ರೀಮತಿ ಪ್ರಭಾವತಿ ಹಿರೇಮಠ್, ಟಿ.ನರಸೀಪುರದ ನ್ಯಾಯಾಧೀಶರಾದ ಹನುಮಂತು, ಹಿರಿಯ ಶ್ರೇಣಿಯ ನ್ಯಾಯಾಧೀಶರಾದ ಚೇತನ್ ಅನ್ನದಾನಿ, ಮಂಜುನಾಥ್ ಮತ್ತು ವೆಂಕಟೇಶ್ ಉಪಸ್ಥಿತರಿದ್ದು, ಶ್ರೀಗಳಿಂದ ಆಶೀರ್ವಾದ ಪಡೆದರು.

ಎನ್.ಶ್ರೀಕಂಠ ಪ್ರಸಾದ್, ರವಿಶಂಕರ್, ವಕೀಲರ ಅಧ್ಯಕ್ಷ ಪಾಲಾಕ್ಷ ಮೂರ್ತಿ, ನಾರಾಯಣಸ್ವಾಮಿ, ಶ್ರೀ ಅಸ್ತಿಕೇರಿ ಮಠದ ವಿಕಾಸ ವೇದಿಕೆಯ ಧರ್ಮದರ್ಶಿಗಳಾದ ಬಸವಣ್ಣ, ಸಮಾಜ ಸೇವಕ ಗುರುರಾಜ್, ಮಹೇಶ್, ಪಂಚಲಿಂಗ ಸಮಿತಿಯ ಅಧ್ಯಕ್ಷ ನಂಜುಂಡಸ್ವಾಮಿ, ಕಂಠೀ, ತಲಕಾಡು ಶಿವಕುಮಾರ್, ರಂಗನಾಥ್, ಶೇಖರ್ ಮತ್ತು ಶ್ರೀನಾಥ್ ಅವರು ಉಪಸ್ಥಿತರಿದ್ದರು.

ಚಾಮುಂಡೇಶ್ವರಿ ದೇವಸ್ಥಾನಕ್ಕೆ ಭೂಮಿ ಪೂಜೆ



ಹೆಚ್.ಡಿ.ಕೋಟೆ: ಪಟ್ಟಣದ ಹ್ಯಾಂಡ್‌ಪೋಸ್ಟ್ ಯರಹಳ್ಳಿಯಲ್ಲಿ ಗೋಂಧಳಿ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಮರಾಠಿ ಜನಾಂಗದವರು ನಿರ್ಮಿಸಲು ಉದ್ದೇಶಿಸಿರುವ ಶ್ರೀ ಚಾಮುಂಡೇಶ್ವರಿ ದೇವಸ್ಥಾನ ಹಾಗೂ ಸಮುದಾಯ ಭವನಕ್ಕೆ ಅರೆ ಅಲೆಮಾರಿ ನಿಗಮದ ರಾಜ್ಯ ಮಾಜಿ ಅಧ್ಯಕ್ಷ ರವೀಂದ್ರ ಶೆಟ್ಟಿ ಭೂಮಿ ಪೂಜೆ ನೆರವೇರಿಸಿದರು.

ಪುರಸಭೆ ಸದಸ್ಯರುಗಳಾದ ವೈ.ಬಿ.ಹರೀಶ್, ಪ್ರೇಮ್‌ಸಾಗರ್, ಗೋಂಧಳಿ ಸಮಾಜದ ಯಜಮಾನರು ಮತ್ತು ವಕೀಲರಾದ ಮಣಿರಾಜು ಬಿ.ಪಟೇಲರಾದ ದೇವರಾಜ್‌ರಾವ್, ಮಾಜಿ ಗ್ರಾಪಂ ಅಧ್ಯಕ್ಷೆ ಪುಷ್ಪ, ನಾಗರಾಜ್‌ರಾವ್, ನಾಗರಾಜು, ಕಾರ್ಯದರ್ಶಿಯಾದ ಹೆಚ್.ಬಿ.ಮಂಜು, ಉಪಾಧ್ಯಕ್ಷ ಮೋಹನ್ ರಾವ್, ಖಜಾಂಚಿ ಗಣೇಶ್, ರವಿ, ಶೃಂಗಾರ, ಗಣೇಶ ಬುಲ್ಲು, ಅಪ್ಪಿ, ರಾಘವೇಂದ್ರ, ರಾಜೇಶ್, ರಮೇಶ್, ಯಶ್ವಂತ್, ಶಾಮ್, ರವಿ, ಜೀವನ್ ಇತರರು ಭಾಗವಹಿಸಿದ್ದರು.

ಅನ್ನಭಾಗ್ಯ ಉಪ ಕೇಂದ್ರಕ್ಕೆ ಶಾಸಕ ದರ್ಶನ್ ಚಾಲನೆ

ಮಲ್ಲುಂಡಿ, ನ26– ನಂಜನಗೂಡು ತಾಲೂಕಿನ ಮಾದನಹಳ್ಳಿ ಗ್ರಾಮದಲ್ಲಿ ಅನ್ನಭಾಗ್ಯ ವಿತರಣಾ ಉಪಕೇಂದ್ರವನ್ನು ಶಾಸಕ ದರ್ಶನ್ ಧ್ರುವನಾರಾಯಣ್ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ಮಾದನಹಳ್ಳಿ ಗ್ರಾಮಸ್ಥರು ಅನ್ನಭಾಗ್ಯ ಪಡಿತರ ಪಡೆಯಲು ಗ್ರಾಮದಿಂದ ಸುಮಾರು 6 ಕಿಮೀ ದೂರದಲ್ಲಿರುವ ಚಂದ್ರವಾಡಿ ಗ್ರಾಮಕ್ಕೆ ಹೋಗುವ ಪರಿಸ್ಥಿತಿ ಇತ್ತು ಮುಖಂಡ ಗಿರೀಶ್ ಹಾಗೂ ಗ್ರಾಮಸ್ಥರು ಈ ವಿಷಯವನ್ನು ನನ್ನ ಗಮನಕ್ಕೆ ತಂದಿದ್ದರು. ಗ್ರಾಮಸ್ಥರು ತಮ್ಮ ಕೆಲಸ ಬಿಟ್ಟು ಅನ್ನಭಾಗ್ಯ ಪಡೆಯಲು ದೂರ ಹೋಗುವುದನ್ನು ಅರಿತು ಸಂಬಂಧಪಟ್ಟ ಅಧಿಕಾರಿಗಳ ಜೊತೆ ಚರ್ಚಿಸಿ ಈ ಗ್ರಾಮಕ್ಕೆ ಬಹುದಿನದ ಕನಸಾಗಿದ್ದ ಅನ್ನಭಾಗ್ಯ ವಿತರಣಾ ಉಪ ಕೇಂದ್ರವನ್ನು ಆರಂಭಿಸಲಾಗಿದ್ದು, ಇದನ್ನು ಸದುಪಯೋಗಪಡಿಸಿಕೊಳ್ಳುವಂತೆ ಕೋರಿದರು.



ಈ ಗ್ರಾಮದಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸಗಳು ಆಗಬೇಕಿದೆ. ಗ್ರಾಮದಲ್ಲಿ ಸಿಸಿ ರಸ್ತೆ, ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಇನ್ನೂ ಮುಂತಾದ ಸಮಸ್ಯೆಗಳ ಬಗ್ಗೆ ನನ್ನ ಗಮನಕ್ಕೆ ತಂದಿದ್ದೀರಿ. ಮುಂದಿನ ದಿನಗಳಲ್ಲಿ ಸರ್ಕಾರದಿಂದ ಹೆಚ್ಚು ಅನುದಾನ ತಂದು ಮಾದನಹಳ್ಳಿ ಗ್ರಾಮದ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡುತ್ತೇನೆ ಎಂದು ಭರವಸೆ ನೀಡಿದರು.

ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಚಂದ್ರವಾಡಿ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಹೆಚ್.ಎಂ. ಕೆಂಡಗಣ್ಣಪ್ಪ, ಹುಲ್ಲಹಳ್ಳಿ ಬ್ಲಾಕ್ ಅಧ್ಯಕ್ಷ ಶ್ರೀಕಂಠನಾಯಕ, ಜಿಪಂ ಮಾಜಿ ಸದಸ್ಯ ಕೆ.ಮಾರುತಿ, ಎಲ್.ಮಾದಪ್ಪ, ಗಿರೀಶ್, ಸಂಗರಾಜು, ಇಬ್ಜಾಲ ಕೆಂಡಗಣ್ಣಪ್ಪ, ಹರದನಹಳ್ಳಿ ಸೋಮೇಶ್, ಕಡಬೂರು ನಂದೀಶ್, ಮೂರ್ತಿ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಭಾರತಿಭಾಯಿ ಸೇರಿದಂತೆ ಪ್ರಮುಖರು ಹಾಜರಿದ್ದರು.

ಮಾಂಬಳ್ಳಿ ವಿ.ರಂಗಸ್ವಾಮಿ ನಿಧನ



ಹೆಚ್.ಡಿ.ಕೋಟೆ: ತಾಲೂಕಿನ ಹ್ಯಾಂಡ್ ಪೋಸ್ಟ್ ವರ್ತಕರ ಸಂಘದ ಮಾಜಿ ಅಧ್ಯಕ್ಷರು ಹಾಗೂ ಶ್ರೀ ಅಂಕಾಳ ಪರಮೇಶ್ವರಿ ದೇವಸ್ಥಾನದ ಅಧ್ಯಕ್ಷರಾದ ಮಾಂಬಳ್ಳಿ ವಿ.ರಂಗಸ್ವಾಮಿ,(ಪಾಪಣ್ಣ) ಭಾನುವಾರ ನಿಧನರಾಗಿದ್ದಾರೆ.

ಅವರಿಗೆ 68 ವರ್ಷ ವಯಸ್ಸಾಗಿತ್ತು. ದಿವಂಗತರು ಪತ್ನಿ, ಓರ್ವ ಪುತ್ರ ಸೇರಿದಂತೆ ಅಪಾರ ಬಂಧು ಬಳಗ ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯನ್ನು ಸೋಮವಾರ ಮಧ್ಯಾಹ್ನ 2 ಗಂಟೆಗೆ ಹ್ಯಾಂಡ್‌ಪೋಸ್ಟ್‌ನಲ್ಲಿ ನೆರವೇರಿಸಲಾಗುವುದು ಎಂದು ಕುಟುಂಬವರ್ಗ ತಿಳಿಸಿದೆ.

ಹೆಚ್.ಡಿ.ಕೋಟೆ, ಸರಗೂರು ತಾಲೂಕು 24 ಮನೆ ತೆಲುಗು ಶೆಟ್ಟರು ಸಂಘದ ಅಧ್ಯಕ್ಷರು, ಪದಾಧಿಕಾರಿಗಳು, ಸದಸ್ಯರುಗಳು ಸಂತಾಪ ಸೂಚಿಸಿದ್ದಾರೆ.

ಮೈಸೂರು ಮೆಡಿಕಲ್ ಕಾಲೇಜಿನಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರತಿಮೆ ಸ್ಥಾಪನೆ

ಪ್ರಮೋದಾ ದೇವಿ ಒಡೆಯರ್‌ರಿಂದ ಪ್ರತಿಮೆ ಅನಾವರಣ



ಮೈಸೂರು ಮೆಡಿಕಲ್ ಕಾಲೇಜಿನ ಆವರಣದಲ್ಲಿ ನಿರ್ಮಿಸಿರುವ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರತಿಮೆ ಅನಾವರಣ ಕಾರ್ಯಕ್ರಮವನ್ನು ಮೈಸೂರು ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್ ಉದ್ಘಾಟಿಸಿದರು. (ಎಡದಿಂದ) ಮೈಸೂರು ಜೆಎಸ್‌ಎಸ್ ಮೆಡಿಕಲ್ ಕಾಲೇಜಿನ ಪ್ರಿನ್ಸಿಪಾಲ್ ಡಾ.ಬಿ.ಬಸವನ ಗೌಡಪ್ಪ, ಸಂಸ್ಕೃತ ವಿದ್ವಾಂಸ ವಿದ್ವಾನ್ ಡಾ.ಹೆಚ್.ವಿ.ನಾಗರಾಜ ರಾವ್, ಮೈಸೂರು ಮೆಡಿಕಲ್ ಕಾಲೇಜಿನ ಹಳೆಯ ವಿದ್ಯಾರ್ಥಿಗಳ ಸಂಘದ ಗೌರವಾಧ್ಯಕ್ಷ ಡಾ.ಸಿ.ಡಿ.ಶ್ರೀನಿವಾಸ ಮೂರ್ತಿ, ಮೈಸೂರು ಮೆಡಿಕಲ್ ಕಾಲೇಜಿನ ನಿರ್ದೇಶಕರೂ ಆದ ಡೀನ್ ಡಾ.ಕೆ.ಆರ್.ದಾಕ್ಷಾಯಣಿ, ಹಿರಿಯ ಶಸ್ತ್ರ ಚಿಕಿತ್ಸಕ ಡಾ.ಸಿ.ಜಿ.ನರಸಿಂಹನ್, ಕಾರ್ಯಕ್ರಮದ ರೂವಾರಿಗಳಾದ ಮಧುಮೇಹ ತಜ್ಞ ಡಾ.ವಿ.ಲಕ್ಷ್ಮೀನಾರಾಯಣ್, ಡಾ.ಉದಯ ಶಂಕರ್, ಮೈಸೂರು ಅರಮನೆ ಮಂಡಳಿ ಉಪ ನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ, ವಿದೇಶ ವ್ಯವಹಾರಗಳ ಸಚಿವಾಲಯದ ಜಂಟಿ ಕಾರ್ಯದರ್ಶಿ ಡಾ.ಕೆ.ಜೆ.ಶ್ರೀನಿವಾಸ್, ಕೆ.ಆರ್.ಆಸ್ಪತ್ರೆಯ ಶಸ್ತ್ರಚಿಕಿತ್ಸಾ ಪ್ರಾಧ್ಯಾಪಕ ಡಾ.ದಿನೇಶ್ ಅವರಿದ್ದಾರೆ. ಮೈಸೂರು ಮೆಡಿಕಲ್ ಕಾಲೇಜಿನ ಆವರಣದಲ್ಲಿ ಭಾನುವಾರ ಅನಾವರಣಗೊಂಡಿರುವ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಪ್ರತಿಮೆಯನ್ನು ಬಲಚಿತ್ರದಲ್ಲಿ ಕಾಣಬಹುದು.



ಮೈಸೂರು, ನ.26(ಬಿಎಲ್‌ಯು)– ಆಧುನಿಕ ಮೈಸೂರು ನಿರ್ಮಾತೃ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಸ್ಥಾಪಿಸಿರುವ ಬಹಳಷ್ಟು ಸಂಸ್ಥೆಗಳು ಇಂದಿಗೂ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದ್ದು, ಮೈಸೂರು ಮೆಡಿಕಲ್ ಕಾಲೇಜಿನ ಬೆಳವಣಿಗೆ ಇದಕ್ಕೆ ಸ್ಪಷ್ಟ ನಿದರ್ಶನ ಎಂದು ಮೈಸೂರು ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್ ಅಭಿಪ್ರಾಯಪಟ್ಟರು.

ಮೈಸೂರು ಮೆಡಿಕಲ್ ಕಾಲೇಜು ಆವರಣದಲ್ಲಿ ನಿರ್ಮಿಸಿರುವ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರತಿಮೆ ಅನಾವರಣ ಮಾಡಿ ಮಾತನಾಡಿದ ಅವರು, ವೈದ್ಯಕೀಯ ಸೌಲಭ್ಯಗಳು ಮುಂದುವರೆದಿರುವ ಈ ಸಂದರ್ಭದಲ್ಲಿ ದೊಡ್ಡಾಸ್ಪತ್ರೆಗೆ ಹೆಚ್ಚಿನ ರೋಗಿಗಳು ಬರುತ್ತಿದ್ದಾರೆ. ಶ್ರೀಸಾಮಾನ್ಯರಿಗೆ ಮಹಾರಾಜರು ಸ್ಥಾಪಿಸಿರುವ ಸಂಸ್ಥೆಗಳ ಮೇಲಿರುವ ನಂಬಿಕೆಯನ್ನು ಇದು ತೋರಿಸುತ್ತದೆ ಎಂದರು.

ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ನೆನಪು ಹಸಿರಾಗಿಸುವ ವೈದ್ಯಕೀಯ ಕಾಲೇಜಿನ ಹಿರಿಯ ವಿದ್ಯಾರ್ಥಿಗಳ ಈ ಕಾರ್ಯ ಅಭಿನಂದನಾರ್ಹ ಎಂದು ಹೇಳಿದರು.

ಮೈಸೂರು ಮೆಡಿಕಲ್ ಕಾಲೇಜಿನ ಅಭಿವೃದ್ಧಿಗೆ ವೈಯಕ್ತಿಕವಾಗಿ ನೆರವು ನೀಡಲು ಸಿದ್ಧನಿದ್ದೇನೆ ಎಂದು ಈ ವೇಳೆ ಪ್ರಮೋದಾದೇವಿ ಒಡೆಯರ್ ಭರವಸೆ ನೀಡಿದರು.

ಮೈಸೂರು ಮೆಡಿಕಲ್ ಕಾಲೇಜಿನ ಹಳೆಯ ವಿದ್ಯಾರ್ಥಿಗಳ ಸಂಘದ ಗೌರವಾಧ್ಯಕ್ಷ ಡಾ.ಸಿ. ಡಿ.ಶ್ರೀನಿವಾಸ ಮೂರ್ತಿ, ಮೈಸೂರು ಮೆಡಿಕಲ್ ಕಾಲೇಜಿನ ಡೀನ್ ಹಾಗೂ ನಿರ್ದೇಶಕಿ ಡಾ.ಕೆ.ಆರ್.ದಾಕ್ಷಾಯಣಿ, ಕಾರ್ಯಕ್ರಮದ ರೂವಾರಿಗಳೂ ಆದ ಮಧುಮೇಹ ತಜ್ಞ ಡಾ.ವಿ.ಲಕ್ಷ್ಮೀ ನಾರಾಯಣ್, ಕುವೆಂಪು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಡಾ.ಕೆ.ಚಿದಾನಂದಗೌಡ, ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಡಾ.ಪ್ರಧಾನ್ ಗುರುದತ್ತ, ಸಂಸ್ಕೃತ ವಿದ್ವಾಂಸ ವಿದ್ವಾನ್ ಡಾ.ಹೆಚ್.ವಿ.ನಾಗರಾಜರಾವ್, ಮೈಸೂರು ಅರಮನೆ ಮಂಡಳಿ ಉಪ ನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ, ವಿದೇಶ ವ್ಯವಹಾರಗಳ ಸಚಿವಾಲಯದ ಜಂಟಿ ಕಾರ್ಯದರ್ಶಿ ಡಾ.ಕೆ. ಜೆ.ಶ್ರೀನಿವಾಸ, ಆದಿಚುಂಚನಗಿರಿ ವಿಶ್ವವಿದ್ಯಾ ನಿಲಯದ ಕುಲಪತಿ ಡಾ.ಎಂ.ಎ.ಶೇಖರ್, ಜೆಎಸ್‌ಎಸ್ ಮೆಡಿಕಲ್ ಕಾಲೇಜಿನ ಪ್ರಿನ್ಸಿಪಾಲ್ ಡಾ.ಬಸವನಗೌಡಪ್ಪ, ಕೆ.ಆರ್.ಆಸ್ಪತ್ರೆಯ ಶಸ್ತ್ರ ಚಿಕಿತ್ಸಾ ಪ್ರಾಧ್ಯಾಪಕ ಡಾ.ದಿನೇಶ್, ಹಿರಿಯ ಶಸ್ತ್ರ ಚಿಕಿತ್ಸಕ ಡಾ.ಸಿ.ಜಿ.ನರಸಿಂಹನ್, ಡಾ.ಚಂದ್ರಶೇಖರ್ ಶೆಟ್ಟಿ, ಡಾ.ಉದಯ ಶಂಕರ್, ಡಾ.ಎಂಜಿಆರ್ ಅರಸ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಭಾರತೀಯ ಕಲೆಗಳ ಪೋಷಿಸುವ ಹೊಣೆಗಾರಿಕೆ ನಮ್ಮೆಲ್ಲರದು

ಬಿಜೆಪಿ ಮುಖಂಡರೂ ಆದ ವಿದ್ಯಾವಿಕಾಸ ಶಿಕ್ಷಣ ಸಂಸ್ಥೆಯ ಮುಖ್ಯಸ್ಥ ಕವೀಶ್‌ಗೌಡ ಅಭಿಮತ

ಮೈಸೂರು, ನ.26(ಎಸ್‌ಪಿಎನ್)– ಭಾರತೀಯ ಕಲೆಗಳನ್ನು ಪೋಷಿಸುವ ಹೊಣೆಗಾರಿಕೆ ನಮ್ಮ–ನಿಮ್ಮೆಲ್ಲರ ಜವಾಬ್ದಾರಿ ಎಂದು ಬಿಜೆಪಿ ಮುಖಂಡ ಹಾಗೂ ವಿದ್ಯಾ ವಿಕಾಸ ಶಿಕ್ಷಣ ಸಂಸ್ಥೆಯ ಮುಖ್ಯಸ್ಥ ಕವೀಶ್‌ಗೌಡ ಅಭಿಪ್ರಾಯಪಟ್ಟರು.

ಮೈಸೂರು ರಾಮಕೃಷ್ಣನಗರದ ರಮಾ ಗೋವಿಂದ ಕಲಾಮಂದಿರದಲ್ಲಿ ಅಭಿವ್ಯಕ್ತಿ ಸಂಸ್ಥೆ ವತಿಯಿಂದ ಆಯೋಜಿಸಿದ್ದ ಮೂರು ದಿನಗಳ ಕಾಲ ಆಯೋಜಿಸಿರುವ 'ನವೋಲ್ಲಾಸ', 'ನೃತ್ಯೋಲ್ಲಾಸ', 'ನೃತ್ಯೋನ್ನತಿ' ನೃತ್ಯ ಪ್ರದರ್ಶನಕ್ಕೆ ಶನಿವಾರ ಚಾಲನೆ ನೀಡಿ ಮಾತನಾಡಿದರು.

ಭಾರತೀಯ ಕಲೆಗಳನ್ನು ಇಂದಿನ ಮಕ್ಕಳಿಗೆ ಪರಿಚಯಿಸುವ ಜವಾಬ್ದಾರಿ ಶಿಕ್ಷಣ ಸಂಸ್ಥೆಗಳು ಹೆಚ್ಚಿನ ಆಸಕ್ತಿ ತೋರಬೇಕು. ಚಿಕ್ಕ ಮಕ್ಕಳಲ್ಲಿ ನೃತ್ಯ, ಚಿತ್ರಕಲೆ, ಸಾಹಿತ್ಯ, ನಾಟಕ ಸೇರಿದಂತೆ ಲಲಿತ ಕಲೆಗಳನ್ನು ಕಲಿಸಿದರೆ ಮಕ್ಕಳ ಮನಸ್ಸಿನ ಮೇಲಾಗುವ ಒತ್ತಡ ಕಡಿಮೆ ಮಾಡಲು ಸಹಕಾರಿಯಾಗುತ್ತವೆ ಎಂದರು.



ಅಭಿವ್ಯಕ್ತಿ ತಂಡದ ಕಲಾವಿದರು ಭರತನಾಟ್ಯ ಪ್ರದರ್ಶಿಸಿದರು

ಇಂದಿನ ಪರೀಕ್ಷೆಗೆ ಪೂರಕವಾಗಿ ವಿದ್ಯಾರ್ಥಿಗಳು ತಮ್ಮ ಶಾಲಾ ಜೀವನವನ್ನು ರೂಪಿಸಲಾಗುತ್ತಿದೆ ಹಾಗಾಗಿ ವಿದ್ಯಾರ್ಥಿಗಳಿಗೆ ಶಾಲಾ ಹಂತದಿಂದಲೇ ಒತ್ತಡ ಹೆಚ್ಚಾಗುತ್ತಿದ್ದು, ಇದನ್ನು ತಗ್ಗಿಸಲು ಪಠ್ಯೇತರ ಚಟುವಟಿಕೆಗಳ ಕಡೆ ಮಕ್ಕಳ ಆಸಕ್ತಿ ಬೆಳೆಸಲು ಪೋಷಕರು, ಶಿಕ್ಷಕರು ಮುಂದಾಗಬೇಕು ಎಂದು ಕಿವಿಮಾತು ಹೇಳಿದರು.

ನ್ಯೂರೋ ಸರ್ಜನ್ ಮತ್ತು ಹಿಂದೂಸ್ತಾನಿ ಗಾಯಕ ಡಾ.ಎಂ.ಎಸ್.ಭಾಸ್ಕರ್ ಮಾತನಾಡಿ, ಮಕ್ಕಳಿಗೆ ಓದು ಜೊತೆಗೆ ಕಲೆಗಳ ಪರಿಚಯ ಅಗತ್ಯವಿದೆ. ಭರತನಾಟ್ಯ, ಚಿತ್ರಕಲೆ, ಸಂಗೀತ, ನಾಟಕಗಳಲ್ಲಿ ತೊಡಗಿಸಿಕೊಳ್ಳುವುದರಿಂದ ಮನಸ್ಸಿನ ನೆಮ್ಮದಿ, ವೃತ್ತಿ ಜೀವನದಲ್ಲಿನ ಒತ್ತಡಗಳನ್ನು ನಿವಾರಿಸಿಕೊಳ್ಳಲು ಸಹಕಾರಿಯಾಗಲಿದೆ ಎಂದು ತಿಳಿಸಿದರು. ವೇದಿಕೆಯಲ್ಲಿ ವಿದುಷಿ ಸುಹಾಸಿನಿ ಕೌಲಗಿ ಸೇರಿದಂತೆ ಇತರರು ಉಪಸ್ಥಿತರಿದ್ದರು. ನಂತರ ಅಭಿವ್ಯಕ್ತಿ ತಂಡದ ಕಲಾವಿದರು ಭರತನಾಟ್ಯ ಪ್ರದರ್ಶಿಸಿದರು.

ರಂಗಪಾಪಣ್ಣ ವೃತ್ತದಲ್ಲಿ ಕನ್ನಡ ರಾಜ್ಯೋತ್ಸವ ಆಚರಣೆ



ಮೈಸೂರು, ನ.26(ಎಂಕೆ)– ನಗರದ ಮಂಡಿ ಮೊಹಲ್ಲಾದಲ್ಲಿರುವ ರಂಗಪಾಪಣ್ಣ ವೃತ್ತದಲ್ಲಿ 'ಕನ್ನಡ ರಾಜ್ಯೋತ್ಸವ' ಆಚರಿಸಲಾಯಿತು. ಧ್ವಜಾರೋಹಣ ನೆರವೇರಿಸಿದ ಬಿಜೆಪಿ ಮುಖಂಡ, ಕಾವೇರಿ ಕ್ರಿಯಾ ಸಮಿತಿ ಅಧ್ಯಕ್ಷ ಎಸ್.ಜಯಪ್ರಕಾಶ್ (ಜೆಪಿ) ಶಾಲಾ ಮಕ್ಕಳಿಗೆ ಪುಸ್ತಕಗಳನ್ನು ವಿತರಣೆ ಮಾಡಿದರು. ಬಳಿಕ ಮಾತನಾಡಿ, ಕನ್ನಡ ಪರ ಸಂಘ–ಸಂಸ್ಥೆಗಳು ಕನ್ನಡ ಭಾಷೆ ನೆಲ ಮತ್ತು ಜಲವನ್ನು ಉಳಿಸಿಕೊಳ್ಳಲು ಹೋರಾಟ ಮಾಡಬೇಕೆಂದು ಕರೆ ನೀಡಿದರು.

ಕನ್ನಡ ರಾಜ್ಯೋತ್ಸವದಲ್ಲಿ ಭಾಗವಹಿಸಿದ್ದ ವಿದೇಶಿಗರು(ಸ್ವಿಜರ್ಲ್ಯಾಂಡ್) ಎಲ್ಲರ ಗಮನ ಸೆಳೆದರು. ಬಿಜೆಪಿ ಎಸ್‌ಟಿ ಮೋರ್ಚಾ ಜಿಲ್ಲಾ ಉಪಾಧ್ಯಕ್ಷ ಡಿ.ಮಹೇಶ್ ನಾಯಕ, ಮುಖಂಡರಾದ ವಿಜಯ್ ಕುಮಾರ್, ಶ್ರೀನಿವಾಸ, ಸುಕುಮಾರ್, ರಘು, ಅಭಿ, ವಿಶ್ವ ಹಾಗೂ ಮಂಡಿ ಮೊಹಲ್ಲಾ ನಿವಾಸಿಗಳು ಉಪಸ್ಥಿತರಿದ್ದರು.

ವಕೀಲ ಕರೀಗೌಡರಿಗೆ 'ಕನ್ನಡ ವಿಕಾಸ ರತ್ನ' ಪ್ರಶಸ್ತಿ



ಮೈಸೂರು, ನ.26– ಕರ್ನಾಟಕ ರಾಜ್ಯ ಒಕ್ಕಲಿಗರ ವಿಕಾಸ ವೇದಿಕೆ ವತಿಯಿಂದ ಕೊಡಮಾಡುವ ರಾಜ್ಯಮಟ್ಟದ 'ಕನ್ನಡ ವಿಕಾಸ ರತ್ನ' ಪ್ರಶಸ್ತಿಗೆ ಕರ್ನಾಟಕ ಕಾವಲುಪಡೆ ರಾಜ್ಯ ಕಾರ್ಯದರ್ಶಿಯೂ ಆದ ವಕೀಲ ಡಿ.ಆರ್.ಕರೀಗೌಡ ಭಾಜನರಾಗಿದ್ದಾರೆ.

ವೇದಿಕೆ ವತಿಯಿಂದ ಕಲಾಮಂದಿರ ಆವರಣದ ಕಿರುರಂಗಮಂದಿರದಲ್ಲಿ ನ.30ರಂದು ನಡೆಯಲಿರುವ 'ಕನ್ನಡ ಹಬ್ಬ' ಸಮಾರಂಭದಲ್ಲಿ ಮೈಸೂರು ವಕೀಲರ ಸಂಘದ ಮಾಜಿ ಅಧ್ಯಕ್ಷ ಬಿ.ರಾಮಮೂರ್ತಿ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಕರೀಗೌಡರೊಂದಿಗೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಹಲವರಿಗೆ ಪ್ರಶಸ್ತಿ ಪ್ರದಾನ ಮಾಡಿ, ಅಭಿನಂದಿಸಲಾಗುತ್ತದೆ.

ವಿದ್ಯಾವರ್ಧಕ ಕಾಲೇಜಿನಿಂದ ಸ್ವಚ್ಛತಾ ಅಭಿಯಾನ

ಮೈಸೂರು, ನ 26– ವಿದ್ಯಾವರ್ಧಕ ಪದವಿ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನಾ ಘಟಕದ ವತಿಯಿಂದ ಸಯ್ಯಾಜಿ ರಾವ್ ಮುಖ್ಯ ರಸ್ತೆಯಲ್ಲಿರುವ ಶ್ರೀ ಗಾಯಿತ್ರಿ ವಿದ್ಯಾಸಂಸ್ಥೆಯ ಆವರಣವನ್ನು ಸ್ವಚ್ಛಗೊಳಿಸುವ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಐದು ತಾಸಿಗೂ ಹೆಚ್ಚು ಕಾಲ ವಿದ್ಯಾರ್ಥಿಗಳು ಶ್ರಮದಾನ ಮಾಡಿದರು. ಶಿಬಿರದಲ್ಲಿ 45 ಸ್ವಯಂ ಸೇವಕ, ಸೇವಕಿಯರು ಪಾಲ್ಗೊಂಡಿದ್ದರು. ಕಾಲೇಜಿನ ಪ್ರಾಂಶುಪಾಲ ಡಾ.ಎಸ್.ಮರೀಗೌಡ ಮಾತನಾಡಿ, ವಿದ್ಯಾರ್ಥಿ ಜೀವನದಲ್ಲಿ ಪದವಿ ಅಧ್ಯಯನದ ಜೊತೆಗೆ ಪಠ್ಯೇತರ ಚಟುವಟಿಕೆಯಲ್ಲಿ ಪಾಲ್ಗೊಳ್ಳುವುದರಿಂದ ವಿದ್ಯಾರ್ಥಿಗಳ ಬೌದ್ಧಿಕ ವಿಕಾಸದ ಜೊತೆಗೆ ಭೌತಿಕ ವಿಕಾಸವು ಆಗುವಲ್ಲಿ ರಾ.ಸೇ.ಯೋ ಕಾರ್ಯಚಟುವಟಿಕೆಗಳು ಪ್ರಮುಖ ಪಾತ್ರ ವಹಿಸುತ್ತವೆ ಎಂದು ಅಭಿಪ್ರಾಯಪಟ್ಟರು. ಕಾಲೇಜಿನ ರಾ.ಸೇ.ಯೋ ಕಾರ್ಯಕ್ರಮಾಧಿಕಾರಿ ಪ್ರೊ.ಸಿದ್ಧರಾಜು.ಎಸ್ ಹಾಗೂ ದೈಹಿಕ ಶಿಕ್ಷಣ ತರಬೇತುದಾರರಾದ ಡಾ.ಹರೀಪ್ರಸಾದ್.ಕೆ.ಎನ್ ಶ್ರಮದಾನದಲ್ಲಿ ಪಾಲ್ಗೊಂಡಿದ್ದರು.

ಭ್ರೂಣ ಹತ್ಯೆ ಪ್ರಕರಣಗಳಲ್ಲಿ ಭಾಗಿಯಾಗುವವರ ವಿರುದ್ಧ ಕ್ರಮ

ಬೆಂಗಳೂರು, ನ.26– ಭ್ರೂಣ ಹತ್ಯೆ ಪ್ರಕರಣಗಳಲ್ಲಿ ಭಾಗಿಯಾಗುವವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಭಾನುವಾರ ಹೇಳಿದರು.

ಭಾರತದ ಸಂವಿಧಾನ ದಿನ ಹಿನ್ನೆಲೆಯಲ್ಲಿ ಇಂದು ವಿಧಾನಸೌಧದ ಮುಂಭಾಗದಲ್ಲಿರುವ ಅಂಬೇಡ್ಕರ್ ಪ್ರತಿಮೆಗೆ ಪುಷ್ಪಾರ್ಚನೆ ಮಾಡಿದ ಬಳಿಕ ಅವರು ಮಾತನಾಡಿದರು.

ರಾಜ್ಯದಲ್ಲಿ ಭ್ರೂಣ ಹತ್ಯೆ ಪ್ರಕರಣ ಬೆಳಕಿಗೆ ಬಂದಿರುವ ವಿಚಾರವಾಗಿ ಪ್ರತಿಕ್ರಿಯಿಸುತ್ತಾ, ಯಾರೇ ತಪ್ಪು ಮಾಡಿದರೂ ಕಠಿಣ ಕ್ರಮ ತೆಗೆದುಕೊಳ್ಳುತ್ತೇವೆ. ಅದರ ಬಗ್ಗೆ ಒಂದು ಸಭೆ ಮಾಡಿ ಸೂಕ್ತ ಕ್ರಮದ ನಿರ್ಣಯ ಮಾಡುತ್ತೇವೆ ಎಂದು ಹೇಳಿದರು.

ಸುಶ್ರಾವ್ಯ ಗಾನ ಸುಧೆಯಲ್ಲಿ ತೇಲಿಸಿದ ಬಾಲ ಪ್ರತಿಭೆ ಸೂರ್ಯ ಗಾಯತ್ರಿ

ಸುಮಾರು ಮೂರು ತಾಸು ದಣಿವರಿಯದೇ ಸಭಿಕರ ಮನ ತಣಿಸಿದ ಗಾಯಕಿ



ಮೈಸೂರಿನ ನಾದಬ್ರಹ್ಮ ಸಂಗೀತ ಸಭಾದಲ್ಲಿ ಕರ್ನಾಟಕ ಶಾಸ್ತ್ರೀಯ ಸಂಗೀತ ಕಚೇರಿಯಲ್ಲಿ ಬಾಲ ಪ್ರತಿಭೆ ಸೂರ್ಯಗಾಯತ್ರಿ ಗಾಯನ ಸಾದರಪಡಿಸಿದರು.

ಮೈಸೂರು,ನ.26(ಪಿಎಂ)– ಸುಶ್ರಾವ್ಯವಾಗಿ ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ಗಾನ ಸುಧೆ ಸಾದರಪಡಿಸಿದ ಬಾಲ ಪ್ರತಿಭೆ ಸೂರ್ಯ ಗಾಯತ್ರಿ, ಶ್ರೋತೃಗಳನ್ನು ಮಂತ್ರ ಮುಗ್ಧಗೊಳಿಸಿದರು. ಸೂರ್ಯ ಗಾಯತ್ರಿ (17 ವರ್ಷ) ತಮ್ಮ ಕಂಠಸಿರಿಯ ಮೋಡಿ ಮೂಲಕ ದೇಶ–ವಿದೇಶ ಸಂಗೀತಾಸಕ್ತರ ಮನಸೂರೆಗೊಂಡಿರುವ ಉದಯೋನ್ಮುಖ ಬಾಲಪ್ರತಿಭೆ.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ನಾದಬ್ರಹ್ಮ ಸಂಗೀತ ಸಭಾದಲ್ಲಿ ಭಾನುವಾರ ರಾಗ ವೈಭವ ಚಾರಿಟಬಲ್ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ಕರ್ನಾಟಕ ಶಾಸ್ತ್ರೀಯ ಸಂಗೀತ ಕಚೇರಿಯಲ್ಲಿ ಈ ಬಾಲ ಗಾಯಕಿ ಸಭಿಕರನ್ನು ಸಂಗೀತದ ಸುಧೆಯಲ್ಲಿ ತೇಲಿಸಿದರು. ಸುಮಾರು ಮೂರು ತಾಸು ದಣಿವರಿಯದೇ ನಿರಂತರವಾಗಿ ಸೂರ್ಯಗಾಯತ್ರಿ ಹರಿಸಿದ ಸಂಗೀತ ಸುಧೆಗೆ ಕಿಕ್ಕಿರಿದು ನೆರೆದಿದ್ದ ಸಭಿಕರು ತಲೆದೂಗಿದರಲ್ಲದೆ, ಚಪ್ಪಾಳೆಯ ಮಳೆ ಸುರಿಸಿದರು.

ಲಾಲ್ಗುಡಿ ಜಿ.ಜಯರಾಮ್ ರಚನೆಯ ಪದವರ್ಣವನ್ನು (ತಮಿಳು) ಚಾರುಕೇಶಿ ರಾಗದಲ್ಲಿ ಸಾದರಪಡಿಸಿ, ಸಭಿಕರಲ್ಲಿ ಸಂಗೀತ ಹೊನಲು ಹರಿಸಿದರು. ಕಲ್ಯಾಣಿ ರಾಗಾಲಾಪನೆ ಮಾಡಿದ ಅವರು, ಮುತ್ತುಸ್ವಾಮಿ ದೀಕ್ಷಿತರು ರಚಿಸಿರುವ 'ಗಣಪತೇ ಮಹಾಮತೇ...' ಗೀತೆಯೊಂದಿಗೆ ಸಭಿಕರಲ್ಲಿ ಭಕ್ತಿಯ ಪರಾಕಾಷ್ಠೆ ಮೂಡಿಸಿದರು. ಸಂಸ್ಕೃತದ ಈ ಗೀತೆಯನ್ನು ಹಾಡುವ ಮೂಲಕ ಗಣೇಶನ ಸ್ಮರಣೆಯೊಂದಿಗೆ ಸಭಿಕರಲ್ಲಿಯೂ ಭಕ್ತಿಯ ಸಿಂಚನ ಮೂಡಿಸಿದರು.



ಸೂರ್ಯಗಾಯತ್ರಿ ಗಾಯನದ ಭಾವಭಂಗಿ

ಮುತ್ತುಸ್ವಾಮಿ ದೀಕ್ಷಿತರ 'ಅಖಿಲಾಂಡೇಶ್ವರಿ...' ಗೀತೆಯನ್ನು ಆದಿತಾಳದಲ್ಲಿ ಸಾದರಪಡಿಸಿದರಲ್ಲದೆ, ಪೂರ್ವಿ ಕಲ್ಯಾಣದ ರಾಗಾಪಾಪನೆಯೊಂದಿಗೆ ಪುರಂದರ ದಾಸರ 'ಆದದ್ದೆಲ್ಲ ಒಳಿತೇ ಆಯಿತು, ನಮ್ಮ ಶ್ರೀಧರನ ಸೇವೆಗೆ ಸಾಧನ ಸಂಪತ್ತಾಯಿತು...' ಗೀತೆಯನ್ನು ಹಾಡಿದರು.

'ಶರವಣಭವ ಎನ್ನಂ ತಿರು ಮಂದಿರಂ...' ಗೀತೆಯನ್ನು ಆದಿತಾಳದಲ್ಲಿ ಪ್ರಸ್ತುತಪಡಿಸಿ, ತ್ಯಾಗರಾಜರ ರಚನೆಯ 'ಇಂತ ಸೌಖ್ಯ...' ಗೀತೆಯನ್ನು ಕಾತಿ ರಾಗದಲ್ಲಿ ಹಾಡಿದರು. ಪುರಂದರದಾಸರ 'ಭಾಗ್ಯದ ಲಕ್ಷ್ಮೀ ಬಾರಮ್ಮ... ನಮ್ಮಮ್ಮ ನೀ... ಸೌಭಾಗ್ಯದ ಲಕ್ಷ್ಮೀ ಬಾರಮ್ಮ... ಗೀತೆಯನ್ನು ಹಾಡುವ ಮೂಲಕ ಸಭಿಕರಲ್ಲಿ ಮೋಡಿ ಮಾಡಿದರು. ಆ ಮೂಲಕ ಸುದೀರ್ಘ ಸಮಯದವರೆಗೆ ಹಾಡಿ, ಎಲ್ಲಿಯೂ ತಮ್ಮ ಲವಲವಿಕೆ ಬಿಟ್ಟುಕೊಡದೇ ಸಭಿಕರ ಮನಕ್ಕೆ ಲಗ್ಗೆ ಇಟ್ಟರು. ಪಕ್ಕವಾದ್ಯದಲ್ಲಿ ವಿದ್ವಾನ್ ಸನಿಲ್ (ಪಿಟೀಲು), ವಿದ್ವಾನ್ ಪಿ.ವಿ.ಅನಿಲ್‌ಕುಮಾರ್ (ಮೃದಂಗ) ಹಾಗೂ ವಿದ್ವಾನ್ ಕೃಷ್ಣಕುಮಾರ್ (ಘಟಂ) ಸಹಕಾರ ನೀಡಿದರು.

ಪರಿಚಯ: ಉತ್ತರ ಕೇರಳದ ವೇದಕರದ ಪುರಮೇರಿ ಗ್ರಾಮದ ಸೂರ್ಯ ಗಾಯತ್ರಿ, ಆನಂದಿ ಮತ್ತು ನಿಶಾಂತ್ ಅವರ ಶಿಷ್ಯೆ. ಪಿ.ವಿ.ಅನಿಲ್‌ಕುಮಾರ್ ಮತ್ತು ಪಿ.ಕೆ.ದಿವ್ಯ ದಂಪತಿ ಪುತ್ರಿಯಾದ ಸೂರ್ಯಗಾಯತ್ರಿ, ಕೇವಲ 10 ವರ್ಷವಿದ್ದಾಗಲೇ ಭಕ್ತಿ ಗೀತೆಗಳ ಗಾಯನದ ಮೂಲಕ ಕೇಳುಗರಲ್ಲಿ ಭಕ್ತಿಭಾವ ಮೂಡಿಸಿದ್ದರು. ಅದೇ ಹಾದಿಯಲ್ಲಿ ಸಾಧನೆಯ ಹೆಜ್ಜೆ ಹಾಕುತ್ತಿರುವ ಸೂರ್ಯಗಾಯತ್ರಿಗೆ ಕುಲದೀಪ್ ಪೈರವರು ಸಂಗೀತ ಮತ್ತು ಆಧ್ಯಾತ್ಮಿಕ ಮಾರ್ಗದರ್ಶಕರು.

ಮುಂಬೈನ ಷಣ್ಮುಖಾನಂದ ಸಭಾದಿಂದ ಹತ್ತು ವರ್ಷ ವಯಸ್ಸಿನಲ್ಲೇ ಸಂಗೀತದಲ್ಲಿ ಎಂ.ಎಸ್.ಸುಬ್ಬುಲಕ್ಷ್ಮೀ ಫೆಲೋಶಿಪ್ ಪಡೆದ ಹೆಗ್ಗಳಿಕೆ ಸೂರ್ಯಗಾಯತ್ರಿಗೆ ಸಲ್ಲುತ್ತದೆ. ಇಂದಿನ ಸಂಗೀತ ಕಚೇರಿಯಲ್ಲಿ ಮೃದಂಗದಲ್ಲಿ ಸಹಕಾರ ನೀಡಿದ ಅವರ ತಂದೆ ಪಿ.ವಿ.ಅನಿಲ್‌ಕುಮಾರ್ ಕೇರಳದಲ್ಲಿ ತಮ್ಮ ಕಲಾ ಕೌಶಲ್ಯ ಮರೆದು ಹೆಸರುವಾಸಿಯಾದವರು. ಉದ್ಯಮಿ ಆರ್.ಗುರು, ಸಂಗೀತ ತಜ್ಞೆ ಡಾ.ಪದ್ಮಾವತಿ ನರಸಿಂಹನ್, ರಾಗ ವೈಭವ ಚಾರಿಟಬಲ್ ಟ್ರಸ್ಟ್ ಕಾರ್ಯದರ್ಶಿ ಡಿ.ಕೀರ್ತಿಕುಮಾರ್, ಟ್ರಸ್ಟಿ ಡಾ.ಮಾಯ ಸೀತಾರಾಮ್ ಮತ್ತಿತರರು ಹಾಜರಿದ್ದರು.